# ಅಧ್ಯಾಯ 6

# “ಪರಿಪಕ್ವತೆಯೆಡೆಗೆ ಸಾಗಿರಿ”

## ಪರಿಪಕ್ವತೆಯೆಡೆಗೆ ಸಾಗಬೇಕೆಂದು ಎಚ್ಚರಿಕೆ ಮತ್ತು ಪ್ರಬೋಧನೆ (5:11-6:20) (ಮುಂದುವರೆದ ಭಾಗ)

ಕ್ರಿಸ್ತನ ಬೋಧನೆ, ಅಥವಾ ಸಿದ್ಧಾಂತದ ಒಂದು ಮೂಲಭೂತ ಗುರಿಯು ಪರಿಪಕ್ವತೆಯ ಕಡೆಗೆ ಸಾಗುವದೇ ಆಗಿರತಕ್ಕದ್ದು. ಇದು ಪೌಲನಿಗಿದ್ದ ಪ್ರಾಥಮಿಕವಾದ ಕಳಕಳಿಯಾಗಿತ್ತು, ಮತ್ತು ಅದು ನಮ್ಮ ಗುರಿಯು ಸಹ ಆಗಿರತಕ್ಕದ್ದು (ಫಿಲಿಪ್ಪಿ 3:12–14). ನಾವು ಕ್ರಿಸ್ತನಲ್ಲಿ ಪರಿಪೂರ್ಣರಾಗಿರುವ ಗುರಿಯನ್ನು ಬೆನ್ನಟ್ಟುವದಾದರೆ, ನಮ್ಮ ಜೀವಿತಗಳಿಗಾಗಿರುವ ದೇವರ ಚಿತ್ತವನ್ನು ಸಾಧಿಸುವದಕ್ಕೆ ನಾವು ಹತ್ತಿರವಾಗುತ್ತೇವೆ. ಇಬ್ರಿಯರಿಗೆ ಪತ್ರಿಕೆಯ ಬರಹಗಾರನು ಪರಿಪಕ್ವತೆಯಯ ಕಡೆಗೆ ಮುಂದುವರೆಯುವ ಈ ಯೋಚನೆಯನ್ನು ಇಬ್ರಿಯ 6ನೇ ಅಧ್ಯಾಯದ ಆರಂಭದಲ್ಲಿ ಒತ್ತಿ ಹೇಳುತ್ತಾನೆ.

### ಮತಭ್ರಷ್ಟತೆಯ ಎಚ್ಚರಿಕೆ (6:1-8)

#### 6:1-3

**[1]ಆದದರಿಂದ ನಿರ್ಜೀವಕರ್ಮಗಳ ಮೇಲಣ ನಂಬಿಕೆಯನ್ನು ಬಿಟ್ಟುಬಿಟ್ಟು ದೇವರಲ್ಲಿಯೇ ನಂಬಿಕೆಯಿಡಬೇಕಾದದ್ದು, [2]ಸ್ನಾನ ಹಸ್ತಾರ್ಪಣಗಳ ವಿಷಯವಾದ ಉಪದೇಶ, ಸತ್ತವರಿಗೆ ಪುನರುತ್ಥಾನವೂ ನಿತ್ಯವಾದ ನ್ಯಾಯತೀರ್ಪೂ ಉಂಟೆಂಬುದು ಇವುಗಳನ್ನು ಪದೇಪದೇ ಅಸ್ತಿವಾರವಾಗಿ ಹಾಕದೆ ಕ್ರಿಸ್ತನ ವಿಷಯವಾದ ಪ್ರಥಮ ಬೋಧನೆಯನ್ನು ಕುರಿತು ಇನ್ನೂ ಮಾತಾಡದೆ ಪೂರ್ಣವಾದ ತಿಳುವಳಿಕೆಗೆ ಸಾಗುತ್ತಾ ಹೋಗೋಣ. [3]ಮತ್ತು ದೇವರ ಚಿತ್ತವಾದರೆ ಹೀಗೆ ಸಾಗುತ್ತಾ ಹೋಗುವೆವು.**

**ವಚನ 1.** ಈ ಪರಿಚ್ಛೇದವು **ಆದದರಿಂದ** ಎಂಬುದರೊಂದಿಗೆ ಆರಂಭಗೊಳ್ಳುತ್ತದೆ, ಅದು ಈ ಮುಂಚೆ ಹೇಳಿದ್ದರೊಂದಿಗೆ ಜೋಡನೆ ಮಾಡುವದಾಗಿದೆ. ಒಬ್ಬನು ಹೇಗೆ ಪರಿಪಕ್ವತೆಯ ಕಡೆಗೆ ಸಾಗುತ್ತಾನೆಂಬುದನ್ನು ಲೇಖಕನು ಇನ್ನು ಸ್ವಲ್ಪದರಲ್ಲಿ ಹೇಳಲಿದ್ದನು. ಬೆಳೆಯುವದಕ್ಕಿರುವ ಅಗತ್ಯತೆ ಮತ್ತು ಬೆಳವಣಿಗೆ ಸಹಜತೆಯನ್ನು ತೋರಿಸಿ ಕೊಟ್ಟವನಾಗಿ, ಅದನ್ನು ಹೇಗೆ ಮಾಡಬೇಕೆಂಬುದನ್ನು ಮುಂದೆ ಆತನು ತನ್ನ ವಾಚಕರಿಗೆ ತಿಳಿಸುತ್ತಾನೆ.

ಲೇಖಕನು **ಹೋಗೋಣ** ಎಂಬುದನ್ನು ಬಳಸಿದ್ದು ಆತನು ತನ್ನನ್ನು ತಾನು ಸೂಚಿಸಿ ಹೇಳುತ್ತಿರುವ ಎಳೆಕೂಸಿನಂತಿದ್ದ ಕ್ರೈಸ್ತರೊಳಗೆ ಒಬ್ಬನೆಂದು ಪರಿಗಣಿಸಿಕೊಂಡನೆಂದು ಅರ್ಥವಾಗುವದಿಲ್ಲ. “ಹೋಗೋಣ” (ನಾವು) ಎಂಬ ಬಳಕೆಯು 2:3ರಲ್ಲಿರುವ “ನಾವು” ಎಂಬುದಕ್ಕೆ ಹೋಲಿಕೆಯಾಗಿರುತ್ತದೆ, ಇದನ್ನು ಬಳಸಿಕೊಂಡು ಪೌಲನು ಲೇಖಕನಾಗಿರ ಲಾರನು ಎಂದು

ಹೇಳಲಾಗುತ್ತದೆ. ಲೇಖಕನು 6:1ರಲ್ಲಿನ "ನಾವು" ಎಂಬುದರಲ್ಲಿ ನಿಜವಾಗಿಯೂ ಇರಲಿಲ್ಲವಾದ್ದರಿಂದ, ಆತನು 2:3ರಲ್ಲಿನ "ನಾವು" ಎಂಬುದರಲ್ಲಿ ಸಹ ಇದ್ದಿರಲಾರನು. ಈ ವಾಕ್ಯಭಾಗವು ಪೌಲನು ಲೇಖಕನಾಗಿರಬಹುದಾದ ಸಾಧ್ಯತೆಯನ್ನು ಅಳಿಸಿ ಹಾಕುವದಿಲ್ಲ.

ಈ **ಪ್ರಥಮ ಬೋಧನೆ**ಯು *ಕ್ರಿಸ್ತನ ಕುರಿತಾದ ಬೋಧನೆಯೋ ಅಥವಾ ಕ್ರಿಸ್ತನಿಂದ ಮಾಡಲ್ಪಟ್ಟ ಪ್ರಾಥಮಿಕ ಬೋಧನೆಯೋ?* KJVಯಲ್ಲಿ "ಕ್ರಿಸ್ತನ ಸಿದ್ಧಾಂತದ ಪ್ರಥಮ ಪಾಠಗಳನ್ನು" ಎಂದಿರುತ್ತದೆ. ಗ್ರೀಕ್ ವಾಕ್ಯದಲ್ಲಿರುವ ಪದಗುಚ್ಛವು ಅಕ್ಷರಶಃ "ಕ್ರಿಸ್ತನ ವಾಕ್ಯದ ಆರಂಭ" ಎಂದಾಗಿರುತ್ತದೆ. ಆರಂಭದಲ್ಲಿ ನುಡಿಯಲ್ಪಟ್ಟ ಕರ್ತನ ವಾಕ್ಯವು ರಕ್ಷಣೆಗೆ ಸಂಬಂಧಿಸಿದ್ದಾಗಿದೆ (2:3), ಅದು ಈ ಪದಗುಚ್ಛ *ಕ್ರಿಸ್ತನಿಂದ ಮಾಡಲ್ಪಟ್ಟ ಪ್ರಾಥಮಿಕ ಬೋಧನೆಗಳು* ಎಂದು ಸೂಚಿಸುತ್ತದೆಂಬ ಸೂಚನೆಯನ್ನು ನೀಡುತ್ತದೆ. ಈ ವಾಕ್ಯಭಾಗದಲ್ಲಿ ಕೊಡಲಾಗಿರುವ ಕೇವಲ *ಕ್ರಿಸ್ತನ ಕುರಿತ ಬೋಧನೆ*ಯನ್ನು ಮಾತ್ರವೇ ಒಳಗೊಂಡಿರುವದಿಲ್ಲ. ಇಲ್ಲಿ ಪ್ರಸ್ತಾಪಿಸಲಾಗಿರುವ ಆರು ಅಂಶಗಳು ಯೆಹೂದಿ, ಅಥವಾ ಹಳೆಯ ಒಡಂಬಡಿಕೆಯ ಬೋಧನೆಗಳಾಗಿರುತ್ತವೆ. ಹೇಗೂ, ಅತ್ಯಂಥ ಆದಿಯ ಸಮಯಗಳಿಂದಲೂ, ಸಭೆಯು ಇವುಗಳನ್ನು "ನಿರ್ದಿಷ್ಟವಾಗಿ ಕ್ರೈಸ್ತ ಸಿದ್ಧಾಂತಗಳು"[1] ಎಂದು ಅರ್ಥಮಾಡಿಕೊಂಡಿತ್ತೆಂಬ ವಾಸ್ತವಾಂಶದಿಂದ ಈ ಯೋಚನೆಯು ಖಂಡನೆಗೊಳಗಾಗಿರುತ್ತದೆ.

ಈ ಯೋಚನೆಯನ್ನು ವ್ಯಕ್ತಪಡಿಸುವ ಒಂದು ರೀತಿಯೆಂದರೆ, ಮಾತುಗಳು ಮೂಲಭೂತವಾಗಿ ಕ್ರೈಸ್ತ ಬೋಧನೆಗಳ ಕುರಿತಾಗಿದ್ದು ಹಳೆಯ ಯೆಹೂದಿ ಬೋಧನೆಗಳ ಕುರಿತಲ್ಲ ಎಂದಾಗಿದ್ದರೂ, "ವಾಚಕರು ಕ್ರಿಸ್ತನ ಬಳಿಗೆ ಕರೆತರಲ್ಪಟ್ಟ ವೇಳೆ ಅವರು ಮುಂಚೆ ಯೆಹೂದ್ಯರಾಗಿ ಕಲಿತುಕೊಂಡಿದ್ದವುಗಳನ್ನು ಸೂಚಿಸುತ್ತವೆ."[2] ಧರ್ಮಶಾಸ್ತ್ರದ ಅಂಶವು ಒಂದು ಕ್ರೈಸ್ತೀಯ ಸನ್ನಿವೇಶದಲ್ಲಿ ಹೊಸ ಮಹತ್ವಪೂರ್ಣತೆಯನ್ನು ಹೊಂದಿಕೊಂಡಿತ್ತು.[3]

ಇಬ್ರಿಯರಿಗೆ ಪತ್ರಿಕೆಯ ಪ್ರಕಾರವಾಗಿ, ಪರಿಪಕ್ವತೆಗೆ ಮೊದಲ ಹೆಜ್ಜೆಯು ನಿರಂತರವಾದದ್ದಾಗಿದೆ: ಮುಂದೆ **ಸಾಗುತ್ತಾ ಹೋಗುವದ**ಕ್ಕೆ ಸಮರ್ಪಣೆ. **ಪರಿಪೂರ್ಣವಾದ ತಿಳುವಳಿಕೆ** (τελειότης, *teleiotēs*) ಎಂಬುದು "ಪೂರ್ಣವಾಗಿ ಬೆಳೆದ" ಅಥವಾ "ಪರಿಪೂರ್ಣ" ಎಂದು ಸಹ ಅನುವಾದಿಸಲ್ಪಟ್ಟಿದೆ. ಅದು ಪರಿಪೂರ್ಣವಾಗುವ ಅಥವಾ ಪೂರ್ಣಗೊಳ್ಳುವದನ್ನು ಬಣ್ಣಿಸುತ್ತದೆ. ಕ್ರೈಸ್ತನು ಹಿಂದಕ್ಕೆ ಬೀಳಬಾರದು ಅಥವಾ ಕೈ ಬಿಟ್ಟು ಬಿಡಬಾರದು; ಆತನು ಆತ್ಮೀಕತೆಯನ್ನು ಸಾಧಿಸಿಕೊಳ್ಳಲು ಮತ್ತು ದೇವರ ಸತ್ಯಗಳ ಕುರಿತ ಆಳವಾದ ತಿಳುವಳಿಕೆಯನ್ನು ಹೊಂದಿಕೊಳ್ಳಲು ಸಾಗುತ್ತಾ ಹೋಗಬೇಕು.

ಕ್ರಿಸ್ತನ ಆಳವಾದ ಸಂಗತಿಗಳನ್ನು ಸ್ವೀಕರಿಸಿಕೊಂಡು ಅರ್ಥಮಾಡಿಕೊಳ್ಳಲು "ಪರಿಪಕ್ವ"ವುಳ್ಳವರು ಅಲ್ಲದೆ ಬೇರೆ ಯಾರೂ ಅರ್ಥಮಾಡಿಕೊಳ್ಳಲಾರರಾದ್ದರಿಂದ, ಈ ಕ್ರೈಸ್ತರು ಪರಿಪಕ್ವತೆಯ ಕಡೆಗೆ ಸಾಗು ಹೋಗುವದು ಅವಸರದ ಕಾರ್ಯವಾಗಿತ್ತು. ಇನ್ನೂ ಪ್ರಾಥಮಿಕ ಕಾರ್ಯಗಳನ್ನು ಕಲಿಯಬೇಕಾಗಿ ಬಂದದ್ದಕ್ಕಾಗಿ ಅವರನ್ನು ಖಂಡಿಸಿದ ಬಳಿಕ (5:12), ಲೇಖಕನು ಆ ಸಂಗತಿಗಳನ್ನು ಮತ್ತೊಂದು ಸಾರಿ ಅವರಿಗೆ ಕಲಿಸಬೇಕೆಂಬ ಅಪೇಕ್ಷೆಯನ್ನು ಹೊಂದಿರಬಹುದಾಗಿದೆ. ಬದಲಾಗಿ, ಆತನು ಕ್ರಿಸ್ತನ ಮಹಾಯಾಜಕತ್ವದ ಕುರಿತು ಇನ್ನಷ್ಟು ವಿವರಣೆಯನ್ನು ಕೊಡುವ ಮೂಲಕ ಅವರ ತಿಳುವಳಿಕೆಯನ್ನು ವಿಸ್ತರಿಸುತ್ತಾನೆ.

"ಪರಿಪೂರ್ಣವಾದ ತಿಳುವಳಿಕೆಗೆ [ಪರಿಪಕ್ವತೆಗೆ] ಸಾಗುತ್ತಾ ಹೋಗಿರಿ" ಎಂಬ ಪದಗುಚ್ಛದ ಅರ್ಥವು *ಆತ್ಮೀಕ* ಪರಿಪಕ್ವತೆಗಾಗಿ ಪರಿಶ್ರಮ ಪಡಿರಿ ಎಂದಾಗಿರುತ್ತದೆ. ಈ ಅನ್ವೇಷಣೆಯು ಪಾಪರಹಿತ ಪರಿಪೂರ್ಣತೆಯನ್ನು ಸೂಚಿಸುವದಿಲ್ಲ. ಅಂತಹದ್ದು ನಮ್ಮ ಆದರ್ಶವಾದ ಗುರಿಯಾಗಿರತಕ್ಕದ್ದು (ಫಿಲಿಪ್ಪಿ 3:12-15), ಆದರೆ ಈ ಜೀವನದಲ್ಲಿ ಒಬ್ಬ ವ್ಯಕ್ತಿಯು ಪಾಪವನ್ನು

ಸಂಪೂರ್ಣವಾಗಿ ಜಯಿಸಬಲ್ಲನೋ? ಈ ಪ್ರಶ್ನೆಯು ಒಂದು ರೀತಿಯಲ್ಲಿ "ಒಬ್ಬ ಮನುಷ್ಯನು ಹೇಗೆ ಜಿಗಿಯಬಲ್ಲನು?" ಎಂದು ಕೇಳುವಂತಿರುತ್ತದೆ. ದಾಖಲೆಯು ಹೆಚ್ಚು ಕಡಿಮೆ ಪ್ರತಿ ವರ್ಷವೂ ದಾಟಿ ಹೋಗುವಂತೆ ತೋರುತ್ತದೆ, ಆದರೆ ಒಂದು ಮಿತಿಯು ಇರತಕ್ಕದ್ದೆಂದು ನಾವು ಬಲ್ಲೆವು. ಇಲ್ಲಿ ಪರಿಗಣಿಸಲ್ಪಟ್ಟಿರುವ *ಪರಿಪೂರ್ಣತೆಯು,* "ಅವಳೊಬ್ಬ ಪರಿಪೂರ್ಣ ಕೂಸು!" ಎಂದು ಹೇಳಿದಂತೆ ಇರುತ್ತದೆ. ಇದರ ಮೂಲಕ, ನಮ್ಮ ತಾತ್ಪರ್ಯವೇನೆಂದರೆ ಒಂದು ಎಳೆಗೂಸು ಎಲ್ಲಾ ದೇಹದ ಅಂಗಗಳನ್ನು ಹೊಂದಿದೆ ಮತ್ತು ಒಂದು ಸಂಪೂರ್ಣ ಹಾಗೂ ಸಹಜವಾದ ಮಗುವಿಗಿರಬೇಕಾದ ಎಲ್ಲಾ ಚಟುವಟಿಕೆಗಳನ್ನು ಹೊಂದಿದೆ ಎಂಬದೆ.

**ಅಸ್ತಿವಾರ**ವು ಯಾವದೇ ಕಟ್ಟಡದ ಬಲಕ್ಕೆ ಜೀವಧಾರಕವಾಗಿರುತ್ತದೆ, ಆದರೆ ಒಬ್ಬನು ತನ್ನೆಲ್ಲಾ ಸಮಯವನ್ನು ಅಸ್ತಿವಾರ ಹಾಕುವದರಲ್ಲಿಯೇ ಕಳೆಯುವದು ಬುದ್ಧಿವಂತಿಕೆಯಾಗಿರುವದಿಲ್ಲ. ಕೆಲವರು ಸುವಾರ್ತೆಯ ಮೂಲಭೂತ ಅಂಶಗಳನ್ನು ಚರ್ಚಿಸುವದರಲ್ಲಿಯೇ ಬಹಳವಾಗಿ ತಲ್ಲೀನರಾಗಿ ದೇವರ ವಾಕ್ಯದಲ್ಲಿ ಅಡಕವಾಗಿರುವ ಉನ್ನತವಾದ ಅಂಶಗಳನ್ನು ಕಳಕೊಂಡಿರುತ್ತಾರೆ (ಮತ್ತಾಯ 23:23). ಸುವಾರ್ತೆಯ ಪ್ರಾಥಮಿಕ ಅಂಶಗಳನ್ನು ನಿಯತಕ್ರಮವಾಗಿ ಕಲಿಸಬಾರದೆಂಬುದು ಇದರ ಅರ್ಥವಾಗಿರುವದಿಲ್ಲ. ಎಲ್ಲಾ ಪೀಳಿಗೆಯಲ್ಲಿಯೂ ಕ್ರೈಸ್ತರು ಸತ್ಯದಲ್ಲಿ ಚೆನ್ನಾಗಿ ನೆಲೆಯೂರಿಲ್ಲವಾದರೆ ತಪ್ಪಿ ಹೋಗುವ ಅಪಾಯವನ್ನು ಎದುರಿಸುವವರಾಗಿರುತ್ತಾರೆ.

ನಕಾರಾತ್ಮಕ ದಿಸೆಯಲ್ಲಿ ಸಾಗುವವನಾಗಿ, ಲೇಖಕನು ತನ್ನ ವಾಚಕರಿಗೆ "ಪ್ರಥಮ ಬೋಧನೆ"ಯನ್ನು **ಬಿಟ್ಟುಬಿಟ್ಟು** ಸಾಗುವಂತೆ ಆದೇಶ ಮಾಡುತ್ತಾನೆ. "ಅಸ್ತಿವಾರ" ಮತ್ತು "ಪ್ರಥಮ ಬೋಧನೆ" ಎಂಬ ಬಿರುದುಗಳು ಒಂದೇ ಆಗಿರತಕ್ಕದ್ದು, ಆದರೆ ಅವುಗಳು ಏನಾಗಿವೆ? ಅವುಗಳು ಈ ವಾಕ್ಯಭಾಗದಲ್ಲಿ ಎರಡೆರಡಾಗಿ ಪಟ್ಟಿ ಮಾಡಲಾಗಿರುವ ಆರು ಅಂಶಗಳಾಗಿ ಮುಂದಿಡಲ್ಪಟ್ಟಿರುತ್ತವೆ. ಮೊದಲ ಎರಡು ಅಂಶಗಳು "ಆರಂಭಿಕ ಅನುಭವಗಳು, ಮುಂದಿನ ಎರಡು ಕಾರ್ಯಗಳು ಸಾಂಕೇತಿಕ ವ್ಯಕ್ತಪಡಿಸುವಿಕೆಗಳು, ಮತ್ತು [ಕಡೇ] ಎರಡು ಕಾರ್ಯಗಳು ಮುಂದಣ ಕಾಲದ ಘಟನೆಗಳಾಗಿರುತ್ತವೆ."[4]

ಪಟ್ಟಿಯು ಒಂದು ಜೀವಂತವಾಗಿರುವ ಕ್ರೈಸ್ತ ನಂಬಿಕೆಯ ಎರಡು ಮೂಲಭೂತಗಳೊಂದಿಗೆ ಆರಂಭಗೊಳ್ಳುತ್ತದೆ: **ನಿರ್ಜೀವಕರ್ಮಗಳಿಂದ ಮಾನಸಾಂತರ** ಮತ್ತು **ದೇವರಲ್ಲಿಯೇ ನಂಬಿಕೆಯಿಡುವದು**.[5]

ನಾವು ಪಾಪದಿಂದ ಮುಕ್ತವಾದ ಕ್ರೈಸ್ತ ನಡೆಯನ್ನು ಹೊಂದಬೇಕೆಂಬ ನಮ್ಮ ತೀರ್ಮಾನದ ಆರಂಭದಲ್ಲಿಯೇ ನಾವು ಮಾನಸಾಂತರ (μετάνοια, *metanoia*; "ಒಂದು ಮನಸ್ಸು ಬದಲಾವಣೆ") ಪಡಬೇಕು. ಆದದರಿಂದ ಪಶ್ಚಾತ್ತಾಪವು ಅಸ್ತಿವಾರವಾಗಿದೆ, ಕ್ರೈಸ್ತ ಜೀವನದ ಮೊದಲ ಪದರು ಆಗಿರುತ್ತದೆ. ಅದು ರಾಜ್ಯದ ಬರೋಣಕ್ಕಾಗಿ ಸಿದ್ಧಮಾಡುವದರಲ್ಲಿ ಯೆಹೂದಿ ಹಿನ್ನಲೆಯವರಿಗೆ ಬೋಧಿಸಿದ ಕಾರ್ಯಗಳಲ್ಲಿ ಮೊದಲನೆಯದ್ದಾಗಿತ್ತು (ಮಾರ್ಕ 1:4, 14, 15; ಅಪೊಸ್ತಲರ ಕೃತ್ಯಗಳು 2:38; 3:19; 5:31).

"ವ್ಯಥೆಪಡು" ಎಂಬುದು ಅದೇ ರೀತಿಯ ಪದವಾಗಿದೆ (μεταμέλομαι, *metamelomai*). ಈ ಪದವು ಮತ್ತಾಯ 27:3ರೊಳಗೆ ಯೂದನ ಸಂಬಂಧದಲ್ಲಿ ಬಳಸಲ್ಪಟ್ಟಿದೆ: "ಆತನು ತನ್ನಲ್ಲಿ *ಪಶ್ಚಾತ್ತಾಪಪಟ್ಟನು"* (KJV). NASBಯಲ್ಲಿ "ವಿಷಾದಪಟ್ಟನು" ಎಂದಿರುತ್ತದೆ, ಅದು ಒಂದು ಹೆಚ್ಚು ನಿಖರವಾದ ಅನುವಾದವಾಗಿರುತ್ತದೆ. ಆ ಎರಡೂ ಪದಗಳನ್ನು ಪೌಲನು 2 ಕೊರಿಂಥ 7:7–10ರಲ್ಲಿ ಬಳಸುತ್ತಾನೆ, ಅಲ್ಲಿ ಇತ್ತೀಚಿನ ಅನುವಾದಗಳಲ್ಲಿನ ವ್ಯತ್ಯಾಸವು ಸುಲಭವಾಗಿ ಕಾಣಬಹುದಾಗಿದೆ. ನಿಜವಾದ ಪಶ್ಚಾತ್ತಾಪವು ಅಥವಾ ಮಾನಸಾಂತರವೂ ನಮ್ಮ ಪಾಪವು

ದೇವರಿಗೆ ನೋವುಂಟು ಮಾಡಿದೆ ಎಂಬ ವಾಸ್ತವಾಂಶಕ್ಕಾಗಿ ದುಃಖಿಸು ವದನ್ನು ಒಳಗೊಂಡಿರುತ್ತದೆ, ಅದರ ಜೊತೆಗೆ ಬದಲಾವಣೆಯನ್ನು ಮಾಡಿಕೊಳ್ಳದಿದ್ದರೆ ನಿತ್ಯನಾಶನದ ತೀರ್ಪನ್ನು ಹೊಂದುವೆವೆಂಬ ಅರಿವು ಇರತಕ್ಕದ್ದಾಗಿದೆ (ಲೂಕ 13:3; ಅಪೊಸ್ತಲರ ಕೃತ್ಯಗಳು 17:30, 31). ಒಂದು ನಿಜವಾದ ಪಶ್ಚಾತ್ತಾಪದ ಇನ್ನಷ್ಟು ಪೂರ್ಣವಾದ ಬಣ್ಣನೆಯು ಹೀಗಿರುತ್ತದೆ: ಪಶ್ಚಾತ್ತಾಪವು ಒಬ್ಬನು ತನ್ನ ಮನಸ್ಸನ್ನು ಮತ್ತು ಮನೋಭಾವವನ್ನು ಬದಲಾಯಿಸಿಕೊಳ್ಳುವದು, ಪಾಪವನ್ನು ಪರಿತ್ಯಜಿಸಿ ದೇವರಿಗೆ ಹೃದಯ ವೇದನೆಯನ್ನುಂಟು ಮಾಡಿದ್ದಕ್ಕಾಗಿ ಆತನ ಕಡೆಗೆ ದುಃಖದಿಂದ ತಿರುಗಿಕೊಳ್ಳುವದರಲ್ಲಿ ಒಬ್ಬನು ತನ್ನ ಜೀವಿತಕ್ಕೆ ಹೊಸ ದಿಕ್ಕನ್ನು ತೋರುವದು. ಅದರಲ್ಲಿ ಪಾಪದಿಂದ ವಿಮುಖರಾಗಿ ನಮ್ಮ ಏಕೈಕ ಸಂಭಾವ್ಯ ರಕ್ಷಕನಾಗಿ ಕರ್ತನ ಮೇಲೆ ಅವಲಂಭಿತರಾಗುವ ಮೂಲಕ ಹೊಸ ಜೀವನದ ದಾರಿಗೆ ತಿರುಗಿಕೊಳ್ಳುವದು ಸೇರಿರುತ್ತದೆ. Gareth L. Reeseನು ಅದನ್ನು ಹೆಚ್ಚು ಸರಳವಾಗಿ ಅರ್ಥನಿರೂಪಿಸುತ್ತಾ ಹೀಗೆ ಹೇಳುತ್ತಾನೆ, ಅದು “ಒಂದು ಬದಲಾದ ಮನಸ್ಸು ಮತ್ತು ಒಂದು ಬದಲಾದ ಕ್ರಿಯೆಯಾಗಿರುತ್ತದೆ, ಅದು ಪಾಪಕ್ಕಾಗಿ ದೈವಿಕ ದುಃಖಪಡುವಿಕೆ, ಮತ್ತು ಸಾಧ್ಯವಾದ ಕಡೆಯಲ್ಲಿ ನಷ್ಟಭರ್ತಿ ಮಾಡುವಿಕೆಯಲ್ಲಿ ಫಲಿತಗೊಳ್ಳುವದಾಗಿರುತ್ತದೆ.”[6]

ಅಪೊಸ್ತಲರ ಕೃತ್ಯಗಳು 3:19ರಲ್ಲಿ ಪಾಪಿಗಳಿಗೆ “ಪಶ್ಚಾತ್ತಾಪಪಟ್ಟು ಹಿಂದಿರುಗಿರಿ” (“ತಿರುಗಿಕೊಳ್ಳಿರಿ”; NIV) ಎಂದು ಹೇಳಲಾಗಿರುತ್ತದೆ. ಇದನ್ನು ಅಪೊಸ್ತಲರ ಕೃತ್ಯಗಳು 2:38ರೊಂದಿಗೆ ಹೋಲಿಸುವಾ, ಪಶ್ಚಾತ್ತಾಪ ಪಡುವಿಕೆಯ ಮುಂಚೆ ಹಿಂದಿರುಗಿಕೊಳ್ಳುವ ಕ್ರಿಯೆಯು ಬರುತ್ತದೆ. ಇದು ಹೀಗಿರುವಾಗ, ಪಶ್ಚಾತ್ತಾಪವು ಒಬ್ಬನ ಮನಸ್ಸನ್ನು ಅಥವಾ ಒಬ್ಬನ ಚಿತ್ತವನ್ನು ಬದಲಾಯಿಸಿಕೊಳ್ಳುವದು ಆಗಿರತಕ್ಕದ್ದು; ಅಂಥ ಬದಲಾವಣೆಯ ನಂತರದಲ್ಲಿ, ಆತನು ತನ್ನ ಪಾಪಗಳಿಂದ ವಿಮುಖನಾಗುತ್ತಾನೆ. ಹಾಗಾದರೆ ಈ “ತಿರುಗಿಕೊಳ್ಳುವಿಕೆ,” ದೀಕ್ಷಾಸ್ನಾನ ಮಾಡಿಸಿಕೊಳ್ಳುವದಕ್ಕೆ ಸಮಾನವಾಗಿರುತ್ತದೆ.

“ನಿರ್ಜೀವಕರ್ಮಗಳು” ಇಲ್ಲಿ ಮತ್ತು 9:14ರಲ್ಲಿ ಮಾತ್ರವೇ ಸಿಕ್ಕುತ್ತದೆ.[7] “ನಿರ್ಜೀವ” ಎಂಬ ಪದವು ಸಾಮಾನ್ಯವಾಗಿ ನಂಬಿಕೆಗೆ ಅನ್ವಯಿಸಲ್ಪಡುತ್ತದೆ (ಯಾಕೋಬ 2:17), ದೇಹಕ್ಕೆ (ರೋಮಾ 8:10), ಮತ್ತು ಒಬ್ಬ ವ್ಯಕ್ತಿಯ ಆತ್ಮೀಕ ಸ್ಥಿತಿಗೆ ಅನ್ವಯಿಸಲ್ಪಡುತ್ತದೆ (ರೋಮಾ 6:11; ಎಫೇಸ 2:1, 5; ಕೊಲೊಸ್ಸೆ 2:13). “ನಿರ್ಜೀವಕರ್ಮಗಳಲ್ಲಿ” ಮುಂದುವರೆಯುವದು ಮರಣಕ್ಕೆ ನಡಿಸುತ್ತದೆ (ರೋಮಾ 6:21-23).

ನಿರ್ಜೀವತೆಯು “ನಮ್ಮ ಮನಸ್ಸಾಕ್ಷಿಯನ್ನು ಮರಣಕ್ಕೆ ನಡಿಸುವ ಕ್ರಿಯೆಗಳಿಂದ ಶುದ್ಧಮಾಡಿಕೊಳ್ಳು[ವದನ್ನು]” ಸೂಚಿಸುತ್ತದೆ ಎಂದು Simon J. Kistemaker ನಂಬುತ್ತಾನೆ.[8] “ನಿರ್ಜೀವಕರ್ಮಗಳನ್ನು” ಕೇವಲ ಧರ್ಮಶಾಸ್ತ್ರದ ಅಡಿಯಲ್ಲಿ ಮಾಡಲ್ಪಟ್ಟ ಕ್ರಿಯೆಗಳಿಗೆ ಸೀಮಿತಗೊಳಿಸಿದರೆ ಅದು ಅತ್ಯಂಥ ನಿರ್ಬಂಧಕರವಾಗುತ್ತದೆ. ಒಳ್ಳೇ ಕ್ರಿಯೆಗಳು ಮಾತ್ರವೇ ರಕ್ಷಣೆಯನ್ನು ಕೊಡುವದಕ್ಕೆ ಸಾಧ್ಯವಿಲ್ಲವಾದರೆ, ಪಾಪಕೃತ್ಯಗಳು ಆತ್ಮೀಕ ಮರಣಕ್ಕೆ ನಡಿಸುವದಿಲ್ಲ. ಪಾಪಿಯು ಕ್ರಿಸ್ತನ ಕಡೆಗೆ ತಿರುಗಿಕೊಳ್ಳುವ ವೇಳೆ ಅಂಥ ಕೃತ್ಯಗಳಿಂದ ತಿರುಗಿಕೊಳ್ಳಬೇಕು.

ಈ ಪಟ್ಟಿಯಲ್ಲಿರುವ ಎರಡನೆಯ ಕಾರ್ಯವು “ದೇವರಲ್ಲಿ [ಕಡೆಗೆ] ನಂಬಿಕೆ” ಎಂದಾಗಿರುತ್ತದೆ. ಈ ನಂಬಿಕೆಯು ದೇವರ ಸುತ್ತ ಕೇಂದ್ರಿಕೃತವಾಗಿದೆ, ಆತನು ಕ್ರಿಸ್ತನ ಕುರಿತಾಗಿ ಹಳೆಯ ಒಡಂಬಡಿಕೆಯಲ್ಲಿ ಸಿಕ್ಕುವ ಸತ್ಯಗಳನ್ನು ಪ್ರಕಟಗೊಳಿಸಿರುವಾತನಾಗಿದ್ದಾನೆ. ಪಶ್ಚಾತ್ತಾಪ ಮತ್ತು ನಂಬಿಕೆ ಎರಡೂ ಯೆಹೂದ್ಯರಿಗೆ ಮಾಡಲಾದ ಬೋಧನೆಯಲ್ಲಿನ ಸಾರಭೂತವಾಗ ಭಾಗವಾಗಿದ್ದವು, ಆದರೆ ಸಾಮಾನ್ಯವಾಗಿ ಪಶ್ಚಾತ್ತಾಪವು ಮೊದಲು

ಪ್ರಸ್ತಾಪಿಸಲ್ಪಡುತ್ತದೆ (ಮಾರ್ಕ 1:14, 15; ಅಪೊಸ್ತಲರ ಕೃತ್ಯಗಳು 20:21). ಇಬ್ರಿಯರು ಈಗಾಗಲೇ ದೇವರಲ್ಲಿ ನಂಬಿಕೆಯಿಟ್ಟಿದ್ದರು, ಆದರೆ ಅವರು ಆತನ ಕಡೆಗೆ ಪಶ್ಚಾತ್ತಾಪ ಪಟ್ಟು ನಂತರ ಯೇಸುವಿನಲ್ಲಿ ನಂಬಿಕೆಯಿಡುವ ಅಗತ್ಯವಿತ್ತು. ಈ ಪತ್ರಿಕೆಯು ನಂಬಿಕೆಯನ್ನು ವಿಶ್ವಾಸ ಮತ್ತು ವಿಧೇಯತೆಯ ಮೇಲೆ ಒತ್ತು ಕೊಡುವಂತಹ ಒಂದು ಕ್ರಿಯಾಶಕ್ತ ಶಕ್ತಿಯಾಗಿ ಪ್ರಸ್ತುತಪಡಿಸುತ್ತದೆ. ಈ ಕ್ರಿಯಾತ್ಮಕ ನಂಬಿಕೆಯ ಗುಣಸ್ವಭಾವವು 11ನೇ ಅಧ್ಯಾಯದಲ್ಲಿ, ಮಾತ್ರವಲ್ಲದೆ 4:2; 6:12; 10:22, 38, 39; 12:2; 13:7ರಲ್ಲಿ ಸಹ ಪ್ರಕಟಿಸಲ್ಪಟ್ಟಿದೆ.

**ವಚನ 2.** ಮುಂದೆ ಪಟ್ಟಿ ಮಾಡಲಾಗಿರುವ ಎರಡು ಕಾರ್ಯಗಳು ಸಾಂಕೇತಿಕವಾದ ವ್ಯಕ್ತಪಡಿಸುವಿಕೆಗಳಾಗಿವೆ: **ಸ್ನಾನ** ಮತ್ತು **ಹಸ್ತಾರ್ಪಣಗಳು**.

ಕ್ರಿಸ್ತನ ಬೋಧನೆಯಿಂದ ಕಲಿಯಲ್ಪಡುವ ಸಂಗತಿಗಳೊಳಗೆ ದೀಕ್ಷಾಸ್ನಾನವು ಮೊದಲ ಕಾರ್ಯವಾಗಿತ್ತು. ಹೇಗೂ, ಇಲ್ಲಿ ಬಳಸಲಾಗಿರುವ ಬಹುವಚನದ ಪದವು (βαπτισμός, *baptismos* ಎಂಬ ಮೂಲಪದದಿಂದ ಬಂದದ್ದು) ಹೊಸ ಒಡಂಬಡಿಕೆಯಲ್ಲಿ "ದೀಕ್ಷಾಸ್ನಾನ" (βάπτισμα, *baptisma*) ಎಂಬುದಕ್ಕೆ ಬಳಸಲ್ಪಡುವ ಸಾಮಾನ್ಯ ಪದವಾಗಿರುವದಿಲ್ಲ. ಈ ವಾಸ್ತವಾಂಶವು ಅನೇಕರನ್ನು ಈ ಪದವು ಯೆಹೂದಿ ಸ್ನಾನಗಳ ಬಗ್ಗೆ, ಅಥವಾ ಯೆಹೂದಿ ಮತಾಂತರಿಯ ದೀಕ್ಷಾಸ್ನಾನ ಎಂಬದನ್ನು ಸೂಚಿಸುತ್ತದೆಂದು ನಂಬುವಂತೆ ಮಾಡುತ್ತದೆ.[9] ಹೊಸ ಒಡಂಬಡಿಕೆಯಲ್ಲಿ βαπτισμόςನ ರೂಪಗಳು ನಾಲ್ಕು ಸಾರಿ ಬಳಸಲ್ಪಟ್ಟಿರುತ್ತವೆ (ಮಾರ್ಕ 7:4, 5; ಇಬ್ರಿಯ 6:2; 9:10). ಮಾರ್ಕನ ಸುವಾರ್ತೆಯಲ್ಲಿರುವ ಎರಡು ವಚನಗಳು ಅದನ್ನು ಸ್ಪಷ್ಟವಾಗಿ ಹಳೆಯ ಒಡಂಬಡಿಕೆಯ ಸ್ನಾನಗಳಿಗೆ ಅನ್ವಯಿಸುತ್ತದೆ. F. F. Bruceನು ಇದು ಯೆಹೂದಿ "ಮಜ್ಜನಗಳು," ಅಥವಾ ಶಾಸ್ತ್ರೋಕ್ತಸ್ನಾನಗಳು ಎಂಬದಾಗಿ ನಂಬುತ್ತಾನೆ (ನೋಡಿರಿ RSV).[10] ಸರಾಸರಿ ಯೆಹೂದಿ ಮನೆಯು ಒಂದು *miqva'ot*ನ್ನು, ಅಂದರೆ ಶಾಸ್ತ್ರೋಕ್ತವಾದ ಸ್ನಾನಗಳಿಗಾಗಿ ಒಂದು ಹೊಂಡವನ್ನು ಹೊಂದಿರುತ್ತಿತ್ತೆಂಬುದನ್ನು ಪುರಾತತ್ವಶಾಸ್ತ್ರವು ಸಾಭಿತುಪಡಿಸಿರುತ್ತದೆ. ನೀರು ಮೇಲ್ಗಡೆಯಿಂದ ಆ ಹೊಂಡದೊಳಗೆ ಮತ್ತು ಬಳಿಕ ಹೊರಗೆ ಹರಿಯುತ್ತಿತ್ತು, ಸೂಕ್ತವಾದ ಸ್ನಾನಕ್ಕೆ ಶುದ್ಧವಾದ, "ಹರಿಯುವ" ನೀರನ್ನು ಒದಗಿಸುವದಾಗಿತ್ತು. ಒಬ್ಬ ಫರಿಸಾಯನು ಒಂದು ಪ್ರಯಾಣದಿಂದ ಹಿಂದಿರುಗಿ ಮನೆಗೆ ಬಂದಾಗ, ಒಂದು ವೇಳೆ ತಾನು ದಾರಿಯಲ್ಲಿ ಅನ್ಯಜನಾಂಗದವನೊಬ್ಬನಿಗೆ ತಾಕಿಕೊಂಡು ಬಂದಿದ್ದರೆ ಅಥವಾ ಆತನು ಅಶುದ್ಧಗೊಂಡಿದ್ದರೆ "ಸ್ನಾನ" ಮಾಡುತ್ತಿದ್ದನು.

ಅಷ್ಟುಮಾತ್ರವಲ್ಲದೆ, ಯೋಹಾನನು ಬರುವದಕ್ಕೆ ಮುನ್ನ ಯೆಹೂದ್ಯರಿಗೆ "ದೀಕ್ಷಾಸ್ನಾನಗಳನ್ನು" ಮಾಡಿಸಿಕೊಳ್ಳಬೇಕೆಂದು (ಸ್ನಾನಗಳನ್ನು ಹೊರತು ಪಡಿಸಿ) ಆಜ್ಞಾಪಿಸಲ್ಪಟ್ಟಿರುವ ಕುರಿತು ಯಾವದೆ ಮನವರಿಕೆಯನ್ನುಂಟು ಮಾಡುವ ಪುರಾವೆಯು ನಮ್ಮ ಮುಂದಿರುವದಿಲ್ಲ. ದೀಕ್ಷಾಸ್ನಾನಗಳು ಸರ್ವಸಾಮಾನ್ಯ ವಾಗಿದ್ದಲ್ಲಿ, ಆತನನ್ನು ಏಕೆ "ಸ್ನಾನಿಕನು" ಅಥವಾ "ಮುಳುಗಿಸುವವನು" ಎಂದು ಕರೆಯಲಾಗುತ್ತಿತ್ತು? ಆತನನ್ನು ಹಾಗೆ ಗುರುತಿಸಿರುವದು ಆತನೇ ಬೇರೆಯ ವರನ್ನು, ನಿರ್ದಿಷ್ಟವಾಗಿ ಯೆಹೂದ್ಯರನ್ನು ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿದವರಲ್ಲಿ ಮೊದಲಿಗನು ಎಂಬುದನ್ನು ಸೂಚಿಸುತ್ತದೆ. ಯೋಹಾನನು ಆಜ್ಞಾಪಿಸಿದ ದೀಕ್ಷಾಸ್ನಾನವು ಯೆಹೂದ್ಯರಿಗೆ ಹೊಸತು ಆಗಿತ್ತು. ಮತಾಂತರಿಯ ದೀಕ್ಷಾಸ್ನಾನ ವಾಗಿದ್ದ ಪಕ್ಷದಲ್ಲಿ, ಒಬ್ಬ ಅನ್ಯಜನಾಂಗದವನು ಸ್ವತಃ ತನ್ನನ್ನು ನೀರಿನಲ್ಲಿ ಮುಳುಗಿಸಿಕೊಳ್ಳುತ್ತಿದ್ದನು; ಇದು ಯೋಹಾನನ ಅಥವಾ ಯೇಸುವಿನ ದೀಕ್ಷಾಸ್ನಾನಗಳ ವಿಷಯದಲ್ಲಾಗಲಿ ಸತ್ಯವಾಗಿರಲಿಲ್ಲ.

ಮಹಾ ಆದೇಶದ ದೀಕ್ಷಾಸ್ನಾನವು ಒಂದು ಪ್ರಕ್ರಿಯೆಯಾಗಿದ್ದು ಅದರಲ್ಲಿ ಒಬ್ಬ ಪಾಪಿಯು ಪಾಪದ ಪಾಲಿಗೆ ಸಾಯುವವನಾಗಿದ್ದು (ಮತ್ತಾಯ 28:19; ಮಾರ್ಕ 16:16), ಅದು ಯೇಸುವಿನ

ಮರಣ, ಹೂಣಲ್ಪಡುವಿಕೆ, ಮತ್ತು ಪುನರುತ್ಥಾನಗಳ ಚಿತ್ರಣವಾಗಿರುತ್ತದೆ (ರೋಮಾ 6:3-5). "ಸ್ನಾನಗಳು" ಎಂಬ ಬಹುವಚನ ಪದವು ಯೋಹಾನನ ದೀಕ್ಷಾಸ್ನಾನ, ಯೆಹೂದಿ ಮತಾಂತರಿ ದೀಕ್ಷಾಸ್ನಾನ, ಮತ್ತು ಹಳೆಯ ಒಡಂಬಡಿಕೆಯ ದೀಕ್ಷಾಸ್ನಾನಗಳನ್ನು ಒಳಗೊಂಡಿದ್ದಲ್ಲಿ, ಇದನ್ನು ಹೇಗೆ "ಕ್ರೈಸ್ತೀಯ ಸಿದ್ಧಾಂತ" ಅಥವಾ "ಕ್ರಿಸ್ತನ ಕುರಿತ ಬೋಧನೆ" ಎಂದು ಪರಿಗಣಿಸಬಹುದು (ವ. 1)? ಅಂಥ ಸ್ನಾನಗಳು ಕ್ರೈಸ್ತೀಯ ಬೋಧನೆಗಳಿಗೆ ಒಂದು ಪೂರ್ವತಯಾರಿ ಯಾಗಿದ್ದವಷ್ಟೆ. ಅದರ ಆಧಾರದಲ್ಲಿ ಯೆಹೂದಿ ಸ್ನಾನಗಳೆಲ್ಲವೂ "ಕ್ರೈಸ್ತೀಯ ಸಿದ್ಧಾಂತ" ಎಂಬದಾಗಿ ಒಬ್ಬನು ಮುಕ್ತಾಯಕ್ಕೆ ಬರಬಹುದಾಗಿದೆ, ಮತ್ತು ವಿಷಯವು ಹಾಗಿರುವದಿಲ್ಲ.

ಇನ್ನೊಂದೆಡೆಯಲ್ಲಿ, Josephusನು ಯೋಹಾನನ ದೀಕ್ಷಾಸ್ನಾನವನ್ನು ಸೂಚಿಸಿ ಹೇಳುವ ವೇಳೆ *baptismos* ಎಂಬ ಅದೇ ಪದವನ್ನು ಬಳಸಿದನು.[11] ಇದು ಆತನು ನೀಡಿದ ಬಿರುದಿನಲ್ಲಿ ಒಂದು ತಪ್ಪು ಆಗಿರಬಹುದಾಗಿದೆ, ಆದರೆ ಯೋಹಾನನ ದೀಕ್ಷಾಸ್ನಾನವು ಒಂದು ಸಾಧಾರಣವಾದ ಯೆಹೂದಿ ದೀಕ್ಷಾಸ್ನಾನ ಆಗಿರಲಿಲ್ಲವೆಂಬುದು ಆತನಿಗೆ ನಿಶ್ಚಯವಾಗಿಯೂ ಗೊತ್ತಿತ್ತು. ಆತನು *baptismos* ಎಂಬುದನ್ನು ಬಳಸುವದರಲ್ಲಿ ಸರಿಯಾಗಿ ಇರುವದಾದಿದ್ದರೆ, ಯೆಹೂದಿ ಸ್ನಾನಗಳು ಮತ್ತು ದೀಕ್ಷಾಸ್ನಾನದ ನಡುವೆ ಇದ್ದವೆಂದು ಹೇಳಲಾಗುವ ವ್ಯತ್ಯಾಸಗಳು ಎಂದಿಗೂ ಇರಲೇ ಇಲ್ಲವೆಂಬ ಮುಕ್ತಾಯಕ್ಕೆ ನಾವು ಬರಬೇಕಾಗುತ್ತದೆ. *Baptisma*ವು ಒಂದು "ಯೆಹೂದಿ-ಕ್ರೈಸ್ತ ಪದವಾಗಿದ್ದು" ಅದು *baptismos*ದಂತೆ ಕೇವಲ ಕ್ರಿಯೆಯನ್ನು ಮಾತ್ರವೇ ಒಳಗೊಂಡಿರದೆ "ಫಲಿತದೊಂದಿಗೆ ಇರುವಂಥ ಕ್ರಿಯೆ"ಯನ್ನು ಒಳಗೊಂಡಿರುತ್ತದೆ ಎಂದು Kistemakerನು ಅಭಿಪ್ರಾಯ ಪಡುತ್ತಾನೆ.[12] ಈ *baptismos* ಎಂಬ ಪದವು ಕೇವಲ ಯೆಹೂದಿ ಸ್ನಾನಗಳನ್ನು ಮಾತ್ರವೇ ಸೂಚಿಸುವದಾದರೆ (ಇಬ್ರಿಯ 9:10; ಮಾರ್ಕ 7:4, 5), ಇಬ್ರಿಯ 6:2ರಲ್ಲಿನ ಅರ್ಥವನ್ನು ಮಿತಿಗೊಳಿಸುವ ಅವಶ್ಯಕತೆಯಿರುತ್ತದೆ. "*Baptismos* ಎಂಬ ಪದವು ಸಾಮಾನ್ಯವಾಗಿ ಕ್ರೈಸ್ತೀಯ ದೀಕ್ಷಾಸ್ನಾನವನ್ನು ಸೂಚಿಸುವದಿಲ್ಲವಾದರೂ, ಇಲ್ಲಿ ಬೇರೆ ಸ್ನಾನಗಳು ಮಾತ್ರವಲ್ಲದೆ ದೀಕ್ಷಾಸ್ನಾನವು ಸಹ ದೃಶ್ಯದಲ್ಲಿರುವದರಿಂದ ಈ ಪದವು ಸೂಕ್ತವಾಗಿರುತ್ತದೆ."[13] ದೀಕ್ಷಾಸ್ನಾನವು ಮೂಲಭೂತ ಕ್ರೈಸ್ತೀಯ ಬೋಧನೆಗಳ ಕಾರ್ಯಗಳೊಳಗೆ ಪಟ್ಟಿ ಮಾಡಲ್ಪಟ್ಟಿರುವ ವಾಸ್ತವಾಂಶವು ಆ ಕ್ರಿಯೆಯ ಪ್ರಾಮುಖ್ಯತೆಯನ್ನು ಪ್ರಕಟಗೊಳಿಸುತ್ತದೆ (ನೋಡಿರಿ 1 ಪೇತ್ರ 3:21).

ಎಫೆಸ 4:5ರಲ್ಲಿ "ಒಂದೇ ದೀಕ್ಷಾಸ್ನಾನ" ಇರುತ್ತದೆಂದು ಪೌಲನು ಹೇಳಿದ್ದಾಗ್ಯೂ, ದೀಕ್ಷಾಸ್ನಾನದ ಬಹುವಚನವನ್ನು ಹೊಸ ಒಡಂಬಡಿಕೆಯಲ್ಲಿ ಕಾಣಬಹುದಾಗಿದೆ.[14] ಆತನ ತಾತ್ಪರ್ಯವು ಒಂದೇ ಒಂದು ದೀಕ್ಷಾಸ್ನಾನ ಚಾಲನೆಯಲ್ಲಿರುವದು ಮತ್ತು ಆತನು ಎಫೆಸದವರಿಗೆ ಪತ್ರಿಕೆಯನ್ನು ಬರೆಯುವ ಕಾಲದಲ್ಲಿ ನಂಬಿಕೆಯ ಐಕ್ಯತೆಗೆ ಜೀವಧಾರಕವಾಗಿರುತ್ತದೆಂದು ಆಗಿರಬಹುದಾಗಿದೆ. ಅದು ಮಹಾ ಆದೇಶಕ್ಕೆ ವಿಧೇಯರಾಗುವವರಿಗೆ ಆಜ್ಞಾಪಿಸಲಾಗಿರುವ ಏಕೈಕ ದೀಕ್ಷಾಸ್ನಾನ ಆಗಿರುತ್ತದೆ. ಕ್ರೈಸ್ತ ಯುಗದಲ್ಲಿ ಒಂದೇ ದೀಕ್ಷಾಸ್ನಾನವು ಇರುತ್ತದೆಂಬದಾಗಿ ಪೌಲನು ಒತ್ತಿ ಹೇಳಿದ್ದು ಯೋಹಾನನ ದೀಕ್ಷಾಸ್ನಾನದ ಸ್ಥಾನದಲ್ಲಿ ಕ್ರಿಸ್ತನನ ದೀಕ್ಷಾಸ್ನಾನ ಬಂದಿರುತ್ತದೆಂಬುದನ್ನು ಪರೋಕ್ಷವಾಗಿ ಸೂಚಿಸುತ್ತದೆ (ಅಪೊಸ್ತಲರ ಕೃತ್ಯಗಳು 19:1-6ರಲ್ಲಿ ಸ್ಪಷ್ಟಗೊಂಡ ಪ್ರಕಾರ). ಇನ್ನಿತರ ಸ್ನಾನಗಳು, ದೇವರ ಅನುಗ್ರಹದಲ್ಲಿ ಕ್ರಿಸ್ತನ ಬೋಧನೆಗಾಗಿ ಒಂದು ಸಿದ್ಧತೆಯಾಗಿರುವ ಸಾಧ್ಯತೆಯು ಇದ್ದಿರಬಹುದಾಗಿದೆ. ಸುವಾರ್ತೆಯು ಸಾರಲ್ಪಟ್ಟಾಗ ಅವುಗಳನ್ನು ಹಿಂದಕ್ಕೆ ಬಿಟ್ಟು ಬಿಡಬೇಕಾಗಿತ್ತು.

ಮುಂದಿನ ಕಾರ್ಯವು "ಹಸ್ತಾರ್ಪಣ." ಹಳೆಯ ಒಡಂಬಡಿಕೆಯಲ್ಲಿ ಸಾಮಾನ್ಯವಾಗಿರುತ್ತಿದ್ದ

ಈ ಆಚಾರವು ಹೊಸ ಒಡಂಬಡಿಕೆಯಲ್ಲಿ ವಿಶೇಷ ಶಕ್ತಿಗಳಿಲ್ಲದವನು ವ್ಯಕ್ತಿಯಿಂದ (ಅಪೊಸ್ತಲರ ಕೃತ್ಯಗಳು 13:3) ಅಥವಾ ದೈವಿಕವಾಗಿ ಶಕ್ತಿಯಿಂದ ತುಂಬಿಸಲ್ಪಟ್ಟ ಕ್ರಿಸ್ತನು ಅಥವಾ ಅಪೊಸ್ತಲನಂತಹ ವ್ಯಕ್ತಿಯೊಬ್ಬನಿಂದ ಆಶೀರ್ವಾದ ಕೊಡಲ್ಪಡುವ ಮೂಲಕ ಮುಂದುವರೆದಿತ್ತು. ಒಬ್ಬ ವ್ಯಕ್ತಿಗೆ ಪ್ರಾರ್ಥನೆಯನ್ನು ಮಾಡುವ ವೇಳೆಯಲ್ಲಿ, ಒಂದು ಯಜ್ಞವು ಅರ್ಪಿಸಲ್ಪಡುವಾಗ, ಮತ್ತು ಒಬ್ಬನು ಒಂದು ಹುದ್ದೆ ಅಥವಾ ಕೆಲಸಕ್ಕೆ ನೇಮಕ ಮಾಡಲ್ಪಡುವ ವೇಳೆಯಲ್ಲಿ ಹಸ್ತಾರ್ಪಣವನ್ನು ಮಾಡಲಾಗುತ್ತಿತ್ತು. ಆತ್ಮೀಕ ವರಗಳನ್ನು ದೊರಕಿಸಿ ಕೊಡುವದಕ್ಕೆ ಶಕ್ತರಾದ ಪ್ರೇರಿತ ಅಪೊಸ್ತಲರಿಂದ ಹಸ್ತಗಳನ್ನಿಡುವದು ಆಚರಿಸಲ್ಪಡುವಾಗ, ಅದು ಅವರ ಅಧಿಕಾರಕ್ಕೆ ದೃಶ್ಯೀಕರಣವನ್ನು ಒದಗಿಸಿರಬಹುದಾಗಿದೆ (ಅಪೊಸ್ತಲರ ಕೃತ್ಯಗಳು 6:6; 8:14–17; 19:1–6; ರೋಮಾ 1:11). ಯೇಸು ಮಕ್ಕಳನ್ನು ಆಶೀರ್ವದಿಸುವದಕ್ಕೆ ಅವರ ಮೇಲೆ ಕೈಗಳನ್ನಿಟ್ಟನು ಮತ್ತು ರೋಗಿಗಳನ್ನು ಸ್ವಸ್ಥಮಾಡುವಾಗ ಅವರ ಮೇಲೆ ಕೈಗಳನ್ನಿಟ್ಟನು (ಮತ್ತಾಯ 19:13; ಮಾರ್ಕ 5:23). ರೋಗಿಗಳನ್ನು ಸ್ವಸ್ಥಪಡಿಸುವ ವೇಳೆಯಲ್ಲಿ (ಅಪೊಸ್ತಲರ ಕೃತ್ಯಗಳು 28:8), ಆರಿಸಿಕೊಳ್ಳಲ್ಪಟ್ಟ ವ್ಯಕ್ತಿಗಳನ್ನು ಹುದ್ದೆಗಳಿಗೆ ನೇಮಿಸುವ ವೇಳೆ (ಅಪೊಸ್ತಲರ ಕೃತ್ಯಗಳು 6:6; 1 ತಿಮೊಥೆ 5:22), ಮತ್ತು ಪವಿತ್ರಾತ್ಮನ ಅದ್ಭುತಕರವಾದ ಶಕ್ತಿಗಳನ್ನು ಬೇರೆಯವರ ಮೇಲೆ ಬರಮಾಡುವ ವೇಳೆಯಲ್ಲಿ ಅಪೊಸ್ತಲರು ಸಹ ಹೀಗೆಯೇ ಮಾಡಿದರು. ಅಪೊಸ್ತಲರ ಕೃತ್ಯಗಳು 8:14–17; 19:1–6ರಲ್ಲಿ ಈ ಕ್ರಿಯೆಯ ಜೊತೆಯಲ್ಲಿ ಪ್ರಾರ್ಥನೆಯು ಮಾಡಲ್ಪಡುತ್ತದೆ.[15]

ಸ್ಪಷ್ಟವಾಗಿರುವ ಪ್ರಕಾರ, ಅಪೊಸ್ತಲರನ್ನು ಹೊರತು ಪಡಿಸಿ ಬೇರೆ ಯಾವ ವ್ಯಕ್ತಿಗಳಿಗೂ ಆತ್ಮೀಕ ವರಗಳನ್ನು ಮತ್ತೊಬ್ಬರಿಗೆ ಹಸ್ತಾಂತರಿಸುವ ಶಕ್ತಿಯು ಕೊಡಲ್ಪಟ್ಟಿರುವದಿಲ್ಲ. ಅದ್ಭುತಕರವಾದ ವರಗಳನ್ನು ಒದಗಿಸುವ ಶಕ್ತಿಯು ಸಾರ್ವಕಾಲಿಕವಾದದ್ದೆಂದು ಹೊಸ ಒಡಂಬಡಿಕೆಯು ಕಲಿಸುವದಿಲ್ಲ. ದೀಕ್ಷಾಸ್ನಾನ ಮತ್ತು ಕರ್ತನ ಭೋಜನಗಳು ನಿರಂತರವಾದ ಆಜ್ಞೆಗಳಾಗಿವೆ, ಆದರೆ ಅದ್ಭುತಕರವಾದ ವರಗಳನ್ನು ಮತ್ತೊಬ್ಬರಿಗೆ ದೊರಕುವಂತೆ ಮಾಡುವದು ನಿರಂತರವಾದದ್ದಲ್ಲ. ಅಂಥ ವರಗಳನ್ನು ಮತ್ತೊಬ್ಬರಿಗೆ ಹಸ್ತಾಂತರಿಸುವ ಶಕ್ತಿಯನ್ನು ಹೊಂದಿದ್ದ ಅಪೊಸ್ತಲರು ಮರಣಿಸಿದಾಗ, ಹಸ್ತಾರ್ಪಣವು ಅನಾವಶ್ಯಕವಾಯಿತು. ಇಂದು ಯಾವನೊಬ್ಬನೂ ಹಸ್ತಗಳನ್ನಿಡುವ ಮೂಲಕ ಅಸ್ವಭಾವಿಕವಾದ ಶಕ್ತಿಗಳನ್ನು ದೊರಕಿಸಿ ಕೊಡುವದಕ್ಕೆ ಸಾಧ್ಯವಿಲ್ಲ. ಅಂಥ ಸಾಮರ್ಥ್ಯವಿರುತ್ತದೆಂದು ಹೇಳಿಕೊಳ್ಳುವ ಯಾವನೇ ಆಗಲಿ ಒಬ್ಬ ಅಪೊಸ್ತಲನ ಸಕಲ ಅಧಿಕಾರಗಳನ್ನು ಚಲಾಯಿಸುವದಕ್ಕೆ, ಸತ್ತವರನ್ನು ಎಬ್ಬಿಸುವದಕ್ಕೆ ಸಹ ಶಕ್ತನಾಗಿರಬೇಕಾಗುತ್ತದೆ (ಅಪೊಸ್ತಲರ ಕೃತ್ಯಗಳು 9:36–42).

ಮೂಲಭೂತ ಬೋಧನೆಯ ಕಡೇ ಎರಡು ಕ್ಷೇತ್ರಗಳು ಭವಿಷ್ಯದ ಘಟನೆಗಳಿಗೆ ಸಂಬಂಧಿಸಿರುತ್ತವೆ: **ಸತ್ತವರಿಗೆ ಪುನರುತ್ಥಾನ** ಮತ್ತು **ನಿತ್ಯವಾದ ನ್ಯಾಯತೀರ್ಪು**.

"**ಸತ್ತವರಿಗೆ**" (νεκρῶν, *nekrōn*) ಎಂಬುದು ಬಹುವಚನದ ಪದವಾಗಿದೆ. ಈ ವಾಕ್ಯಭಾಗವು ಯೇಸುವಿನ ಪುನರುತ್ಥಾನವಾದ ಬಳಿಕ ಪುನರುತ್ಥಾನಗೊಂಡ ದೇವಜನರು ಸೇರಿದಂತೆ ಹಲವಾರು ಪುನರುತ್ಥಾನಗಳ ಬಗ್ಗೆ ಸೂಚಿಸುತ್ತಿರಬಹು ದಾಗಿದೆ (ಮತ್ತಾಯ 27:51–53). ಶಾರೀರಿಕವಾಗಿ ಪುನರುತ್ಥಾನಗೊಳ್ಳುವ ವಿಚಾರವು ಬಹುತೇಕ ಯೆಹೂದ್ಯರಿಂದ ಅಂಗೀಕರಿಸಲ್ಪಟ್ಟಿತ್ತೆಂದು ತೋರುತ್ತದೆ. ಸದ್ದುಕಾಯರು ಕುಲೀನವರ್ಗಕ್ಕೆ ಸೇರಿದ ಅಲ್ಪಸಂಖ್ಯಾತರಾಗಿದ್ದು ಇವರು ಮಾತ್ರ ಅದಕ್ಕೆ ಹೊರತಾಗಿದ್ದರು (ಅಪೊಸ್ತಲರ ಕೃತ್ಯಗಳು 23:8). ಹೇಗೂ, ಮತ್ತಾಯ 22:23–33ರಲ್ಲಿ ಯೇಸುವನ್ನು ವಿಚಾರಿಸುವದರಲ್ಲಿ ಸೂಚಿಸಲ್ಪಡುವ ಪ್ರಕಾರ ಆ ವಿಷಯವು ವಾಗ್ವಾದ ಮಾಡಲ್ಪಟ್ಟಿತ್ತು. ಪುನರುತ್ಥಾನದ ಸಿದ್ಧಾಂತವನ್ನು ಸಮರ್ಥಿಸಿಕೊಳ್ಳುವದಕ್ಕೆ ಬಳಕೆ ಮಾಡಿರಬಹುದಾದ ಹಳೆಯ ಒಡಂಬಡಿಕೆಯ

ವಾಕ್ಯಭಾಗಗಳಲ್ಲಿ ಯೋಬ 19:26, ಯೆಶಾಯ 26:19, ಮತ್ತು ದಾನಿಯೇಲ 12:2 ಸೇರಿರುತ್ತವೆ.

ಪುನರುತ್ಥಾನದ ಮೇಲೆ ಹೊಸ ಒಡಂಬಡಿಕೆಯ ಲೇಖಕರು ಅತ್ಯಂಥ ದೊಡ್ಡ ಪ್ರಮಾಣದಲ್ಲಿ ಒತ್ತು ಕೊಟ್ಟಿರುವದರ ಕಾರಣದಿಂದಾಗಿ ಸತ್ತವರೊಳಗಿಂದ ಪುನರುತ್ಥಾನಗೊಳ್ಳುವದು ಹೊಸ ಒಡಂಬಡಿಕೆಯ ಒಂದು ಸಿದ್ಧಾಂತವೆಂದು ಗುರುತಿಸಲ್ಪಟ್ಟಿರುತ್ತದೆ, ಆದರೆ ಯೆಹೂದ್ಯರ ಮಧ್ಯದಲ್ಲಿನ ಪೂರ್ವಸಿದ್ಧತೆಯ ನಂಬಿಕೆಗಳಿಂದ ನಾವು ಅದನ್ನು ತೆಗೆದು ಹಾಕುವದಕ್ಕೆ ಸಾಧ್ಯವಿಲ್ಲ. ಪುನರುತ್ಥಾನದ ಭಾವನೆಯು ಹೊಸ ಒಡಂಬಡಿಕೆಯನ್ನು ತುಂಬಿಕೊಂಡಿರುತ್ತದೆ (ಲೂಕ 14:14; ಯೋಹಾನ 5:28, 29; 11:24, 25; ಅಪೊಸ್ತಲರ ಕೃತ್ಯಗಳು 17:18, 32; ರೋಮಾ 1:4). ಯೇಸುವು ಸತ್ತವರೊಳಗಿಂದ ಎದ್ದು ಬರುವದಕ್ಕೆ ಮುನ್ನವೇ ಇದು ಶಿಷ್ಯರ ತಿಳುವಳಿಕೆಯಲ್ಲಿ ಪ್ರಧಾನವಾಗಿತ್ತು.

ನಮ್ಮ ಸ್ವಂತ ಪುನರುತ್ಥಾನದಲ್ಲಿ ದೃಢವಾದ ನಂಬಿಕೆಯನ್ನಿಟ್ಟುಕೊಳ್ಳುವದಕ್ಕೆ ಯೇಸುವಿನ ಪುನರುತ್ಥಾನವು ಕಾರಣವಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 17:31). ಮೂಲಭೂತ ಕಾರ್ಯಗಳ ಪಟ್ಟಿಯು ವಾಚಕರು ಪುನರುತ್ಥಾನದಲ್ಲಿ ನಂಬಿಕೆಯಿಟ್ಟವರಾಗಿದ್ದರು ಮತ್ತು ಅವರು ಆ ಪ್ರಾಥಮಿಕ ಬೋಧನೆಯಿಂದ ಮುಂದಕ್ಕೆ ಸಾಗಬೇಕಿತ್ತೆಂಬುದನ್ನು ಊಹಿಸಿಕೊಳ್ಳುವದಾಗಿದೆ.

ಈ ಪಟ್ಟಿಯಲ್ಲಿರುವ ಆರನೆಯ ಕಾರ್ಯವು "ನಿತ್ಯವಾದ ನ್ಯಾಯತೀರ್ಪು." ಒಂದು ನ್ಯಾಯತೀರ್ಪು ಇಡೀ ನಿತ್ಯತ್ವಕ್ಕೆ ಸಂಬಂಧಿಸುವದಾಗಿದೆ. ದೇವರ ಅನೇಕ ನ್ಯಾಯತೀರ್ಪುಗಳು ತಾತ್ಕಾಲಿಕ ಸ್ವಭಾವದವುಗಳಾಗಿವೆ, ಆದರೆ ಮಾನವರಿಗೆ ಆಗುವ ಒಂದು ಅಂತಿಮ ಹಾಗೂ ನಿತ್ಯವಾದ ನ್ಯಾಯತೀರ್ಪಿನ ಬಗ್ಗೆ ಮತ್ತಾಯ 25:31-46; ಅಪೊಸ್ತಲರ ಕೃತ್ಯಗಳು 17:30, 31; ಮತ್ತು 2 ಕೊರಿಂಥ 5:10 ವಾಕ್ಯಭಾಗಗಳು ಕಲಿಸುತ್ತವೆ. ಈ ವಾಕ್ಯಭಾಗಗಳು ಮತ್ತು ಇತರ ವಾಕ್ಯಭಾಗಗಳಿಂದ ಸ್ಪಷ್ಟವಾಗುವದೇನೆಂದರೆ ನಾವು "ನಾವೆಲ್ಲರೂ ದೇವರ ನ್ಯಾಯಾಸನದ ಮುಂದೆ ನಿಲ್ಲಬೇಕು" (ರೋಮಾ 14:10). ಈ ಯೋಚನೆಯು ಫೇಲಿಕ್ಸನ ಮನಸ್ಸಿನಲ್ಲಿ ಅಲ್ಲೋಲ ಕಲ್ಲೋಲವನ್ನು ಸೃಷ್ಟಿಸಿತ್ತು (ಅಪೊಸ್ತಲರ ಕೃತ್ಯಗಳು 24:25), ಸುವಾರ್ತೆಯನ್ನು ಕೇಳಿದ ಬಳಿಕ ಪಶ್ಚಾತ್ತಾಪ ಪಡದ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಅದೇ ಸಂಭವಿಸತಕ್ಕದ್ದು.

ಪುನರುತ್ಥಾನ ಮತ್ತು ನ್ಯಾಯತೀರ್ಪಿನ ಬಗ್ಗೆ ಎಲ್ಲಾ ಕ್ರೈಸ್ತರು ಮನವರಿಕೆಯನ್ನು ಹೊಂದಿರಬೇಕು, ಇಲ್ಲವಾದರೆ ಈ ಲೋಕದ ಸಂಕಷ್ಟಗಳನ್ನು ಅನುಭವಿಸಿ ನಿಲ್ಲುವದಕ್ಕೆ ಸ್ವಲ್ಪವಾದ ಉತ್ತೇಜನವು ಇರುತ್ತದೆ. ಒಬ್ಬನು ಆರಂಭದಲ್ಲಿ ಸುವಾರ್ತೆಗೆ ವಿಧೇಯನಾಗುವದಕ್ಕೆ ನ್ಯಾಯತೀರ್ಪಿನ ದಿನದಲ್ಲಿನ ನಂಬಿಕೆಯು ಒಂದು ಶಕ್ತಿಶಾಲಿ ಉತ್ತೇಜಕವಾಗಿರುತ್ತದೆ (ರೋಮಾ 2:3-6). ಈ ಭಾವನೆಯ ಕುರಿತು ಹಳೆಯ ಒಡಂಬಡಿಕೆಯಲ್ಲಿ ಕ್ಲುಪ್ತವಾಗಿ ಪ್ರಸ್ತಾಪಿಸಲಾಗಿರುತ್ತದೆ (ಪ್ರಸಂಗಿ 12:14). ಹಳೆಯ ಒಡಂಬಡಿಕೆಯಲ್ಲಿ ದೇವರು ಬರಮಾಡಿದ ನ್ಯಾಯತೀರ್ಪುಗಳು ಪಾಪದ ಮೇಲಿನ ತಾತ್ಕಾಲಿಕ ದಂಡನೆಗಳಾಗಿದ್ದವು. ಉದಾಹರಣೆಗೆ, ತಮ್ಮ ಮೇಲೆ ಬರಲಿದ್ದ ನ್ಯಾಯತೀರ್ಪುಗಳಲ್ಲಿ "ದೇವರ ಬರುವಿಕೆಗೆ ತನ್ನನ್ನು ಸಿದ್ಧಮಾಡಿಕೊಳ್ಳಬೇಕಿತ್ತು" (ಆಮೋಸ 4:12). ನಿತ್ಯವಾದ ನ್ಯಾಯತೀರ್ಪು ಇಬ್ರಿಯ 9:27ರಲ್ಲಿ ಇನ್ನಷ್ಟು ಸ್ಪಷ್ಟಗೊಳ್ಳುತ್ತದೆ ಮತ್ತು ಅದು ಮುಂದೆ 12:25ರಲ್ಲಿ ಪರೋಕ್ಷವಾಗಿ ಸೂಚಿಸಲ್ಪಟ್ಟಿದೆ.

**ವಚನ 3.** ಈ ವಿಭಾಗವು, 6:1-3, ಈ ಮಾತುಗಳಿಂದ ಅಂತ್ಯಗೊಳ್ಳುತ್ತದೆ: **ಮತ್ತು ದೇವರ ಚಿತ್ತವಾದರೆ ಹೀಗೆ ಸಾಗುತ್ತಾ ಹೋಗುವೆವು.** ಲೇಖಕನ ತಾತ್ಪರ್ಯವು ಹೀಗಿದ್ದಿರಬೇಕು, "ನಾವು ದೇವರ ಸಹಾಯ ಮತ್ತು ಅನುಮತಿಯೊಂದಿಗೆ ಪರಿಪಕ್ವಗೊಳ್ಳುತ್ತಾ ಸಾಗುವೆವು." ಈ ಪತ್ರಿಕೆಯು ಪರಿಪಕ್ವತೆಗೆ ನಡಿಸುವ ಬೋಧನೆಯನ್ನು ಕೊಡುವ ಮೂಲಕ ಪ್ರಗತಿ ಹೊಂದುತ್ತಾ ಹೋಗುತ್ತದೆ ಎಂದು Bruce ಅಭಿಪ್ರಾಯ ಪಡುತ್ತಾನೆ.[16] ಇಬ್ರಿಯರಿಗೆ ಪತ್ರಿಕೆಯು ಯಾರಿಗೆ ಬರೆಯಲ್ಪಟ್ಟಿತೋ

ಆ ಕ್ರೈಸ್ತರಿಲ್ಲಿ ಕೆಲವರು ತಾವು ನಂಬಿಕೆಯ ಎರಡು ವ್ಯವಸ್ಥೆಗಳನ್ನು ಅಂದರೆ ಯೆಹೂದಿಮತ ಹಾಗೂ ಕ್ರೈಸ್ತತ್ವಗಳನ್ನು ಹಿಡಿದುಕೊಂಡಿರಬಹುದೆಂದು ಭಾವಿಸಿದ್ದರು. ಈ ಕಾರಣಕ್ಕಾಗಿ ವಿಗ್ರಹಾರಾಧಕ ಜನಾಂಗಕ್ಕಿಂತಲೂ ಇವರಿಗೆ ಮತಭ್ರಷ್ಟತೆಯ ಅಪಾಯವು ಅತ್ಯಂಥ ಹೆಚ್ಚು ಘೋರವಾಗಿದ್ದಿರಬಹುದಾಗಿದೆ.

ಲೇಖಕನು ವಾಚಕರನ್ನು ಪವಿತ್ರಾತ್ಮನ ಇನ್ನಷ್ಟು ಆಳವಾದ ಸತ್ಯಗಳಿಗೆ ನಡಿಸಬೇಕೆಂದು ಅಪೇಕ್ಷಿಸಿದನು, ಆದರೆ ಆತ್ಮೀಕ ಬೆಳವಣಿಯು ದೇವರ ಚಿತ್ತದ ಮೇಲೆ ಆಧಾರವಾಗಿರುತ್ತದೆ. "ದೇವರ ಚಿತ್ತವಾದರೆ" ಎಂಬ ಮಾತು ಆದಿ ಕ್ರೈಸ್ತರ ಹೇಳಿಕೆಗಳಲ್ಲಿ ಒಂದು ಶ್ರದ್ಧಾಭಕ್ತಿಯ ಹಾಗೂ ಸೂಕ್ತವಾದ ತತ್ವವಾಗಿರುವಂತೆ ತೋರುತ್ತದೆ.[17] ನಮ್ಮ ವಿಷಯದಲ್ಲಿ ಸಹ ಅದು ಅಷ್ಟೆ ಸತ್ಯವಾಗಿರತಕ್ಕದ್ದು. ಈ ರೀತಿಯ ಮಾತನ್ನು ಬಳಸುವದರಲ್ಲಿ, ದೇವರ ಎಲ್ಲರ ಮೇಲೆ ಆಳುತ್ತಾನೆ ಎಂಬುದನ್ನು ನಾವು ಒಪ್ಪಿಕೊಂಡಂತಾಗುವದು.

**6:4-8**

**[4]ಒಂದು ಸಾರಿ ದೇವರ ಜ್ಞಾನಪ್ರಕಾಶದಲ್ಲಿ ಸೇರಿ ಪರಲೋಕದಿಂದಾದ ದಾನದ ಅನುಭವವನ್ನು ಹೊಂದಿ ಪವಿತ್ರಾತ್ಮವರದಲ್ಲಿ ಪಾಲುಗಾರರಾಗಿ [5]ದೇವರ ವಾಕ್ಯದ ಶ್ರೇಷ್ಠತೆಯನ್ನೂ ಮುಂದಣ ಯುಗದ ಮಹತ್ವವನ್ನೂ ಅನುಭವಿಸಿದವರು [6]ಭ್ರಷ್ಟರಾದರೆ ಅವರಲ್ಲಿ ತಿರಿಗಿ ಮಾನಸಾಂತರವನ್ನು ಹುಟ್ಟಿಸುವದು ಅಸಾಧ್ಯ; ಯಾಕೆಂದರೆ ಅವರು ತಮ್ಮ ಪಾಲಿಗೆ ದೇವರ ಮಗನನ್ನು ಪುನಃ ಶಿಲುಬೆಗೆ ಹಾಕುವವರೂ ಆತನನ್ನು ಎಲ್ಲರ ಮುಂದೆ ಅವಮಾನಪಡಿಸುವವರೂ ಆಗಿದ್ದಾರೆ. [7]ಭೂಮಿಯು ತನ್ನ ಮೇಲೆ ಅನೇಕಾವರ್ತಿ ಸುರಿಯುವ ಮಳೆಯನ್ನು ಹೀರಿಕೊಂಡು ಅದು ಯಾರ ನಿಮಿತ್ತ ವ್ಯವಸಾಯ ಮಾಡಲ್ಪಡುತ್ತದೋ ಅವರಿಗೆ ಅನುಕೂಲವಾದ ಬೆಳೆಯನ್ನು ಕೊಟ್ಟರೆ ದೇವರ ಆಶೀರ್ವಾದವನ್ನು ಹೊಂದುತ್ತದೆ; [8]ಆದರೆ ಅದು ಮುಳ್ಳುಗಿಡಗಳನ್ನೂ ಕಳೆಗಳನ್ನೂ ಬೆಳೆಸಿದರೆ ಅಯೋಗ್ಯವೆನಿಸಿಕೊಂಡು ಶಾಪಕ್ಕೆ ಗುರಿಯಾಗುತ್ತದೆ, ಅದರ ಅಂತ್ಯವು ಸುಡಲ್ಪಡುವದೇ.**

ಇಬ್ರಿಯ 6:4-8 ಒಂದು ಗುರಿಯಿಟ್ಟು ಹೇಳಲಾಗಿರುವ ಸಂದೇಶವಾಗಿದ್ದು ಅದು ನಮಗೊಂದು ಎಚ್ಚರಿಕೆಯ ಅತ್ಯವೊಂದನ್ನು ಮುಂದಿಡುತ್ತದೆ: ನಾವು "ಪರಿಪಕ್ವತೆಯ ಕಡೆಗೆ ಸಾಗುತ್ತಾ" ಹೋಗಲಿಲ್ಲವಾದಲ್ಲಿ, ನಾವು ಮತಭ್ರಷ್ಟಗೊಳ್ಳುವ, ಅಥವಾ ನಂಬಿಕೆಯಿಂದ ಸಂಪೂರ್ಣವಾಗಿ ಬಿದ್ದು ಹೋಗುವ ಅಪಾಯದಲ್ಲಿರುವೆವು.

ವಾಕ್ಯಭಾಗವು ಮತಭ್ರಷ್ಟತೆಯ ಅಪಾಯದ ಬಗ್ಗೆ ಎಚ್ಚರಿಸುತ್ತದೆ. ಮತಭ್ರಷ್ಟತೆಯು ಅಸಾಧ್ಯವೆಂದು ನಂಬುವವರಿಗೆ ಅದು ಅತ್ಯಂಥ ದೊಡ್ಡ ಕಷ್ಟವನ್ನುಂಟು ಮಾಡುತ್ತದೆ. ಅವರು ಅನುಸರಿಸುವ ಅತ್ಯಂಥ ಸಾಮಾನ್ಯವಾದ ದಾರಿಯೆಂದರೆ ಅದರಲ್ಲಿ ಭಾಗಿಯಾಗಿರುವ ಜನರು ಎಂದಿಗೂ ನಿಜ ಪರಿವರ್ತನೆಗೊಂಡವರು ಆಗಿರಲೇ ಇಲ್ಲ ಎಂದು ವಾದಿಸುವದು. ಒಬ್ಬ ನಿಜವಾದ ಕ್ರೈಸ್ತನಿಗೆ ಬಿದ್ದು ಹೋಗುವದು ಅಸಾಧ್ಯವೆಂದು Arthur W. Pinkನು ನಂಬಿದ್ದನಾದರೂ, ಆತನೊಂದು ಮಹತ್ವದ ಅಂಶವನ್ನು ತಿಳಿಸುತ್ತಾನೆ: "ಕೇವಲ [ನಂಬಿಕೆಯ ಬಗ್ಗೆ] ಹೇಳಿಕೊಳ್ಳುವವರು ಮಾತ್ರವೇ ಆಗಿರುವವರಿಗೆ 'ತಪ್ಪಿ ಹೋಗುವದಕ್ಕೆ' ಏನೂ ಇರುವದಿಲ್ಲ."[18] ಕನಿಷ್ಠ ಪಕ್ಷಕ್ಕೆ ಆತನು ಪರಿಗಣನೆಯಲ್ಲಿರುವವರು ಕೇಳವ ನಂಬಿಕೆಯಿದೆ ಎಂದು ಹೇಳಿಕೊಳ್ಳುವವರಿಗಿಂತಲೂ ಹೆಚ್ಚಿನವರೆಂಬುದನ್ನಾದರೂ ಒಪ್ಪಿಕೊಂಡನು.

ಇನ್ನು ಕೆಲವರು ಪರಿವರ್ತನೆಯ ಏಕೈಕ ಪುರಾವೆಯೆಂದರೆ "ಮುಂದುವರೆಯುವಿಕೆ" ಎಂದು

ಹೇಳಿರುತ್ತಾರೆ. ಈ ವಾದವು ಸಹ ನಮ್ಮ ವಾಕ್ಯಭಾಗದಿಂದ ತಪ್ಪೆಂದು ಖಂಡಿಸಲ್ಪಟ್ಟಿರುತ್ತದೆ, ಇಲ್ಲಿ ಪ್ರಸ್ತಾಪಿಸಲಾಗಿರುವ ವ್ಯಕ್ತಿಗಳು ಒಂದು ಕಾಲದಲ್ಲಿ ನಿಜವಾಗಿಯೂ ಪರಿವರ್ತನೆಗೊಂಡವರಾಗಿದ್ದು ಈಗ ತಪ್ಪಿ ಹೋಗಿರುತ್ತಾರೆಂಬುದನ್ನು ಅದು ತೋರಿಸುತ್ತದೆ. ಖಂಡಿತವಾಗಿಯೂ ನಾವು ಜೀವಿತಕಾಲವೆಲ್ಲಾ ನಂಬಿಗಸ್ತರಾಗಿ ಉಳಿಯಬೇಕು; ಆದರೆ ಹಾಗೆ ಮಾಡುವದು ಮಾತ್ರವೇ ಒಬ್ಬನು ಪರಿವರ್ತನೆಗೊಂಡಿದ್ದಾನೆಂಬುದಕ್ಕೆ ಏಕೈಕ ಪುರಾವೆ ಆಗಿರುವದಿಲ್ಲ.

ತಪ್ಪಿ ಹೋಗುವದು ಅಸಾಧ್ಯವೆಂದು ವಾದಿಸಿದ James T. Draper, Jr., ನು ಸಹ "ನಾವು ಎಂದಿಗೂ ಆರಂಭವನ್ನೇ ಮಾಡದ ಒಂದು ಕಾರ್ಯದಲ್ಲಿ ಎಂದಿಗೂ ಪರಿಪೂರ್ಣತೆಯನ್ನು ಸಾಧಿಸುವದಕ್ಕೆ ಸಾಧ್ಯವಿಲ್ಲ" ಎಂದು ಒಪ್ಪುತ್ತಾನೆ.[19] ಈ ವಾಕ್ಯಭಾಗದಲ್ಲಿ ಮತಭ್ರಷ್ಟರೆಂಬದಾಗಿ ಬಣ್ಣಿಸಲ್ಪಟ್ಟಿರುವವರು ಕ್ರೈಸ್ತ ಜೀವಿತವನ್ನು ಆರಂಭಿಸಿದ್ದರು ಆದರೆ ಪ್ರಗತಿಯನ್ನು ಸಾಧಿಸಿರಬೇಕಾದ ರೀತಿಯಲ್ಲಿ ಅವರು ಪ್ರಗತಿಯನ್ನು ಹೊಂದಲು ವಿಫಲರಾಗಿದ್ದರು. ಅಂಥ ಜನರ ಕುರಿತು ಪುನಃ 10:26ರಲ್ಲಿ ಅವರು ಕ್ರಿಸ್ತನ ಯಜ್ಞವನ್ನು ಬೇಕೆಂದು ತಿರಸ್ಕರಿಸುವವರು ಎಂಬದಾಗಿ ಬಣ್ಣಿಸಲ್ಪಟ್ಟಿರುತ್ತಾರೆ. ಹಾಗೆ ಮಾಡುವ ಮೂಲಕ, ಪಶ್ಚಾತ್ತಾಪವು ಅನುಭವಿಸಲ್ಪಡುವದಕ್ಕಿದ್ದ ಏಕೈಕ ದಾರಿಯನ್ನು ಅವರು ನಿರ್ಮೂಲ ಮಾಡಿದವರಾಗಿದ್ದರು.

6:4-6ರಲ್ಲಿ ಪ್ರಸ್ತಾಪಿಸಲಾಗಿರುವವರು ಎಂದಿಗೂ ಕರ್ತನನ್ನು ಅರಿಯದೆ ಇರುವಂಥ ಜನರಾಗಿರಲಿಲ್ಲ, ಆದರೆ ತಮ್ಮ ನಂಬಿಕೆಯನ್ನು ಕಳಕೊಂಡಿದ್ದಂಥ ಕ್ರೈಸ್ತರಾಗಿದ್ದರು. ಮತಭ್ರಷ್ಟತೆಯ ಅಪಾಯವು "ನಿಜವಾದದ್ದು, ಮತ್ತು ಅದು ಕಾಲ್ಪನಿಕವಲ್ಲ; ಇಲ್ಲವಾದರೆ ಹೆಚ್ಚು – ಶಬ್ದವನ್ನೊಳಗೊಂಡ ಬುದ್ಧಿವಾದಳನ್ನು ಹೊಂದಿರುವ ಈ ಪತ್ರಿಕೆಯನ್ನು ಕೆಲಸಕ್ಕೆ ಬಾರದ್ದು, ಯೋಗ್ಯವಲ್ಲದ್ದು, ಮತ್ತು ಅಪಹಾಸ್ಯಕರವೆಂಬದಾಗಿ ತಿರಸ್ಕರಿಸಲ್ಪಡತಕ್ಕದ್ದು."[20]

ದುಃಖಕರವೆನಿಸುವ ಪ್ರಕಾರವೇ, ಒಬ್ಬ ನಿಜವಾದ ಕ್ರೈಸ್ತನು ಕ್ರಿಸ್ತನ ಕಥೆಯಲ್ಲಿ ತನ್ನ ದೃಢವಿಶ್ವಾಸವನ್ನು ಕಳಕೊಂಡು ತಪ್ಪಿ ಹೋಗಬಹುದಾಗಿದೆ (ರೋಮಾ 11:22; ಗಲಾತ್ಯ 5:4). ಒಬ್ಬ ವ್ಯಕ್ತಿಯು ಒಮ್ಮೆ ರಕ್ಷಣೆಯನ್ನು ಹೊಂದಿದರೆ ಆತನು ಸದಾಕಾಲವೂ ರಕ್ಷಣೆ ಹೊಂದಿರುವನೆಂಬ ಖಚಿತತೆಯನ್ನು ಹೊಂದಿರುತ್ತಾನೆಂಬುದಾಗಿ ಇಬ್ರಿಯರಿಗೆ ಪತ್ರಿಕೆಯ ಲೇಖಕನು ನಂಬಲಿಲ್ಲ. ಅಲ್ಲದೆ ಒಬ್ಬನು ಒಂದು ಸಾರಿ ರಕ್ಷಣೆಯನ್ನು ಹೊಂದಿದ್ದರೆ ಆತನು ಅಂತಿಮವಾಗಿ ಯಾವಾಗಲೂ ಕರ್ತನ ಬಳಿಗೆ ಹಿಂದಿರುಗಿ ರಕ್ಷಣೆಯನ್ನು ಹೊಂದಬಲ್ಲನೆಂದಾಗಲಿ ಸಹ ಆತನು ಭಾವಿಸಲಿಲ್ಲ. ಒಬ್ಬ ವ್ಯಕ್ತಿಯು ಪುನಃ ನಿತ್ಯವಾಗಿ ನಾಶಹೊಂದಿದವನಾಗಬಹುದು ಮತ್ತು ಆ ಸ್ಥಿತಿಯಲ್ಲಿ ಸದಾಕಾಲವೂ ಉಳಿಯಬಲ್ಲನು ಎಂದು ಪ್ರೇರಿತ ಲೇಖಕನು ನಂಬಿದನು. ನಿಶ್ಚಯವಾಗಿಯೂ, ಆತನು "ಭ್ರಷ್ಟರಾಗಿದ್ದ" ಕ್ರೈಸ್ತರನ್ನು ಕುರಿತು ಮಾತಾಡಿದನು (ವ. 6).

ತಪ್ಪಿ ಹೋಗಿದ್ದ ಈ ಕ್ರೈಸ್ತರು ಕೇವಲ ಕ್ರೈಸ್ತರಾಗಿರುವಂತೆ "ತೋರ್ಪಟ್ಟರು" ಎಂದು ಯಾವನೂ ಹೇಳುವದಕ್ಕಾಗುವದಿಲ್ಲ, ಯಾಕೆಂದರೆ ಅವರು ದೈವಿಕವಾಗಿ ಅನುಗ್ರಹಿಸಲ್ಪಟ್ಟಿದ್ದ ಸಾಕಷ್ಟು ಆಶೀರ್ವಾದಗಳನ್ನು ಪಡೆದುಕೊಂಡಿದ್ದರು. ಅವರು ಈ ಆತ್ಮೀಕ ಆಶೀರ್ವಾದಗಳನ್ನು ದೇವರ ಕೈಯಿಂದ ಪಡೆದುಕೊಳ್ಳುವದರಲ್ಲಿ ಸ್ವತಃ ದೇವರನ್ನೇ ಮೋಸಗೊಳಿಸಿರಬಲ್ಲರೊ? ದೇವರು ಮಾತ್ರವೇ "ಮುಂದಣ ಯುಗದ ಮಹತ್ವ [*ಶಕ್ತಿಗಳನ್ನು*] ವನ್ನು" ಒದಗಿಸುವದಕ್ಕೆ ಶಕ್ತನಾಗಿರುತ್ತಾನೆ (ವ. 5; ಒತ್ತಿ ಹೇಳಿದ್ದು ನನ್ನದು). "ಶಕ್ತಿಗಳು" (δύναμις, *dunamis*) ಎಂಬುದಕ್ಕಿರುವ ಅದೇ ಪದವು 2:4ರಲ್ಲಿ "ಅದ್ಭುತಕಾರ್ಯಗಳು" ಎಂದು ಅನುವಾದಿಸಲ್ಪಟ್ಟಿದೆ. ನಾವು ಹೀಗೆ ಕೇಳುತ್ತೇವೆ, "ದೇವರು ಈ ಇವುಗಳನ್ನು ಆ ವಂಚಕ ವಿಶ್ವಾಸಿಗಳಿಗೆ ಕೊಟ್ಟಿರಬಲ್ಲನೋ?" ಇಲ್ಲ, ಆತನು ವಂಚಿಸಲ್ಪಡುವದಕ್ಕೆ ಸಾಧ್ಯವಿಲ್ಲ. ಆದುದರಿಂದ,

ಪ್ರಸ್ತಾಪಿಸಲಾಗಿರುವ ತಮ್ಮ ನಂಬಿಕೆಯನ್ನು ಕಳಕೊಂಡು ಭ್ರಷ್ಟರಾಗುವದಕ್ಕೆ ಸಮರ್ಥರಾಗಿದ್ದರು.

**ವಚನ 4.** ಅನಂತರದಲ್ಲಿ ಅಪನಂಬಿಗಸ್ತರಾಗಿದ್ದವರಿಗೆ ದೇವರು ಅನುಗ್ರಹಿಸಿದ್ದ ಮಹಾನ್ ಆಶೀರ್ವಾದಗಳೊಳಗೆ **ಜ್ಞಾನಪ್ರಕಾಶ**ವು ಸೇರಿತ್ತು. ಇದು 2 ಕೊರಿಂಥ 4:3, 4ರಲ್ಲಿ ಇದು ಸುವಾರ್ತೆಯ "ಪ್ರಕಾಶ [ವನ್ನು ನೋಡುವದು]" ಎಂದು ಚಿತ್ರಿಸಲ್ಪಟ್ಟಿದೆ. ಜ್ಞಾನಪ್ರಕಾಶಕ್ಕೆ ಬರದವರು ಸೈತಾನನಿಂದ ಗೊಂದಲಕ್ಕೀಡು ಮಾಡಲ್ಪಟ್ಟಿರುವವರು ಆಗಿದ್ದಾರೆ. 10:32ರಲ್ಲಿ ಲೇಖಕನು ಹೀಗೆ ಹೇಳುತ್ತಾನೆ, "ಹೀಗಿರಲಾಗಿ ನೀವು ಜ್ಞಾನಪ್ರಕಾಶದಲ್ಲಿ ಸೇರಿ ಕಷ್ಟಾನುಭವವೆಂಬ ಬಲು ಹೋರಾಟವನ್ನು ಸಹಿಸಿಕೊಂಡ ಹಿಂದಿನ ದಿನಗಳನ್ನು ನೆನಪಿಗೆ ತಂದುಕೊಳ್ಳಿರಿ." ಅಲ್ಲಿ, "ಜ್ಞಾನಪ್ರಕಾಶದಲ್ಲಿ ಸೇರುವದು" 10:26ರಲ್ಲಿನ "ಸತ್ಯದ ಪರಿಜ್ಞಾನ" ಎಂಬುದಕ್ಕೆ ಸಮಾನಾರ್ಥಕವಾಗಿ ಕಾಣುತ್ತದೆ. ಈ ಪತ್ರಿಕೆಯು ಬರೆಯಲ್ಪಡುವ ವೇಳೆಯಲ್ಲಿ, ಅವರ ಆತ್ಮಗಳನ್ನು ಒಂದು ಕಾಲದಲ್ಲಿ ತುಂಬಿಕೊಂಡಿದ್ದ ಸುವಾರ್ತೆಯ ಪ್ರಕಾಶವು ಪಾಪದ ಅಂಧಕಾರದಿಂದ ಸೋತು ಹೋಗಿತ್ತು.

ಯೇಸು ಲೋಕಕ್ಕೆ ಬೆಳಕಾಗಿದ್ದಾನೆ (ಯೋಹಾನ 8:12), ಮತ್ತು ಆ ಬೆಳಕಿನಲ್ಲಿರುವವನು ನಿಜವಾಗಿಯೂ ಪರಿವರ್ತನೆಗೊಂಡವನು. ಆತನು ಆ ಬೆಳಕಿನಲ್ಲಿ ನಡೆಯುವದನ್ನು ಮುಂದುವರೆಸುವಾಗ (1 ಯೋಹಾನ 1:7), ಆತನಿಗೆ ಕ್ರಿಸ್ತನ ರಕ್ತದ ಮೂಲಕ ನಿರಂತರವಾದ ಕ್ಷಮಾಪಣೆಯು ಸಿಕ್ಕುತ್ತದೆ. ಒಬ್ಬನು ಬೆಳಕಿನಲ್ಲಿ ನಡೆಯುವದಕ್ಕೆ ಪ್ರಯತ್ನಿಸುವ ವೇಳೆಯಲ್ಲಿ ತಿಳಿಯದೆ ಪಾಪವನ್ನು ಮಾಡಬಹುದು. ಆತನಿಗೆ ತಾನು ತಪ್ಪು ಮಾಡಿದನೆಂಬ ಅಪರಾಧಭಾವನೆ ಬರದಿದ್ದರೆ ಆತನು ಆ ಪಾಪದ ಅರಿಕೆಯನ್ನು ಮಾಡುವದಕ್ಕೆ ಸಾಧ್ಯವಿಲ್ಲ. ಅಂಥ ಸಂದರ್ಭದಲ್ಲಿ, ಯೇಸುವಿನ ರಕ್ತವು ನಿಶ್ಚಯವಾಗಿಯೂ ಆತನ ಪಾಪವನ್ನು ಶುದ್ಧಮಾಡುವದನ್ನು ಮುಂದುವರೆಸುತ್ತದೆ. ಖಂಡಿತವಾಗಿಯೂ, ಒಬ್ಬನಿಗೆ ತನ್ನ ಪಾಪದ ಅರಿವು ಇರುವಾಗ ಅದನ್ನು ಅರಿಕೆ ಮಾಡುವದು ಅಗತ್ಯವಿರುತ್ತದೆ (1 ಯೋಹಾನ 1:8-10). "ಮರಣಕರವಾದ ಪಾಪ" ವು (1 ಯೋಹಾನ 5:16) ಸಹೋದರನು ಅರಿಕೆ ಮಾಡದ ಪಾಪವಾಗಿರಬಹುದಾಗಿದೆ, ಯಾಕೆಂದರೆ ಅರಿಕೆ ಮಾಡಿದ ಪ್ರತಿಯೊಂದು ಪಾಪವು ಕ್ಷಮಿಸಲ್ಪಡುವದು (1 ಯೋಹಾನ 1:9). ಒಬ್ಬ ದೀನ ಹಾಗೂ ಮನಃಮುರಿದ ವ್ಯಕ್ತಿಯು ತನ್ನೆಲ್ಲಾ ಪಾಪಗಳ ಬಗ್ಗೆ ಅರಿವು ಇಲ್ಲದೆ ಇರಬಲ್ಲೆನೆಂದು ತಿಳಿದವನಾಗಿ, ಆತನು ನಿರಂತರವಾಗಿ ಕ್ಷಮಾಪಣೆಯನ್ನು ಹುಡುಕುವನು. ಎಫೆಸ 5:8ರಲ್ಲಿ ಪೌಲನು "ಹಿಂದಿನ ಕಾಲದಲ್ಲಿ ಕತ್ತಲೆಯಾಗಿದ್ದರು," ಆದರೆ ಆತನು ಬರೆಯುವ ಹೊತ್ತಿಗೆ, ಅವರು "ಕ್ರಿಸ್ತನಲ್ಲಿದ್ದು ಬೆಳಕಾಗಿದ್ದರು" ಎಂಬುದನ್ನು ಸೂಚಿಸಿ ಬರೆಯುತ್ತಾನೆ. ಕೊಲೊಸ್ಸೆ 1:13ನೇ ವಚನವು "ಅಂಧಕಾರದ ಧೊರೆತನದಿಂದ" ಬಿಡಿಸಲ್ಪಟ್ಟವರ ಕುರಿತು ಪ್ರಸ್ತಾಪಿಸುತ್ತದೆ.

ಪರಿವರ್ತನೆಗೊಂಡವನು **ಪರಲೋಕದಿಂದಾದ ದಾನದ ಅನುಭವವನ್ನು ಹೊಂದಿದ**ವನು. ಕೃಪೆಯಿಂದ ಭ್ರಷ್ಟರಾಗುವ ಅಥವಾ ತಪ್ಪಿಹೋಗುವ ಸಾಧ್ಯತೆಯನ್ನು ತಿರಸ್ಕರಿಸುವವರು ಇಲ್ಲಿ ಪ್ರಸ್ತಾಪಿಸಲಾಗಿರುವ ವ್ಯಕ್ತಿಗಳು ಕೇವಲ "ಅನುಭವ ಮಾಡಿದ್ದಾರೆ ಆದರೆ ಎಂದಿಗೂ ನಿಜವಾಗಿ ರಕ್ಷಣೆಯನ್ನು ಹೊಂದಿಕೊಳ್ಳಲಿಲ್ಲ" ಎಂದು ಹೇಳುತ್ತಾರೆ. ಈ ಅಭಿಪ್ರಾಯವು ಇಬ್ರಿಯ 2:9ರಲ್ಲಿ ಯೇಸು ಮರಣವನ್ನು "ಅನಭವಿ[ಸಿದ]" ಕಾರ್ಯದಿಂದ ತಪ್ಪೆಂದು ಖಂಡಿಸಲ್ಪಡುತ್ತದೆ. "ಅನುಭವಿಸಿ" (γεύομαι, *geuomai*) ಎಂಬುದಕ್ಕಿರುವ ಅದೇ ಪದವು ಎರಡೂ ವಾಕ್ಯಭಾಗಗಳಲ್ಲಿ ಬಳಸಲ್ಪಟ್ಟಿದೆ. ಯೇಸು ಶಿಲುಬೆಯ ಮೇಲಿರುವ ವೇಳೆ ಆತನಿಗೆ ಕೊಡಲಾದ ಕಹಿ ಬೆರಸಿದ ದ್ರಾಕ್ಷಾರಸವನ್ನು ರುಚಿ ನೋಡಿದನು (ಆದರೆ ನುಂಗಲಿಲ್ಲ) ಎಂಬುದನ್ನು

ಸೂಚಿಸುವದಕ್ಕೆ ಸಹ ಇದೇ ಪದವು ಬಳಸಲ್ಪಟ್ಟಿರುತ್ತದೆಂಬುದು ಸತ್ಯವಾದದ್ದು (ಮತ್ತಾಯ 27:34), ಆದರೆ ಇಬ್ರಿಯ ಪತ್ರಿಕೆಯಲ್ಲಿ ಬಳಸಲ್ಪಟ್ಟದ್ದು ವ್ಯತ್ಯಾಸವಾದದ್ದು. ಆತನು ಮರಣವನ್ನು ಕೇವಲ "ಅನುಭವಿಸಿದನೋ" (ರುಚಿಸಿದನೋ) ಅಥವಾ ಅದನ್ನು ಆತನು ಪೂರ್ಣವಾಗಿ ಅನುಭವ ಮಾಡಿದೋ? ಸ್ಪಷ್ಟವಾಗಿ, ಇಬ್ರಿಯರಿಗೆ ಪತ್ರಿಕೆಯ ಲೇಖಕನಿಗೆ "ಅನುಭವ" ಎಂಬುದು ಒಂದು ಕಾರ್ಯವನ್ನು ಸಂಪೂರ್ಣವಾಗಿ ಮೈಗೂಡಿಸಿಕೊಂಡನು ಎಂದರ್ಥವಾಗಿತ್ತು. ಯಾವದೋ ಒಂದು ಕಾರ್ಯದಲ್ಲಿ ಸಂಪೂರ್ಣವಾಗಿ ಪಾಲ್ಗೊಳ್ಳುವದು ಎಂದರ್ಥವನ್ನು ಈ ಪದವು ಕೊಡುತ್ತದೆ.[21] ಅದರರ್ಥವು "ಅನುಭವ" ಮಾಡಿದ ಸಂಗತಿಯನ್ನು ಒಬ್ಬನ ಭಾಗವಾಗಿ ಮಾಡಿಕೊಳ್ಳುವದು ಎಂದಾಗಿರುತ್ತದೆ. "ದೇವರ ವಾಕ್ಯದ ಶ್ರೇಷ್ಠತೆಯನ್ನು ಅನುಭವಿಸುವದು" (ವ. 5) ಎಂದರೆ ಅದನ್ನು ನಮ್ಮ ಸ್ವಭಾವದಲ್ಲಿ ಪೂರ್ಣವಾಗಿ ಒಂದು ಭಾಗ ಮಾಡಿಕೊಳ್ಳುವದು ಆಗಿರುತ್ತದೆ.

"ಪರಲೋಕದಿಂದಾದ ದಾನ" ಎಂಬುದು ಕ್ರಿಸ್ತನಲ್ಲಿ ಹೊಂದಿಕೊಂಡ ರಕ್ಷಣೆಯಾಗಿರತಕ್ಕದ್ದು, ಅದು ಆತನು ಮಾತ್ರವೇ ಕೊಡಲು ಶಕ್ತವಾದ ನೂತನ ಜೀವನ ಆಗಿದೆ (ರೋಮಾ 6:23). ಅವರು ಈ ದಾನವನ್ನು ಹೊಂದಿಕೊಂಡಿದ್ದರಾದ್ದರಿಂದ, ಪ್ರಸ್ತಾಪಿಸಲ್ಪಟ್ಟವರು ನಿಜವಾಗಿಯೂ ಪರಿವರ್ತನೆಗೊಂಡವರಾಗಿದ್ದರು. ಕೆಲವರು ಈ ದಾನವನ್ನು ಪವಿತ್ರಾತ್ಮನೆಂದು ಅರ್ಥನಿರೂಪಣೆ ಮಾಡುತ್ತಾರೆ, ಆದರೆ ಅದು ವಾಕ್ಯಭಾಗದಲ್ಲಿ ಅನಾವಶ್ಯಕವಾದ ಪುನರಾವರ್ತನೆಯನ್ನು ಸೇರಿಸುವದಾಗಿದೆ ಯಾಕೆಂದರೆ ಲೇಖಕನು ಮುಂದೆ "ಪವಿತ್ರಾತ್ಮವರದಲ್ಲಿ ಪಾಲುಗಾರರಾಗಿ" ಮಾಡಲ್ಪಟ್ಟಿದ್ದರೆಂದು ಹೇಳುತ್ತಾನೆ. ಪವಿತ್ರಾತ್ಮನನ್ನು ಪಡೆದುಕೊಳ್ಳುವವರು ಆತನನ್ನು "ಕುಡಿಯುವವರು" ಆಗಿದ್ದಾರೆಂದು ಯೇಸು ಹೇಳಿದನು (ಯೋಹಾನ 7:37-39). ಈ ಯೋಚನೆಯು 1 ಕೊರಿಂಥ 12:13ರಲ್ಲಿ ಪೌಲನಿಂದ ಪುನರಾವರ್ತಿಸಲ್ಪಟ್ಟಿರುತ್ತದೆ. ನಾವು ಎಲ್ಲಿಯ ವರೆಗೆ ನಂಬುವವರಾಗಿರುತ್ತೇವೋ ಅಲ್ಲಿಯ ತನಕ ನಮಗೆ ಕ್ರಿಸ್ತನಲ್ಲಿ ನೂತನ ಜೀವಿನವಿರುತ್ತದೆ. ಯೋಹಾನ 5:24 ಮತ್ತು ಇನ್ನು ಹಲವಾರು ವಾಕ್ಯಭಾಗಗಳಲ್ಲಿನ ಕಾಲರೂಪವು ಒಬ್ಬನು "ನಂಬುತ್ತಲಿರಬೇಕು" ಎಂಬುದನ್ನು ತೋರಿಸುತ್ತದೆ. ಕ್ರೈಸ್ತರು ಈಗ ಸದ್ಯದಲ್ಲಿ "ನಿತ್ಯಜೀವದ ನಿರೀಕ್ಷೆಯಲ್ಲಿ" ಇರುತ್ತಾರೆ (ತೀತನಿಗೆ 1:2). ಒಬ್ಬನು ಈಗಾಗಲೆ ಹೊಂದದಿರುವ ಸಂಗತಿಗಾಗಿ ನಿರೀಕ್ಷೆ ಪಡುತ್ತಾನೆ, ಆದರೆ ಅದು ಆತನಿಗೆ ಸಿಕ್ಕ ಮೇಲೆ ನಿರೀಕ್ಷೆಯು ನಿಂತುಹೋಗುತ್ತದೆ ಎಂದು ಪೌಲನು ಹೇಳುತ್ತಾನೆ (ರೋಮಾ 8:24, 25). ಆ ನಿರೀಕ್ಷೆಯ ನೆರವೇರಿಕೆ ಮತ್ತು ಸ್ವೀಕರಿಸಿಕೊಳ್ಳುವಿಕೆಯು ಯೇಸುವಿನ ಬರೋಣದಲ್ಲಿ ಸಂಭವಿಸುವದು (ಇಬ್ರಿಯ 9:27, 28). ಇಲ್ಲಿ "ದಾನ" (δωρεά, *dōrea*) ಎಂಬ ಪದವು ಹೊಸ ಒಡಂಬಡಿಕೆಯಲ್ಲಿ ಹೆಚ್ಚುಕಡಿಮೆ ಪ್ರತ್ಯೇಕವಾಗಿ "[ಆತ್ಮಿಕ] ದಾನಗಳ" ನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿದೆ.[22] ಹೇಗೂ, ಯೋಹಾನ 4:10ರಲ್ಲಿ ಅದೇ ಪದವು ಬಳಸಲ್ಪಟ್ಟಿದ್ದು ಅಲ್ಲಿ ಅದು ರಕ್ಷಣೆಯ ವರ ಎಂಬ ಅರ್ಥವನ್ನು ಹೊಂದಿದೆ.

ಇನ್ನೊಂದು ಆಶೀರ್ವಾದವು **ಪವಿತ್ರಾತ್ಮವರದಲ್ಲಿ ಪಾಲುಗಾರರಾಗಿ**ರು ವದು. ಲೋಕವು ಪವಿತ್ರಾತ್ಮನನ್ನು ಪಡೆದುಕೊಳ್ಳಲಾರದು (ಯೋಹಾನ 14:17), ಆದರೆ ಆತನು ಕ್ರೈಸ್ತರಿಗಾಗಿ ವಾಗ್ದಾನ ಮಾಡಲ್ಪಟ್ಟಿದ್ದಾನೆ (ಗಲಾತ್ಯ 4:6; ನೋಡಿರಿ ರೋಮಾ 8:9). ಯೇಸು ಎಲ್ಲಾ ನಿಜವಾದ ವಿಶ್ವಾಸಿಗಳಿಗೆ ಪವಿತ್ರಾತ್ಮನನ್ನು ವಾಗ್ದಾನ ಮಾಡಿದನು (ಯೋಹಾನ 7:37-39), ಆದರೆ ಕ್ರಿಸ್ತನು ಪರಲೋಕಕ್ಕೆ ಹಿಂದಿರುಗಿ ಹೋದ ಮೇಲೆ "ಮಹಿಮೆಪಡಿಸಲ್ಪಡುವ" ತನಕ ಆತನು ಕೊಡಲ್ಪಡುವದಕ್ಕೆ ಸಾಧ್ಯವಾಗಲಿಲ್ಲ. ಪೇತ್ರನು ಅಪೊಸ್ತಲರ ಕೃತ್ಯಗಳು 2:38ರಲ್ಲಿ ಪವಿತ್ರಾತ್ಮನ ವರದ ಕೊಡುಗೆಯನ್ನು ಮುಂದಿಡುತ್ತಾನೆ. ಪವಿತ್ರಾತ್ಮನು ನಂಬಿಕೆಯ ಮೂಲಕ

ಕೊಡಲ್ಪಟ್ಟನೆಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ (ಗಲಾತ್ಯ 3:1, 2, 14), ಅದೇ ರೀತಿಯಲ್ಲಿಯೇ ನಮ್ಮೊಳಗೆ ಕ್ರಿಸ್ತನು ಸಹ ವಾಸಮಾಡು ತ್ತಾನೆ (ಎಫೆಸ 3:17).

ಆದಿ ಸಭೆಯವರು ಪವಿತ್ರಾತ್ಮವರವನ್ನು ಹೇಗೆ ಅರ್ಥಮಾಡಿಕೊಂಡಿರಬಹುದು? ಪವಿತ್ರಾತ್ಮನು ಪರಲೋಕದಲ್ಲಿ ಕ್ರಿಸ್ತನ ಮಹಿಮಕರಣಕ್ಕೆ ಸಾಕ್ಷಿಯನ್ನು ಕೊಟ್ಟನು ಮತ್ತು ಅಪೊಸ್ತಲರು ಸಹ ಅದನ್ನೇ ಮಾಡಿದರು ಎಂಬದಾಗಿ ಅಪೊಸ್ತಲರ ಕೃತ್ಯಗಳು 5:32. ಅಪೊಸ್ತಲರು ಮಾಡಿದ ಅದ್ಭುತಗಳ ಮೂಲಕವಾಗಿ ಪವಿತ್ರಾತ್ಮನು ಖಂಡಿತವಾಗಿಯೂ ಈ ಮಹಿಮೆಯನ್ನು ತಂದನು. ಪೇತ್ರನು ಪವಿತ್ರಾತ್ಮನ ಕುರಿತಾಗಿ ಇನ್ನಷ್ಟು ಸೇರಿಸುತ್ತಾ ಹೀಗೆ ಹೇಳುತ್ತಾನೆ, “ದೇವರು ತನಗೆ ವಿಧೇಯರಾಗಿರುವವರಿಗೆ ದಯಪಾಲಿಸುವ ಪವಿತ್ರಾತ್ಮನು . . .” (ಅಪೊಸ್ತಲರ ಕೃತ್ಯಗಳು 5:32). ಅಪೊಸ್ತಲರಿಗೆ ಅಂಥ ಅದ್ಭುತಕರವಾದ ಶಕ್ತಿಯು ಇತ್ತೆಂಬುದು ಸ್ಪಷ್ಟವಾಗಿತ್ತು (ನೋಡಿರಿ ಅಪೊಸ್ತಲರ ಕೃತ್ಯಗಳು 2:43; 3:1-9; 5:1-12), ಮತ್ತು ಈ ಶಕ್ತಿಗಳನ್ನು ಅವರು ಸುವಾರ್ತೆಗೆ ವಿಧೇಯರಾಗಿದ್ದ ಇನ್ನು ಕೆಲವರಿಗೆ ಹಸ್ತಾಂತರಿಸಿದರು (ಅಪೊಸ್ತಲರ ಕೃತ್ಯಗಳು 8:14-17; 19:1-6). ಹೇಗೂ, ಯೇಸು ಅಸ್ವಾಭಾವಿಕವಾದ ಪವಿತ್ರಾತ್ಮನ ವರಗಳನ್ನು ಅಪೊಸ್ತಲರಿಗೆ ಮಾತ್ರವೇ ವಾಗ್ದಾನ ಮಾಡಿದ್ದನು (ಯೋಹಾನ 14:26; 15:26, 27; 16:12, 13). ಅಪೊಸ್ತಲರಿಗೆ ಮತ್ತು ಇತರರಿಗೆ ವಾಗ್ದಾನ ಮಾಡಲ್ಪಟ್ಟ ಅದ್ಭುತಕರವಾದ ಶಕ್ತಿಗಳು ಎಲ್ಲಾ ಕ್ರೈಸ್ತರಿಗೆ ಕೊಡಲ್ಪಟ್ಟಿವೆ ಎಂದು ನಾವು ಹೇಳುವದಾದರೆ ಈ ವಾಕ್ಯಭಾಗಗಳನ್ನು ದುರುಪಯೋಗ ಪಡಿಸಿಕೊಳ್ಳುವವರು ಆಗುತ್ತೇವೆ.

ಅಪೊಸ್ತಲರ ಕೃತ್ಯಗಳು 10:45, 46ರಲ್ಲಿ, “ಪವಿತ್ರಾತ್ಮನ ವರ” ದಲ್ಲಿ ಅನ್ಯಭಾಷೆಯನ್ನಾಡುವದು ಸೇರಿತ್ತು, ಅದು ಖಂಡಿತವಾಗಿಯೂ ಪವಿತ್ರಾತ್ಮನಿಂದ ಒಂದು ಅದ್ಭುತವಾದ ಅನುಗ್ರಹಿಸಲ್ಪಡುವಿಕೆ ಆಗಿತ್ತು. ಈ ವರವು ಪಂಚಾಶತ್ತದ ದಿನದಂದು ಪವಿತ್ರಾತ್ಮನ ಶಕ್ತಿಯನ್ನು ಸ್ವೀಕರಿಸಿಕೊಂಡ ಬಳಿಕ ಅಪೊಸ್ತಲರು ಪ್ರಯೋಗಿಸಿದ ಮೊದಲ ವರವಾಗಿತ್ತು (ಅಪೊಸ್ತಲರ ಕೃತ್ಯಗಳು 2:4, 6-8).

ಅಪೊಸ್ತಲರ ಕೃತ್ಯಗಳು 8ರಲ್ಲಿ ಸಮಾರ್ಯದವರು ಅಪೊಸ್ತಲರು ಬರುವದಕ್ಕೆ ಮುನ್ನವೇ ದೀಕ್ಷಾಸ್ನಾನವನ್ನು ಮಾಡಿಸಿಕೊಂಡವರಾಗಿದ್ದಾಗ್ಯೂ, ಅವರು ಇನ್ನೂ ಪವಿತ್ರಾತ್ಮನಿಗಾಗಿ ಕಾಯುತ್ತಿದ್ದರು ಎಂಬುದನ್ನು ಗಮನಿಸಿರಿ. ಪೇತ್ರ ಮತ್ತು ಯೋಹಾನರು ಬಂದು ಅವರ ಮೇಲೆ ಪವಿತ್ರಾತ್ಮನು ಸುರಿಸಲ್ಪಡುವಂತೆ ಮಾಡಿದ ಬಳಿಕವಷ್ಟೆ ಅವರು ಪವಿತ್ರಾತ್ಮನ ಶಕ್ತಿಯನ್ನು ಹೊಂದಿಕೊಂಡರು. ಅಂಥ ವರವೊಂದನ್ನು ಪಡೆಯಬೇಕಾದರೆ ಪವಿತ್ರಾತ್ಮನನ್ನು ಸುರಿಸಲ್ಪಡುವಂತೆ ಮಾಡುವ ಒಬ್ಬ ಅಪೊಸ್ತಲನು ಉಪಸ್ಥಿತನಾಗಿರುವದು ಸ್ಪಷ್ಟವಾಗಿ ಅಗತ್ಯವಿತ್ತು. ಈಗಾಗಲೆ ಅದ್ಭುತಗಳನ್ನು ಮಾಡುತ್ತಾ ಸಮಾರ್ಯದಲ್ಲಿದ್ದ ಫಿಲಿಪ್ಪನಿಗೆ “ಪವಿತ್ರಾತ್ಮನ ವರವನ್ನು” ಮತ್ತೊಬ್ಬರಿಗೆ ಬರುವಂತೆ ಮಾಡುವ ಶಕ್ತಿಯನ್ನು ಹೊಂದಿರಲಿಲ್ಲ ಎನ್ನಿಸುತ್ತದೆ, ಇಲ್ಲವಾದರೆ ಆತನು ಮುಂಚೆ ಅದನ್ನು ಮಾಡಿರುತ್ತಿದ್ದನು. ಅಪೊಸ್ತಲರ ಕೃತ್ಯಗಳು 2ನೇ ಅಧ್ಯಾಯದಿಂದ ಅಪೊಸ್ತಲರ ಕೃತ್ಯಗಳು 11:15ರಲ್ಲಿ ಬಣ್ಣಿಸಲಾಗಿರುವ ಕಾಲದ ತನಕ, ಕೊರ್ನೇಲ್ಯನ ಮನೆಯಲ್ಲಿ ಸಂಭವಿಸಿದ ಕಾಲದ ವರೆಗೂ ಪವಿತ್ರಾತ್ಮನ ಅದ್ಭುತಕರವಾದ ಸುರಿಸಲ್ಪಡುವಿಕೆಯು (ಅಪೊಸ್ತಲರು ಕೈಗಳನ್ನಿಡದೆ, ದೈವಿಕವಾಗಿ ಸುರಿಸಲ್ಪಡುವಿಕೆ) ಎಂದಿಗೂ ನೇರವಾಗಿ ಸಂಭವಿಸಿರಲಿಲ್ಲ. “ಪವಿತ್ರಾತ್ಮವರವು ಮೊದಲು ನಮ್ಮ ಮೇಲೆ ಇಳಿದಂತೆ ಅವರ ಮೇಲೆಯೂ ಇಳಿಯಿತು” ಎಂದು ಪೇತ್ರನು ಹೇಳುತ್ತಾನೆ. ಇದರ ಮಧ್ಯದಲ್ಲಿ ಅದನ್ನು ಹೋಲುವಂತಹ ಯಾವದೇ ಘಟನೆಯು ಸಂಭವಿಸಿರಲಿಲ್ಲವಾದ್ದರಿಂದ, ಪೇತ್ರನು ಈ ಸಂದರ್ಭವನ್ನು ಅಪೊಸ್ತಲರ ಕೃತ್ಯಗಳು 2:1-4ರಲ್ಲಿ ದಾಖಲಿಸಲ್ಪಟ್ಟಿರುವ “ಮೊದಲು”

ಎಂಬದರೊಂದಿಗೆ ಹೋಲಿಸುತ್ತಾನೆ.

ಅನಂತರ, ಅಪೊಸ್ತಲರ ಕೃತ್ಯಗಳು 19:1-7ರಲ್ಲಿ, ಪೌಲನು ಎಫೆಸದಲ್ಲಿರುವ ಹನ್ನೆರಡು ಮಂದಿಗೆ ಯೇಸುವಿನ ದೀಕ್ಷಾಸ್ನಾನವನ್ನು ಮಾಡಿಸಿದ ಬಳಿಕ ಅವರಿಗೆ ಪವಿತ್ರಾತ್ಮವರವನ್ನು ಕೊಟ್ಟನು. ಅವರು ಯೋಹಾನನನ್ನು ಹೊರತು ಪಡಿಸಿ ಯಾರೋ ಒಬ್ಬರಿಂದ (ಬಹುಶಃ ಅಪೊಲ್ಲೊಸನು) ಉಪದೇಶಿಸಿ ಕೊಡಲ್ಪಟ್ಟ "ಯೋಹಾನನ ದೀಕ್ಷಾಸ್ನಾನ" ವನ್ನು ಮಾಡಿಸಿಕೊಂಡಿದ್ದಿರಬಹುದು.

ಅದ್ಭುತಕಾರ್ಯಗಳು ಮೂಲಕ ಸುವಾರ್ತೆಯನ್ನು ದೃಢೀಕರಿಸುವಿಕೆಯು ನಿಂತು ಹೋಗಿದೆ. ಹೇಗೂ, ಎಫೆಸ 5:17, 18ರಲ್ಲಿ ಆಜ್ಞಾಪಿಸಲ್ಪಟ್ಟಿರುವ ಪ್ರಕಾರ, ಒಬ್ಬನು ವಿಧೇಯನಾಗುವ ಮೂಲಕ ಅನುಭವಿಸಬಹುದಾದ ಒಂದು ಪವಿತ್ರಾತ್ಮನ ತುಂಬಿ ಸಲ್ಪಡುವಿಕೆಯು ಇರುತ್ತದೆ. ಸಕ್ರಿಯವಾಗಿ ವಿಧೇಯನಾಗಿರುವ ಕ್ರೈಸ್ತನಲ್ಲಿ ಮಾತ್ರವೇ ಈ "ತುಂಬಿಸಲ್ಪಡುವಿಕೆ"ಯು ಸಂಭವಿಸಬಲ್ಲದು. ತತ್ಪರಿಣಾಮವಾಗಿ, ಕ್ರೈಸ್ತನಲ್ಲಿ ಪವಿತ್ರಾತ್ಮನ ಚಟುವಟಿಕೆಗಳ ಬಗ್ಗೆ ಮಾತಾಡುವ ಪ್ರತಿಯೊಂದು ವಾಕ್ಯಭಾಗಗಳು ಅದ್ಭುತಕರವಾದ ರೀತಿಯದ್ದೋ ಅಥವಾ ವಿಧೇಯತೆಯುಳ್ಳ ನಂಬಿಕೆಯ ಸ್ವಾಭಾವಿಕವಾದ ಫಲಿತವೋ ಎಂದು ಜಾಗ್ರತೆಯಿಂದ ಮೌಲ್ಯಮಾಪನ ಮಾಡಬೇಕು.

ಪವಿತ್ರಾತ್ಮನ ಇರುವಿಕೆಯ ಜಾಗೃತಿಯು ಒಬ್ಬ ಕ್ರೈಸ್ತನಿಗೆ ವಾಕ್ಯದ ಪ್ರಕಟನೆಯ ಮೂಲಕ ಬರುತ್ತದೆ, ಅದು ನಂಬಿಕೆಯನ್ನು ಉಂಟು ಮಾಡುತ್ತದೆ (ರೋಮಾ 10:17). ಇದು ಪವಿತ್ರಾತ್ಮನು ವಾಕ್ಯವಾಗಿದ್ದಾನೆಂದು ಯಾವ ವಿಧದಲ್ಲಿಯೂ ಅಭಿಪ್ರಾಯವನ್ನು ನೀಡುವದಿಲ್ಲ, ಆದರೆ ಪಾಪಿಗಳ ಹಾಗೂ ದೇವಜನರ ಹೃದಯಗಳಲ್ಲಿ ಪವಿತ್ರಾತ್ಮನು ಪರಿಣಾಮಕಾರಿಯಾಗಿ ಕೆಲಸ ಮಾಡುವಂತದ್ದು ಆತನ "ಕತ್ತಿ" ಯ ಮೂಲಕ ಬರುತ್ತದೆ (ಎಫೆಸ 6:17). ಮೌಖಿಕವಾದದ್ದಾಗಿರಲಿ ಅಥವಾ ಲಿಖಿತವಾಗಿರಲಿ, ದೇವರ ವಾಕ್ಯಕ್ಕೆ ನಮ್ಮ ಹೃದಯಗಳನ್ನು ತೂರಿಹೋಗುವ (ಅಪೊಸ್ತಲರ ಕೃತ್ಯಗಳು 2:37) ಮತ್ತು ಅದನ್ನು ಕೇಳಿಸಿಕೊಳ್ಳುವದರಿಂದ ಉಂಟಾಗುವ ಮನವರಿಕೆಯ ಮುಖಾಂತರ ಪರಿವರ್ತನೆಗೊಳ್ಳು ವಂತೆ ಮಾಡುವ ಶಕ್ತಿಯಿರುತ್ತದೆ (ಯೋಹಾನ 16:8; ಇಬ್ರಿಯ 4:12, 13). ಯೇಸುವು "ಬದುಕಿಸುವಂಥದು ಆತ್ಮವೇ" ಎಂದು ಹೇಳಿದನು, ಆದರೆ ಆತನು "ಮಾಂಸವು ಯಾವದಕ್ಕೂ ಬರುವದಿಲ್ಲ. ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಅವೆ" ಎಂದು ಸೇರಿಸಿ ಹೇಳಿದನು (ಯೋಹಾನ 6:63). ಹಾಗಾದರೆ, ಪವಿತ್ರಾತ್ಮನಿಂದ ನೂತನ ಜೀವವು ಯೇಸುವಿನ ಮಾತುಗಳ ಮೂಲಕ ಬರುತ್ತದೆ ಎಂಬುದನ್ನು ನಾವು ಕಾಣುತ್ತೇವೆ. ಆತನ ಮಾತುಗಳ ಪ್ರಕಾರ ನಾವು ಜೀವಿಸುವದು ಆತನ ಪವಿತ್ರಾತ್ಮನು ನಮ್ಮಲ್ಲಿರುವದರ ಮತ್ತು ಆತನ ಶುದ್ಧೀಕರಣದ ಕೆಲಸವು ನಮ್ಮಲ್ಲಿ ಆಗಿರುವದಕ್ಕೆ ಪುರಾವೆಯನ್ನು ಒದಗಿಸುತ್ತದೆ (ಅಪೊಸ್ತಲರ ಕೃತ್ಯಗಳು 20:32). ಇತರ ಭಾಷೆಗಳಲ್ಲಿ ಮಾತಾಡುವ ಅಥವಾ ರೋಗಿಯನ್ನು ಗುಣಪಡಿಸುವ ಒಂದು ಅದ್ಭುತ ಕರವಾದ ವರದಿಂದ ಪುರಾವೆಯು ಕೊಡಲ್ಪಡುವದಿಲ್ಲ, ಅವುಗಳು ಪ್ರಥಮ ಶತಮಾನದಲ್ಲಿ ಸುರಿಸಲ್ಪಡುತ್ತಿದ್ದ ಸಾಮಾನ್ಯ ವರಗಳಾಗಿದ್ದವು.

ನಮ್ಮ ಹಿತಕ್ಕಾಗಿ ಲೋಕದ ಮೇಲೆ ಆಧಿಪತ್ಯ ನಡಿಸುವ ಪವಿತ್ರಾತ್ಮನ ದಾರಿಯು – ಅದನ್ನು ನಾವು "ದೈವಾನುಗ್ರಹ" ಎಂದು ಕರೆಯುತ್ತೇವೆ – ದೇವರ ಒಟ್ಟಾರೆ ಕೆಲಸದ ಇನ್ನೊಂದು ಮಂಡಲವಾಗಿರುತ್ತದೆ. ಜನರು ಸುವಾರ್ತೆಯನ್ನು ಆಲಿಸಿ ಅದಕ್ಕೆ ಪ್ರತಿಕ್ರಿಯೆಯನ್ನು ತೋರಿಸುವದರ ಮೂಲಕ ಆತನು ಪರಿವರ್ತನೆಯಲ್ಲಿ ಮತ್ತು ಶುದ್ಧೀಕರಣದಲ್ಲಿ ಕಾರ್ಯ ಮಾಡುತ್ತಾನೆ. ನಾವು ವಾಕ್ಯದಲ್ಲಿ ನಮ್ಮ ನಂಬಿಕೆಯನ್ನಿಡುವ ಮೂಲಕ ಬರುವ ಆತ್ಮೀಕ ಬೆಳವಣಿಗೆಯ ದಾರಿ (1 ಪೇತ್ರ 2:1, 2), ಮತ್ತು ನಮ್ಮ ಪ್ರಯೋಜನಕ್ಕಾಗಿ ದೈವಾನುಗ್ರಹದಿಂದ

ಕಾರ್ಯ ಮಾಡುವದು (ರೋಮಾ 8:28) ಇವುಗಳ ನಡುವೆ ಭೇದ ಗುರುತಿಸತಕ್ಕದ್ದು.

"ಪವಿತ್ರಾತ್ಮವರದಲ್ಲಿ ಪಾಲುಗಾರರು" ಎಂಬ ಪದವು ಆತ್ಮಭರಿತರಾದ ಜನರು ಸಹ ಪುನಃ ಪಾಪದಲ್ಲಿ ಬಿದ್ದುಹೋಗುವ ಸಾಧ್ಯತೆಯನ್ನು ತೋರಿಸುತ್ತದೆ. ಪೇತ್ರನು ಅನ್ಯಜನರ ವಿಷಯದಲ್ಲಿ ನಡೆದುಕೊಂಡದ್ದು ಆತನನ್ನು ಆ ಸಂದರ್ಭದಲ್ಲಿ ದೋಷಿಯೆಂದು ನಿಲ್ಲುವ ಹಾಗೆ ಮಾಡಿತ್ತೆಂಬುದನ್ನು ಬಲ್ಲೆವು (ಗಲಾತ್ಯ 2:11). ಮಂತ್ರವಾದಿಯಾದ ಸೀಮೋನನು ತನ್ನನ್ನು "ಹಾನಿಕರವಾದ ವಿಷವೂ ದುಷ್ಟತ್ವದಲ್ಲಿ ಬಿಗಿಯುವ ಬಂಧವೂ" ಆಗಿ ಮಾಡುವಂತೆ ದುರಾಶೆಯ ಪಾಪಕ್ಕೆ ಅನುಮತಿಸುವ ಮುಂಚೆ ಶಕ್ತಿಗಳನ್ನು ಪಡೆದುಕೊಂಡಿದ್ದನೆಂಬುದು ಸ್ಪಷ್ಟವಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 8:18-24).

**ವಚನ 5.** ಮುಂದಿನ ಪದಗುಚ್ಛ **ದೇವರ ವಾಕ್ಯದ ಶ್ರೇಷ್ಠತೆಯನ್ನು . . . ಅನುಭವಿಸಿ** ಎಂಬದು. ಇಲ್ಲಿ "ವಾಕ್ಯ" ಎಂಬುದು λόγος (*logos*) ಆಗಿರುವದಿಲ್ಲ, ಅದು ಯಾವಾಗಲಾದರೊಮ್ಮೆ ಕ್ರಿಸ್ತನನ್ನು ಸೂಚಿಸಿ ಬಳಸಲ್ಪಟ್ಟಿದೆ (ಯೋಹಾನ 1:1, 2, 14) ಮತ್ತು ಅನೇಕ ಸಾರಿ ಹೊಸ ಒಡಂಬಡಿಕೆಯಲ್ಲಿ ಸುವಾರ್ತೆಯನ್ನು ಸೂಚಿಸುತ್ತದೆ. ಬದಲಾಗಿ, ಅದು ῥῆμα (*rhēma*) ಆಗಿರುತ್ತದೆ, ಅದು "ವಾಕ್ಯ" ಎಂಬುದಕ್ಕಿರುವ ಸಾಮಾನ್ಯ ಪದವಾಗಿದೆ. ಅದು ದೇವರು ಮಾತಾಡಿರುವದನ್ನು ಸಹ ಸೂಚಿಸಬಹುದಾಗಿದೆ; ಅನೇಕ ಸಾರಿ *logos* ಮತ್ತು *rhēma* ಸಮಾನ ಹೋಲಿಕೆಯ ಅರ್ಥ ಹೊಂದಿರುವಂತೆ ತೋರುತ್ತವೆ. ಕ್ರಿಸ್ತನು ಮತ್ತು ಆತನ ಕೆಲಸಕ್ಕೆ ಸಂಬಂಧ ಪಟ್ಟ ಎಲ್ಲಾ ಪದಗಳನ್ನು *rhēma* ಒಳಗೊಂಡಿರಬಹುದಾಗಿದೆ. ಅದು "ಶುಭವರ್ತಮಾನ" ಅಥವಾ ಸುವಾರ್ತೆಗೆ ಸಮಾನವಾಗಿರಬಹುದು ಎಂದು Neil R. Lightfootನು ಅಭಿಪ್ರಾಯ ಪಡುತ್ತಾನೆ.[23] ಈ "ಶುಭ ವಾಕ್ಯ" ಕ್ಕೆ ವಿಧೇಯರಾಗುವ ಮೂಲಕ (ಯೋಹಾನ 17:17 ಮತ್ತು ಅಪೊಸ್ತಲರ ಕೃತ್ಯಗಳು 20:32ರಲ್ಲಿ ಶುದ್ಧ ಮಾಡುತ್ತದೆಂದು ಹೇಳಲಾದ ವಾಕ್ಯವು λόγος [*logos*] ಎಂದಾಗಿದ್ದಾಗ್ಯೂ, ಅದು 1 ಪೇತ್ರ 1:22, 23ರಲ್ಲಿ ಸಹ ಬಳಸಲ್ಪಟ್ಟಿದೆ). ಈ ವಾಕ್ಯವನ್ನು "ಅನುಭವಿಸುವದು" (ರುಚಿಸುವದು) ಎಂದರೆ ಅದರ ಸತ್ಯದ ಸಂದೇಶ ಹಾಗೂ ಅದಕ್ಕೆ ನಾವು ತೋರುವ ವಿಧೇಯತೆಯ ಮೂಲಕ ರಕ್ಷಣೆಯುಂಟು ಮಾಡುವ ನಂಬಿಕೆಗೆ ಮತ್ತು ನಿರೀಕ್ಷೆಯ ಬಳಿಗೆ ತರಲ್ಪಡುವದು ಎಂದಾಗಿದೆ (ಇಬ್ರಿಯ 5:8, 9). ಈ ಸತ್ಯದಿಂದ ನಾವು ಶುದ್ಧಮಾಡಲ್ಪಡುತ್ತೇವೆ ಮತ್ತು ಹೊಸದಾಗಿ ಹುಟ್ಟುತ್ತೇವೆ. ತಾನು ಕೊರಿಂಥದವರನ್ನು "ಸುವಾರ್ತೆಯ ಮೂಲಕ ಪಡೆಯುವಂತೆ" ಮಾಡಿದ್ದನೆಂಬುದಾಗಿ ಪೌಲನು ಹೇಳುತ್ತಾನೆ (1 ಕೊರಿಂಥ 4:15; KJV). NASB ಯಲ್ಲಿ "ನಾನು ಸುವಾರ್ತೆಯ ಮೂಲಕ ನಿಮಗೆ ತಂದೆಯಾದೆನು" ಎಂದಿರುತ್ತದೆ.

"ದೇವರ ವಾಕ್ಯದ ಶ್ರೇಷ್ಠತೆಯನ್ನು ಅನುಭವಿಸುವ" ಮೂಲಕ ಹೊಂದಿಕೊಂಡ ನಂಬಿಕೆಯು "ನಾವು ನಿರೀಕ್ಷಿಸುವವುಗಳ ವಿಷಯವಾಗಿ ಭರವಸದಿಂದಿರುವದೂ ಕಣ್ಣಿಗೆ ಕಾಣದವುಗಳನ್ನು ನಿಜವೆಂದು ತಿಳುಕೊಳ್ಳುವದೂ ಆಗಿದೆ" (ಇಬ್ರಿಯ 11:1). ಒಬ್ಬನು ಸುವಾರ್ತೆಯನ್ನು ಆಲಿಸಿ ಅದರಲ್ಲಿ ನಂಬಿಕೆಯನ್ನಿಡುವಾಗ, ಆ ನಂಬಿಕೆಯೇ ಸ್ವತಃ ನಿತ್ಯವಾದ ವಿಮೋಚನೆಯ ಅತ್ಯಂಥ ದೊಡ್ಡ ಭರವಸವನ್ನು ಉತ್ಪಾದಿಸುತ್ತದೆ!

ಚರ್ಚೆಯಲ್ಲಿರುವ ಜನರು ಯಾವದೋ ಒಂದು ವಿಧದಲ್ಲಿ **ಮುಂದಣ ಯುಗದ ಮಹತ್ವವನ್ನು** ಹೊಂದಿಕೊಂಡಿದ್ದರು. "ಮಹತ್ವ" (ಶಕ್ತಿಗಳು; δύναμις, *dunamis* ಎಂಬ ಪದದಿಂದ ಬಂದದ್ದು) ಎಂಬುದು 2:4ರಲ್ಲಿ ಅದ್ಭುತಕಾರ್ಯಗಳನ್ನು ಮಾಡುವದರ ಸಂಬಂಧದಲ್ಲಿ ಬಳಸಲ್ಪಟ್ಟಿರುವ ಅದೇ ಪದವಾಗಿದೆ. "ಮುಂದಣ ಯುಗ" ಎಂಬುದು ಒಂದು ಸಾಮಾನ್ಯ ಮಾತಾಗಿದ್ದು ಅದು "ಮೆಸ್ಸೀಯನ ಯುಗ" ವನ್ನು ಸೂಚಿಸುವದಾಗಿತ್ತು. ಈ ಮಾತಿನ ವಿವಿಧ ರೂಪಗಳು ಹೊಸ

ಒಡಂಬಡಿಕೆಯಲ್ಲಿ ಆರು ಸಾರಿ ಕಾಣಿಸಿಕೊಳ್ಳುತ್ತವೆ, ಸುವಾರ್ತೆಯ ಬರವಣಿಗೆಗಳಲ್ಲಿ ಮೂರು ಸಾರಿ (ಮತ್ತಾಯ 12:32; ಮಾರ್ಕ 10:30; ಲೂಕ 18:30) ಮತ್ತು ಪತ್ರಿಕೆಗಳಲ್ಲಿ ಮೂರು ಸಾರಿ ಕಾಣಿಸಿಕೊಳ್ಳುತ್ತವೆ (ಎಫೆಸ 1:21; 2:7; ಇಬ್ರಿಯ 6:5).

"ಮುಂದಣ ಯುಗ" ವು ಇನ್ನೂ ಭವಿಷ್ಯದಲ್ಲಿರುವದಾಗಿದ್ದಲ್ಲಿ, ನಾವು ಹೀಗೆ ಕೇಳಿಕೊಳ್ಳತಕ್ಕದ್ದು, "ಭವಿಷ್ಯದಲ್ಲಿರುವಂತಹ ಒಂದು ಸಂಗತಿಯನ್ನು ನಾವು ಹೇಗೆ ಅನುಭವ ಮಾಡುವದಕ್ಕೆ ಸಾಧ್ಯ?" ಇದನ್ನು ಬರೆಯುವ ಹೊತ್ತಿನಲ್ಲಿ, ವಾಚಕರು ಈಗಾಗಲೆ ಇವುಗಳಲ್ಲಿನ ಕೆಲವು ಶಕ್ತಿಗಳನ್ನು ಅನುಭವಿಸಿದ್ದರು. ಆ ವೇಳೆಯಲ್ಲಿ ಸಹ ಯಾವದೋ ಒಂದು ಭವಿಷ್ಯಕ್ಕಾಗಿ ಇದ್ದದ್ದಾಗಿದ್ದರೆ, ಅವರು ಅದನ್ನು "ನಂಬಿಕೆಯಿಂದ" ಅನುಭವ ಮಾಡಿರಬಹುದಾಗಿದೆ. ಉದಾಹರಣೆಗೆ, ಅಬ್ರಹಾಮನು ಭವಿಷ್ಯವನ್ನು ದೃಷ್ಟಿಸಿದನು ಮತ್ತು ಕ್ರಿಸ್ತನನ್ನು ಕಂಡನು (ಯೋಹಾನ 8:56). ತತ್ಪರಿಣಾಮವಾಗಿ, ಆತನು ಪರಲೋಕದ ಸಮೀಪ ಎಂದಾದರೂ ಹೋಗುವ ಮುನ್ನವೇ ಅದನ್ನು ನೋಡಿದನು (ಇಬ್ರಿಯ 11:10). ಮೋಶೆಯು "ಅದೃಶ್ಯನಾಗಿರುವಾತನನ್ನು ದೃಷ್ಟಿಸುವವನೋ" ಎಂಬಂತೆ ದೇವರನ್ನು ಕಂಡನು (11:27). ಈ ಸನ್ನಿವೇಶದಲ್ಲಿ ಶಕ್ತಿಗಳು (ಮಹತ್ವ) ಎಂಬುದು ಏನೇ ಆಗಿದ್ದರೂ, ಅವುಗಳು "ಪವಿತ್ರಾತ್ಮವರದಲ್ಲಿ ಪಾಲುಗಾರರಾಗುವದು" ಎಂಬುದಕ್ಕಿಂತ ವ್ಯತ್ಯಾಸವಾಗಿರುವಂತೆ ತೋರುತ್ತವೆ.

**ವಚನ 6. ಭ್ರಷ್ಟರಾದರೆ** ಎಂಬುದು ದೇವರ ಕೃಪೆಯಿಂದ ತಪ್ಪಿಹೋಗುವ ಸಾಧ್ಯತೆಯನ್ನು ತೋರಿಸುತ್ತದೆ. RSVಯಲ್ಲಿ "ಒಂದು ಅವರು ಆಗ ಪುನಃ ಮತಭ್ರಷ್ಟತೆಯನ್ನು ಮಾಡುವ*ದಾದರೆ*" ಎಂದಿರುತ್ತದೆ (ಒತ್ತಿ ಹೇಳಿದ್ದು ನನ್ನದು), ಮತ್ತು NIVಯಲ್ಲಿ "ಅವರು ಬಿದ್ದು ಹೋಗುವ*ದಾದರೆ*" ಎಂದಿರುತ್ತದೆ (ಒತ್ತಿ ಹೇಳಿದ್ದು ನನ್ನದು). ಲೇಖಕನು ವಾಸ್ತವದಲ್ಲಿ ಅವರಿಗಿಂತ ಮುಂಚೆ ಬೇರೆಯವರಿಗೆ ಸಂಭವಿಸಿದ್ದನ್ನು ಕುರಿತು ವಾಚಕರಿಗೆ ಎಚ್ಚರಿಕೆ ನೀಡುತ್ತಿದ್ದಾನೆಂದು Lightfootನು ಹೇಳುತ್ತಾನೆ.[24] ಇದು ಎಂದಿಗೂ ಸಂಭವಿಸಲಾರದು ಎಂದು ಹೇಳಿದ Albert Barnesನಿಗೆ ತದ್ವಿರುದ್ಧವಾಗಿ,[25] ಇದು ಒಂದು ಕಾಲದಲ್ಲಿ ರಕ್ಷಣೆ ಹೊಂದಿದ್ದ ಆದರೆ ಈಗ ಬಿದ್ದು ಹೋಗಿರುವವರ ಕುರಿತ ಹೇಳಿಕೆಯಾಗಿದೆ. ಒಬ್ಬನು ಈ ಎಲ್ಲಾ ಆಶೀರ್ವಾಗಳನ್ನು ಪಡೆದುಕೊಂಡವನಾಗಿಯೂ, ಅದು ಕ್ರಿಸ್ತನಿಗೆ ನಿಜವಾಗಿಯೂ ಪರಿವರ್ತನೆಗೊಂಡದ್ದರ ಸಂಕೇತವಾಗಿದ್ದು, ಬಳಿಕ ನಂಬಿಕೆ ಹಾಗೂ ಕೃಪೆಯಿಂದ ಬಿದ್ದು ಹೋಗುವದು ಸಾಧ್ಯವಿರುತ್ತದೆ.

ಈ ಎಚ್ಚರಿಕೆಯು 1 ತಿಮೊಥೆ 1:19ರಲ್ಲಿ ಕೆಲವರು "ಕ್ರಿಸ್ತನಂಬಿಕೆಯ ವಿಷಯದಲ್ಲಿ ಹಡಗು ಒಡೆದು ನಷ್ಟ ಪಟ್ಟವರಂತೆ ಇದ್ದಾರೆ" ಎಂಬುದರ ಕುರಿತಾದ ಎಚ್ಚರಿಕೆಯೊಂದಿಗೆ ಹೋಲಿಕೆಯಾಗುವಂಥದ್ದು. ಇಲ್ಲಿ ಸಂಪೂರ್ಣ ಮತಭ್ರಷ್ಟತೆಯ ಕುರಿತು ಮಾತಾಡಲಾಗಿರುತ್ತದೆ. ಇಬ್ರಿಯರು ಹಿಂಜರಿದ ದೋಷಕ್ಕೆ ಒಳಗಾಗಿದ್ದರು, ಆದರೆ ಅವರು ಮತಭ್ರಷ್ಟತೆಯ ಹಂತವನ್ನು ತಲುಪಿರಲಿಲ್ಲ.

ಏಕೆ ಕೆಲವು ಜನರಲ್ಲಿ **ತಿರಿಗಿ ಮಾನಸಾಂತರವನ್ನು ಹುಟ್ಟಿಸುವದು ಅಸಾಧ್ಯ?**[26] ನಮ್ಮ ವಾಕ್ಯಭಾಗದಲ್ಲಿ ಪ್ರಸ್ತಾಪಿಸಲಾಗಿರುವ ಮತಭ್ರಷ್ಟರು ಎಷ್ಟೋ ಆಶೀರ್ವಾ ದಗಳನ್ನು ಪಡೆದುಕೊಂಡವರಾಗಿದ್ದು ಅವರು ಆತ್ಮೀಕ ವಿಷಯಗಳಿಗೆ ಅಸಡ್ಡೆಯನ್ನು ತೋರಿದ್ದರಿಂದ **ದೇವರ ಮಗನನ್ನು ಪುನಃ ಶಿಲುಬೆಗೆ ಹಾಕುವವರೂ ಆತನನ್ನು ಎಲ್ಲರ ಮುಂದೆ ಅವಮಾನಪಡಿಸುವವರೂ ಆಗಿದ್ದಾರೆ**. ಗ್ರೀಕ್ ಕೃದಂತ ἀνασταυροῦντας (*anastaurountas*, "ಶಿಲುಬೆಗೇರಿಸು," ἀνασταυρόω [*anastauroō*] ಎಂಬದರಿಂದ) ಸೂಚಿಸಲ್ಪಟ್ಟಿರುವ ವರ್ತಮಾನ ಕಾಲವನ್ನು ಗಮನಿಸಿರಿ. ಅವರ ಹೃದಯದ ಸನ್ನಾಹವು ಈ ಕ್ರಿಯೆಯನ್ನು ನಿರಂತರವಾಗಿ ಸಾಗುವಂಥದ್ದಾಗಿ ಮಾಡಿತ್ತು ಮತ್ತು ನಿಜವಾದ ಪಶ್ಚಾತ್ತಾಪದ ಸಾಧ್ಯತೆಯನ್ನು ನಿರ್ಮೂಲಗೊಳಿಸಿತ್ತು. ಹೇಗೂ,

ನಿರಂತರವಾಗಿ "ಶಿಲುಬೆಗೇರಿಸುವದು" ನಿಲ್ಲುವದಾದಲ್ಲಿ, ಆಗ ಅವರು "ತಿರಿಗಿ ಪಶ್ಚಾತ್ತಾಪ ಹುಟ್ಟಿಸುವದಕ್ಕೆ" ಶಕ್ತರಾಗಬಹುದಿತ್ತು ಮತ್ತು ಮತಭ್ರಷ್ಟತೆಯ ಅಂತ್ಯಾವಸ್ಥೆಯಿಂದ ದೂರವಿರಬಹುದಾಗಿತ್ತು. ಅವರು ಇನ್ನು ಮೇಲೆ ಕ್ರಿಸ್ತನನ್ನು ಎಲ್ಲರ ಮುಂದೆ ಅವಮಾನಪಡಿಸುವವರು ಆಗಿರುವದಿಲ್ಲ. ಇಲ್ಲಿ "ಅವಮಾನ" ಎಂಬುದಕ್ಕಿರುವ ಪದವು ಯೋಸೇಫನು ಮರಿಯಳನ್ನು ಬಿಟ್ಟು ಬಿಟ್ಟು ಆಕೆಯನ್ನು "ಬೈಲಿಗೆ *ತರಬಾರದೆಂದು"* (παραδειγματίζω, *paradeigmatizō* ಎಂಬ ಪದದಿಂದ ಬಂದದ್ದು) ನಿರ್ಧರಿಸಿದಾಗ ಇದೇ ಪದವು ಬಳಸಲ್ಪಟ್ಟಿದೆ.

**ಆದ್ದರಿಂದ** ಎಂಬುದನ್ನು "ಯಾಕೆಂದರೆ" ಎಂದು ಅನುವಾದಿಸಬಹುದು (NASBಯ ಕೆಲವು ಅಂಚುಗಳಲ್ಲಿ ಟಿಪ್ಪಣಿ ಮಾಡಲ್ಪಟ್ಟಿರುವ ಪ್ರಕಾರ), ಮತ್ತು "ಆದರೂ" ಎಂಬ ಪದವನ್ನು ಸೇರ್ಪಡೆಗೊಳಿಸಬಹುದು (ವರ್ತಮಾನಕಾಲರೂಪ ಕೃದಂತವನ್ನು ದೃಷ್ಟಿಯಲ್ಲಿಟ್ಟುಕೊಂಡು). ಆ ರೀತಿಯಾದ ಅರ್ಥನಿರೂಪಣೆಯೊಂದಿಗೆ ಸಹ, ಬಣ್ಣಿಸಲ್ಪಟ್ಟಿರುವ ವ್ಯಕ್ತಿಯ ಭವಿಷ್ಯವು ಮಂದವಾಗಿತ್ತು.

ಪರಿಗಣನೆಯಲ್ಲಿರುವ ಆತ್ಮಗಳು ತೊಳಲಾಟದಲ್ಲಿರುವ "ಹಿಂಜರಿಕೆಗಾರರು" ಆಗಿರಲಿಲ್ಲ; ಅವರು ಸಂಪೂರ್ಣ ಮತಭ್ರಷ್ಟರಾಗಿದ್ದರು. ಇವರಿಬ್ಬರ ನಡುವೆ ಒಂದು ವ್ಯತ್ಯಾಸವನ್ನು ಗುರುತಿಸತಕ್ಕದ್ದು. ಮತಭ್ರಷ್ಟನನ್ನು "ಶಾಪಕ್ಕೊಳಗಾದವನು" ಎಂದು ಎಣಿಸತಕ್ಕದ್ದು (ಗಲಾತ್ಯ 1:8, 9).

ಏಕೆ ಅವನು ನಿರೀಕ್ಷೆಯಿಲ್ಲದವನಾಗಿದ್ದಾನೆ? ಏಕೆಂದರೆ ಆತನು ತನಗೆ ಪಶ್ಚಾತ್ತಾಪ ಪಡುವದಕ್ಕೆ ಅಸಾಧ್ಯವಾಗುವಷ್ಟರ ಮಟ್ಟಿಗೆ ತನ್ನ ಹೃದಯವನ್ನು ಕಠಿಣಗೊಳ್ಳಲು ಅನುಮತಿಸಿರುತ್ತಾನೆ. ಅಂಥ ವ್ಯಕ್ತಿಗಳು ದಂಡನೆಗೆ ಯೋಗ್ಯರು ಯಾಕೆಂದರೆ ಅವರು ಕೇವಲ ಕ್ರಿಸ್ತನಲ್ಲಿ ನಂಬಿಕೆಯಿಡುವದಕ್ಕೆ ವಿಫಲರಷ್ಟೆ ಆಗಿರುವದಿಲ್ಲ, ಆದರೆ ಅವರು ಲೋಕದ ಮುಂದೆ ಆತನನ್ನು ಅವಮಾನಕ್ಕೀಡು ಮಾಡಿದ್ದಾರೆ. ಅವರ ಮತಭ್ರಷ್ಟತೆಯು ನಮ್ಮ ಕರ್ತನು ಶಿಲುಬೆಗೆ ಹಾಕಲ್ಪಟ್ಟದ್ದನ್ನು ಅಪಹಾಸ್ಯ ಮಾಡಿದಂತಿರುತ್ತದೆ. ದೇವರು ಅಂತಹ ಕಠಿಣವಾದ ಪಾಪಿಗಳಿಂದ ತನ್ನ ಪರಿವರ್ತನೆಯ ಶಕ್ತಿಯನ್ನು ಕಡಿದು ಬಿಡುತ್ತಾನೆ.[27] ತಮ್ಮೊಳಗೆ ಅವಿಧೇತೆಯನ್ನು ಉಳಿದುಕೊಳ್ಳುವಂತೆ ಬಿಡುವದೆಂದರೆ ರಕ್ಷಕನನ್ನು ಎಲ್ಲರ ಮುಂದೆ ಅವಮಾನಕ್ಕೊಳಪಡಿಸಿದಂತಾಗುತ್ತದೆ. ಅವರು ತಮ್ಮನ್ನು ಶಿಲುಬೆಯ ಮೇಲೆ ಯೇಸುವನ್ನು ಅಪಹಾಸ್ಯ ಮಾಡಿದರ ಜೊತೆಯಲ್ಲಿ ಗುರುತಿಸಿಕೊಳ್ಳುವವರಾಗುತ್ತಾರೆ. ಅಪನಂಬಿಗಸ್ತರಾದ ಕ್ರೈಸ್ತರು ಪುನಃ ಕ್ರಿಸ್ತನನ್ನು ಅಕ್ಷರಶಃ ಶಿಲುಬೆಗೆ ಹಾಕುವದಕ್ಕೆ ಸಾಧ್ಯವಿಲ್ಲ ಯಾಕೆಂದರೆ ಆತನು ಪರಲೋಕದಲ್ಲಿ ಸಿಂಹಾಸನಾರೂಢನಾಗಿದ್ದಾನೆ, ಆದರೆ ಅವರ ಕೃತ್ಯಗಳು ಆತನನ್ನು ಮರಕ್ಕೆ ಜಡಿದು ಆತನನ್ನು ಅಪಹಾಸ್ಯ ಮಾಡುವದಕ್ಕೆ ಹೋಲಿಕೆಯಾಗುತ್ತವೆ.

ಪಶ್ಚಾತ್ತಾಪವು ಒಬ್ಬ ದೇವಮನುಷ್ಯನ ಜೀವನದಲ್ಲಿ ಒಂದು ಸ್ವಾಭಾವಿಕ ಮತ್ತು ದೈನಂದಿನ ಸಂಭವವಾಗಿರಬೇಕು. ತಾನು ಪ್ರಮಾದವನ್ನು, ತಪ್ಪನ್ನು ಮಾಡಿದ್ದಾನೆ, ಅಥವಾ ಮತ್ತೊಬ್ಬರೊಂದಿಗೆ ಅನುಚಿತವಾಗಿ ನಡೆದುಕೊಂಡಿದ್ದಾನೆ ಎಂದು ಅತಿ ಸ್ವಲ್ಪ ಸೂಚನೆಯು ಸಿಕ್ಕರೆ, ಒಬ್ಬ ದೇವಮನುಷ್ಯನು, "ನನ್ನದು ತಪ್ಪಾಯಿತು, ಕ್ಷಮಿಸು. ನಿನಗೆ ನೋವುಂಟು ಮಾಡುವದು ನನ್ನ ಉದ್ದೇಶವಾಗಿರಲಿಲ್ಲ" ಎಂದು ಹೇಳುವದು ಮತ್ತು ಅದನ್ನು ಪ್ರಾಮಾಣಿಕವಾಗಿ ಹೇಳುವದು ಸರ್ವಸಾಧಾರಣವಾಗಿರುತ್ತದೆ. ಕಠಿಣ ಹೃದಯದ ಹಿಂಜರಿಕೆಗೊಂಡವನು ತನ್ನ ಕರ್ತನ ಕಡೆಗೆ ಅಂಥ ಮನೋಭಾವವನ್ನು ತೋರ್ಪಡಿಸುವದಿಲ್ಲ; ಆತನು ತನ್ನ ಪಾಪಗಳಿಗಾಗಿ ಯಾವದೇ ದುಃಖವನ್ನು ಹೊಂದದೆ ಇರುವ ಹಂತವನ್ನು ತಲುಪಿರುತ್ತಾನೆ. ಆತನಿಗೆ ದಂಡನೆಯ

ತೀರ್ಪಿನಿಂದ ತಪ್ಪಿಸಿಕೊಳ್ಳುವ ಬಯಕೆಯಿದ್ದಾಗ್ಯೂ, ಆತನಿಗೆ ಅದು ಸಾಧ್ಯವಿರುವದಿಲ್ಲ.

ಯಾವದೇ ಹಿಂಜರಿದ ಪಾಪಿಗೆ ಪಶ್ಚಾತ್ತಾಪ ಪಡುವ ಅವಕಾಶವೇ ಇರುವದಿಲ್ಲ ಎಂದು ಹೇಳುವದು ಅತ್ಯಂಥ ಅತಿರೇಕವಾಗುತ್ತದೆ, ಪ್ರಾಚೀನ ಸಭೆಯಲ್ಲಿ ಕೆಲವರು ಹಾಗೆಯೇ ಬೋಧಿಸುತ್ತಿದ್ದರು. ಅದು 1 ಯೋಹಾನ 1:7-10ನ್ನು ಉಲ್ಲಂಘನೆ ಮಾಡಿದಂತಾಗುತ್ತದೆ ಮತ್ತು ದೇವರ ಒಬ್ಬ ಮಗುವಿಗಿಂತಲೂ ಒಬ್ಬ ಅಪರಿಚಿತ ಪಾಪಿಗೆ ಹೆಚ್ಚು ಕರುಣೆ ದೊರಕುತ್ತದೆಂದು ಅರ್ಥವನ್ನು ಕೊಟ್ಟಂತಾಗುತ್ತದೆ. ಸತ್ಯವಾಗಿಯೂ, ಪಾಪದಿಂದ ತಪ್ಪಿಸಿಕೊಂಡು ಪುನಃ ಅದರಿಂದ ಪೂರ್ಣವಾಗಿ ಸೋಲಿಸಲ್ಪಟ್ಟರೆ, "ಅವರ ಅಂತ್ಯಸ್ಥಿತಿಯು ಮೊದಲಿಗಿಂತ ಕೆಟ್ಟದ್ದಾಗಿದೆ" (2 ಪೇತ್ರ 2:20-22). ಅಂತ ವ್ಯಕ್ತಿಗಳು ಎಂದಿಗೂ ಪರಿವರ್ತನೆಯನ್ನು ಹೊಂದದವರಾಗಿದ್ದಲ್ಲಿ, ಅವರು "ಮೊದಲು" ತಪ್ಪಿಸಿಕೊಂಡವರು ಆಗಿರುವದೇ ಇಲ್ಲ ಮತ್ತು "ಅಂತ್ಯಸ್ಥಿತಿ" ಎಂಬುದು ಇರುವದೇ ಇಲ್ಲ ಎಂದಾಗುತ್ತದೆ.

ಕ್ರೈಸ್ತರು ಪುನಃ ಚೇತರಿಸಿಕೊಳ್ಳಲಾರದಷ್ಟರ ಮಟ್ಟಿಗೆ ಬಿದ್ದು ಹೋಗಬಲ್ಲರೋ? "ಅವರಲ್ಲಿ ತಿರಿಗಿ ಮಾನಸಾಂತರ ಹುಟ್ಟಿಸುವದು ಅಸಾಧ್ಯವೋ"? ಕೆಲವರು ಈ ಪದಗುಚ್ಛವು ಅತಿ ಕಠೋರವಾಗಿದೆ ಎಂದು ಯೋಚಿಸಿರುತ್ತಾರೆ ಮತ್ತು ಅದನ್ನು ಸ್ವಲ್ಪ ಮೃದುವಾಗಿ "ಅದು ಕಷ್ಟಕರ" ಎಂದು ಬದಲಾಯಿಸಿರುತ್ತಾರೆ.[28] ಇನ್ನು ಕೆಲವರು ಹೇಳಿಕೆಯನ್ನು ಮತ್ತಷ್ಟು ಮೃದುಗೊಳಿಸಿ "ಅಸಾಧ್ಯ" ಎಂಬುದರೊಂದಿಗೆ "ಮಾನವನಿಂದ" ಎಂಬುದನ್ನು ಸೇರ್ಪಡೆಗೊಳಿಸಿ, ಅದು "ಆ ವ್ಯಕ್ತಿಯನ್ನು ಪಶ್ಚಾತ್ತಾಪಕ್ಕೆ ಪುನಃ ಕರೆ ತರಲು ಯಾವ ಮನುಷ್ಯನಿಂದಲೂ ಸಾಧ್ಯವಿಲ್ಲ, ಆದರೆ ದೇವರು ಮಾತ್ರವೇ ತರಬಲ್ಲನು" ಎಂದು ಹೇಳುತ್ತದೋ ಎಂಬಂತೆ ಬದಲಾಯಿಸಿರುತ್ತಾರೆ. ಹೇಗೂ, ವಾಕ್ಯಭಾಗದಲ್ಲಿ "ಮನುಷ್ಯನಿಂದ" ಎಂಬಂತಹ ಯಾವದೇ ಭಾವನೆಯು ಇರುವದಿಲ್ಲ; ಆ ನ್ಯಾಯಯುತವಲ್ಲದ ರೀತಿಯಲ್ಲಿ ವಾಕ್ಯವನ್ನು ನಡಿಸಿಕೊಳ್ಳುವದು ಎಚ್ಚರಿಕೆಯ ವಾಸ್ತವಿಕತೆಯನ್ನು ಅಲ್ಲಗಳೆಯುತ್ತದೆ. ಒಂದು ಕಾಲದಲ್ಲಿ ನಿಜವಾಗಿಯೂ ಪರಿವರ್ತನೆಗೊಂಡಿದ್ದ ನಿಜ ಮತಭ್ರಷ್ಟನು[29] ನಂಬಿಕೆಗೆ ಹಿಂದಿರುಗಿ ಬರುವದಕ್ಕೆ ಸಾಧ್ಯವಿಲ್ಲದಷ್ಟರ ಮಟ್ಟಿಗೆ ತನ್ನನ್ನು ಕಠಿಣಪಡಿಸಿಕೊಂಡಿದ್ದಾನೆಂಬುದನ್ನು ವಾಕ್ಯಭಾಗವು ವಿಧಿಸುತ್ತದೆ. ಇದು ಮಾನವ ಹಾಗೂ ದೇವರ ಇಬ್ಬರ ದೃಷ್ಟಿಕೋನಗಳಿಂದಲೂ ಅಷ್ಟೆ ಸತ್ಯವಾದದ್ದು ಯಾಕೆಂದರೆ ಅದು ಪ್ರೇರಿತ ಲೇಖಕನಿಂದ ಒಂದು ವಾಸ್ತವಾಂಶವಾಗಿ ಹೇಳಲ್ಪಟ್ಟಿದೆ! ಇಲ್ಲಿ ಬಣ್ಣಿಸಲ್ಪಟ್ಟಿರುವಂತಹ ವ್ಯಕ್ತಿಗಳಿಗೆ ನಿಜವಾದ ಪಶ್ಚಾತ್ತಾಪವು ಅಸಾಧ್ಯದ ಮಾತಾಗಿರುತ್ತದೆ.

"ಅಸಾಧ್ಯ" ಎಂಬ ಪದವನ್ನು ತೆಗೆದುಕೊಂಡು ಕೆಲವರು ಯಾವದೋ ಒಂದು ಕಾರ್ಯವನ್ನು, ಉದಾಹರಣೆಗೆ "ಒಂಟೆಯು ಸೂಜೀಕಣ್ಣಿನಲ್ಲಿ ನುಗ್ಗಿಹೋಗುವದು," ಕಾರ್ಯವನ್ನು ಮನುಷ್ಯರಿಂದ ಅಲ್ಲ, ಆದರೆ ದೇವರಿಂದ ಸಾಧಿಸಲ್ಪಡಬಲ್ಲದು ಎಂದು ಅರ್ಥವನ್ನು ನೀಡುತ್ತಾರೆ (ಮಾರ್ಕ 10:25-27).[30] ಇನ್ನು ಕೆಲವರು ವಾಕ್ಯಭಾಗದ ಅರ್ಥವು ಜೊತೆಯ ಕ್ರೈಸ್ತರು ಮಾತ್ರವೇ ಮತಭ್ರಷ್ಟರನ್ನು ನಡಿಸುವದಕ್ಕೆ ಸಾಧ್ಯವಿಲ್ಲ ಎಂದಾಗಿರುತ್ತದೆಂದು ಯೋಚಿಸುತ್ತಾರೆ. ಇಬ್ರಿಯರಿಗೆ ಪತ್ರಿಕೆಯಲ್ಲಿ ಬಳಸಲ್ಪಟ್ಟಿರುವ "ಅಸಾಧ್ಯ" ಎಂಬ ಪದವನ್ನು ಇನ್ನಷ್ಟು ಅಧ್ಯಯನ ಮಾಡುವ ಅಗತ್ಯವಿರುತ್ತದೆ. ಇಬ್ರಿಯರಿಗೆ ಪತ್ರಿಕೆಯು ದೇವರು ಸುಳ್ಳಾಡುವದು *ಅಸಾಧ್ಯ* ಎಂದು (6:18), ಪ್ರಾಣಿಗಳ ಯಜ್ಞಗಳು ಪಾಪಪರಿಹಾರ ಮಾಡುವದು *ಅಸಾಧ್ಯ*ವಾಗಿದೆ (10:4), ಮತ್ತು ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು *ಅಸಾಧ್ಯ* ಎಂದು (11:6) ಹೇಳುತ್ತದೆ. ಭ್ರಷ್ಟರಾಗುವದು ಒಂದು ನಿಜವಾದ ಅಪಾಯವಾಗಿದೆ, ಹೊರತು ಒಂದು "ಸೈದ್ಧಾಂತಿಕ ಅಸಾಧ್ಯತೆ" ಆಗಿರುವದಿಲ್ಲ. ಈ ಮತಭ್ರಷ್ಟತೆಯು ಸ್ವಭಾವದಲ್ಲಿ ಸಂಪೂರ್ಣವಾಗಿತ್ತು, ಯಾಕೆಂದರೆ ತನ್ನ ಪಾಪವನ್ನು ಒಪ್ಪಿಕೊಳ್ಳುವ ಒಬ್ಬ ಪಶ್ಚಾತ್ತಾಪವುಳ್ಳ ಕ್ರೈಸ್ತನು ದೇವರ ಬಳಿಗೆ ಹಿಂದಿರುಗಬಲ್ಲನು (1 ಯೋಹಾನ

1:7-10; 2:1, 2; ಗಲಾತ್ಯ 6:1, 2). ಯೋಹಾನ 21:15-19 ಮತ್ತು ಲೂಕ 24:54-62ರಲ್ಲಿ ಪೇತ್ರನ ಪ್ರಕರಣವನ್ನು ಪರಿಗಣಿಸಿರಿ.

ಹಿಂದಿರುಗಿ ಬರಲಿಕ್ಕಾದಂತಹ ಒಂದು ಘಟ್ಟವಿರುತ್ತದೆ. ಒಬ್ಬನು ಸತತವಾಗಿ ಪಾಪದಲ್ಲಿರುವ ಉಳಿಯುವದಾದರೆ ಆತನು ತನ್ನನ್ನು ದೇವರ ಕೃಪೆಯು ತಲುಪಲಾಗದಂತಹ ಒಂದು ಸ್ಥಳದಲ್ಲಿ ಇಟ್ಟುಕೊಳ್ಳುವವನಾಗಿದ್ದಾನೆ. ಬೇರೆ ಕೆಲವು ವಾಕ್ಯಭಾಗಗಳು "ಪವಿತ್ರಾತ್ಮನ ವಿರುದ್ಧ ದೂಷಣೆ" ಗೆ ಸಂಬಂಧಿಸಿದಂತೆ ಅದೇ ಸತ್ಯವನ್ನು ಕಲಿಸುತ್ತವೆ (ಮತ್ತಾಯ 12:31, 32; ನೋಡಿರಿ ಮಾರ್ಕ 3:28, 29).[31] ಈ ತತ್ವವು ಇಬ್ರಿಯ 10:26-29ರಲ್ಲಿ ಪರೋಕ್ಷವಾಗಿ ಸೂಚಿಸಲ್ಪಟ್ಟಿರುತ್ತದೆ.

**ವಚನಗಳು 7, 8.** ಒಬ್ಬನಿಗೆ ಸುವಾರ್ತೆಯು ಪ್ರಕಟಗೊಳಿಸಲ್ಪಡುವಾಗ ಏನು ಸಂಭವಿಸುತ್ತದೆಂಬುದನ್ನು ದೃಷ್ಟಾಂತಪಡಿಸುವದಕ್ಕೆ ಒಂದು ಪರಿಚಿತವಾದ ಕೃಷಿ ದೃಶ್ಯಾವಳಿಯು ಬಳಸಲ್ಪಟ್ಟಿದೆ.

ಇಲ್ಲಿ ಒಂದೇ ರೀತಿಯ **ಬೆಳೆಯನ್ನು** ಉತ್ಪಾದಿಸದಂತಹ **ಭೂಮಿಯ** ಎರಡು ಕ್ಷೇತ್ರಗಳ ನಡುವೆ – ಪ್ರತಿಯೊಂದು ಒಂದೇ ರೀತಿಯ ನೆಲ ಹೊಂದಿದ್ದು ತಾಜಾಗೊಳಿಸುವ ಅದೇ **ಮಳೆಯನ್ನು** ಪಡೆಯುವವುಗಳಾಗಿದ್ದವು. ಒಂದು ಭೂಮಿಯಲ್ಲಿನ ಯಾವದೋ ಒಂದು **ಮುಳ್ಳುಗಿಡಗಳನ್ನೂ ಕಳೆಗಳನ್ನೂ** ಬೆಳೆಸುತ್ತದೆ. ಅದೇ ರೀತಿಯಲ್ಲಿ, ಕ್ರೈಸ್ತರು ಒಂದೇ ರೀತಿಯಾದ ಆಶೀರ್ವಾದಗಳನ್ನು ಪಡೆದುಕೊಳ್ಳಬಹುದು, ಆದಾಗ್ಯೂ ಕೆಲವರು ಕೃಪೆಯಲ್ಲಿ ಬೆಳೆದರೆ ಇನ್ನು ಕೆಲವರು ಪುನಃ ಪಾಪದಲ್ಲಿ ಸಿಕ್ಕಿಕೊಳ್ಳುತ್ತಾರೆ. ಪ್ರತಿಯೊಬ್ಬನು ದೇವರಿಂದ ಸಿಕ್ಕುವ **ಆಶೀರ್ವಾದಗಳಿಗೆ** ಹೇಗೆ ಸ್ಪಂದಿಸುತ್ತಾನೆಂಬುದಕೆ ಸ್ವತಃ ಜವಾಬ್ದಾರನಾಗಿದ್ದಾನೆ. ಒಬ್ಬನು ದೇವರಿಂದ ಕೊಡಲ್ಪಟ್ಟಿರುವ ಸವಲತ್ತುಗಳಿಗೆ ಹೆಚ್ಚು ಯೋಗ್ಯನಾಗುವಂತೆ ತನ್ನ ಗುಣಸ್ವಭಾವವನ್ನು ಬದಲಾಯಿಸಿಕೊಳ್ಳದೆಯೇ ಅವುಗಳನ್ನು ಆನಂದಿಸುವದು ಎಷ್ಟು ಅಹಸ್ಯಕರವಾದದ್ದು! 4 ಮತ್ತು 6 ವಚನಗಳಲ್ಲಿ ಹೆಸರಿಸಲಾಗಿರುವ ಆಶೀರ್ವಾದಗಳನ್ನು ಪಡೆದುಕೊಂಡು, ಬಳಿಕ ಅವುಗಳನ್ನು ಅನುಗ್ರಹಿಸಿದ ಕರ್ತನನ್ನು ತಿರಸ್ಕರಿಸುವವರು ದಂಡನೆಯಲ್ಲದೆ ಬೇರೆ ಏನನ್ನೂ ಹೊಂದುವದಕ್ಕೆ ಯೋಗ್ಯರಲ್ಲ.

ಯೆಶಾಯ 5:1-10 ಮತ್ತು ಯೆರೆಮೀಯ 2:21ರಲ್ಲಿ ಮಾನವರು ಗಿಡಗಳಿಗೆ ಹೋಲಿಕೆ ಮಾಡಲ್ಪಟ್ಟಿದ್ದಾರೆ. ದೇವರು ಫಲ – ಉತ್ಪಾದಿಸುವ ಭೂಮಿಯನ್ನು ಮತ್ತು ಜನರನ್ನು ಆಶೀರ್ವದಿಸುತ್ತಾನೆ, ಹೀಗೆ ಅವರು ಹೆಚ್ಚು ಫಲ ಕೊಡುವವರಾಗಬೇಕೆಂದು ಆಶೀರ್ವದಿಸುತ್ತಾನೆ. ಇದು ಯೋಹಾನ 15:2ರಲ್ಲಿ ಯೇಸುವು ನೀಡಿದ ಉಪದೇಶವನ್ನು ನೆನಪಿಗೆ ತರುತ್ತದೆ: "ನನ್ನಲ್ಲಿದ್ದು ಫಲಕೊಡದಿರುವ ಪ್ರತಿಯೊಂದು ಕೊಂಬೆಯನ್ನು ಆತನು ತೆಗೆದುಹಾಕುತ್ತಾನೆ; ಫಲಕೊಡುವ ಪ್ರತಿಯೊಂದು ಕೊಂಬೆಯು ಹೆಚ್ಚು ಫಲಕೊಡುವ ಹಾಗೆ ಅದನ್ನು ಶುದ್ಧಿಮಾಡುತ್ತಾನೆ."

ವ್ಯವಸಾಯಗಾರನ ಪರಿಶ್ರಮದ ಹೊರತಾಗಿಯೂ, ಕೆಲವೊಂದು ಭೂಮಿ ಯೋಗ್ಯವಿಲ್ಲದ್ದಾಗಿರುತ್ತದೆ ಮತ್ತು **ಸುಡಲ್ಪಡುವದಕ್ಕೆ** ಮಾತ್ರವೇ ಯೋಗ್ಯವಾದ ಕಳೆಗಳನ್ನಲ್ಲದೆ ಬೇರೆ ಏನನ್ನು ಉತ್ಪಾದಿಸದಂತೆ ತೋರುತ್ತದೆ. ಫಲರಹಿತ ಮತಭ್ರಷ್ಟನಿಗೆ ಅದೇ ಸಂಭವಿಸುವದೆಂದು ಯೇಸು ಹೇಳುತ್ತಾನೆ (ಯೋಹಾನ 15:5, 6). ಫಲ ಕೊಡದ ಕೊಂಬೆಗಳನ್ನು ಸುಟ್ಟು ಹಾಕುವದರ ಮೇಲೆ ಒತ್ತು ಕೊಡುವದು ಅತ್ಯಂತ ಸಾಮಾನ್ಯವಾಗಿದ್ದು ಅದನ್ನು ಅಕ್ಷರಶಃ ಘಟನೆ ಎಂದು ಕಾಣತಕ್ಕದ್ದು.[32]

## ದೈವಿಕ ವಾಗ್ದಾನಗಳ ಭರವಸ (6:9-20)

### 6:9-12

**[9]ಆದರೆ ಪ್ರಿಯರೇ, ಈ ರೀತಿಯಾಗಿ ನಾವು ಮಾತಾಡಿದರೂ ನೀವು ಇದಕ್ಕಿಂತ ಉತ್ತಮವಾಗಿಯೂ ರಕ್ಷಣಕರವಾಗಿಯೂ ಇರುವ ಸ್ಥಿತಿಯಲ್ಲಿದ್ದೀರೆಂದು ದೃಢವಾಗಿ ನಂಬಿದ್ದೇನೆ.**
**[10]ನೀವು ದೇವಜನರಿಗೆ ಉಪಚಾರ ಮಾಡಿದಿರಿ, ಇನ್ನೂ ಮಾಡುತ್ತಾ ಇದ್ದೀರಿ. ಈ ಕೆಲಸವನ್ನೂ ಇದರಲ್ಲಿ ನೀವು ದೇವರ ನಾಮದ ವಿಷಯವಾಗಿ ತೋರಿಸಿದ ಪ್ರೀತಿಯನ್ನೂ ಆತನು ಮರೆಯುವದಕ್ಕೆ ಅನ್ಯಾಯಸ್ಥನಲ್ಲ.**

**[11]ನೀವು ಉಪಚಾರಮಾಡುವದರಲ್ಲಿ ಯಾವ ಆಸಕ್ತಿಯನ್ನು ತೋರಿಸಿದ್ದೀರೋ ನಿಮ್ಮ ನಿರೀಕ್ಷೆ ದೃಢ ಮಾಡಿಕೊಂಡು ಕಡೇ ತನಕ ಹಿಡಿಯುವದರಲ್ಲಿಯೂ ನಿಮ್ಮಲ್ಲಿ ಪ್ರತಿಯೊಬ್ಬರು ಅದೇ ಆಸಕ್ತಿಯನ್ನು ತೋರಿಸಬೇಕೆಂದು ಅಪೇಕ್ಷಿಸುತ್ತೇವೆ. [12]ನೀವು ಮಂದಮತಿಗಳಾಗಿರದೆ ಯಾರು ವಾಗ್ದಾನಗಳನ್ನು ನಂಬಿ ಅವುಗಳ ಫಲಕ್ಕೋಸ್ಕರ ಬಹು ದಿವಸಗಳವರೆಗೂ ಕಾದಿದ್ದು ಆ ಫಲವನ್ನು ಹೊಂದುತ್ತಾರೋ ಅವರನ್ನು ಅನುಸರಿಸುವವರಾಗಬೇಕೆಂದು ಕೋರುತ್ತೇವೆ.**

ದೇವರಿಂದ ತೊಲಗಿ ಹೋಗುವದರ ಅಪಾಯದ ಕುರಿತು ತನ್ನ ವಾಚಕರನ್ನು ಎಚ್ಚರಿಸಿದ ಬಳಿಕ, ಲೇಖಕನು ತನ್ನ ಸಂದೇಶವನ್ನು, 3ನೇ ಅಧ್ಯಾಯದಲ್ಲಿರುವ ಪ್ರಕಾರವೇ ಒಂದು ಹೆಚ್ಚು ಸಕಾರಾತ್ಮಕವಾದ ದಿಕ್ಕಿಗೆ ತಿರುಗಿಸುತ್ತಾನೆ. 6ನೇ ವಚನದಲ್ಲಿನ ಮತಭ್ರಷ್ಟರು ಎಲ್ಲರ ಮುಂದೆ ಯೇಸುವಿನ ಮರ್ಯಾದೆಯನ್ನು ತೆಗೆಯುತ್ತಿದ್ದರೆ, 6:9-12ರಲ್ಲಿ ಸಂಬೋಧಿಸಲ್ಪಟ್ಟಿರುವವರು ಅದಕ್ಕೆ ವಿರುದ್ಧವಾದದ್ದನ್ನು ಮಾಡುತ್ತಿದ್ದರು. ಅವರು ಆತನ ಹೆಸರಿಗೆ ಪ್ರೀತಿ ಮತ್ತು ಸ್ತುತಿಯೊಂದಿಗೆ ಪ್ರತಿಕ್ರಿಯಿಸಿದ್ದರು. ಈ ವಿಭಾಗದಲ್ಲಿ ಕೊಡಲಾಗಿರುವ ಬುದ್ಧಿವಾದಗಳನ್ನು ಪ್ರತಿಯೊಬ್ಬ ಕ್ರೈಸ್ತನು ಹೃದಯಕ್ಕೆ ತೆಗೆದುಕೊಳ್ಳತಕ್ಕದ್ದು.

**ವಚನ 9.** ವಾಚಕರು ಉನ್ನತವಾದ ಗುರಿಗಳನ್ನು ಬೆನ್ನಟ್ಟುವ ಕೆಲಸ ಮುಂದುವರೆಸಬೇಕೆಂಬುದು ಲೇಖಕನ ಬಯಕೆಯಾಗಿತ್ತು. ಆತ್ಮೀಕವಾಗಿ ಬೆಳೆಯುವದಕ್ಕಾಗಿ, ಅವರು **ರಕ್ಷಣಕರವಾದ** ಸಂಗತಿಗಳ ಮೇಲೆ ಮುಖ್ಯವಾದ ಗಮನವನ್ನು ಹರಿಸಬೇಕಿತ್ತು.

**ನಾವು** ಎಂಬ ಮಾತನ್ನು ಬಳಸುವ ಮೂಲಕ ಲೇಖಕನು ಅನೇಕ ಸಾರಿ ಪತ್ರಿಕೆಯನ್ನು ಸ್ವೀಕರಿಸಿಕೊಂಡವರ ಜೊತೆಯಲ್ಲಿ ತನ್ನನ್ನು ಸೇರಿಸಿಕೊಳ್ಳುತ್ತಾನೆ (2:1, 3; 3:6ರಲ್ಲಿರುವಂತೆ) ಮತ್ತು ಕೆಲವು ಸಾರಿ ಅಧ್ಯಾಯ 4ರಲ್ಲಿರುವ ಪ್ರಕಾರ, ಎಲ್ಲಾ ಕ್ರೈಸ್ತರನ್ನು ಸೇರ್ಪಡೆಗೊಳಿಸುತ್ತಾನೆ. ಕೆಲವು ಸಾರಿ "ನಾವು" ಎಂಬುದನ್ನು ಬೋಧಕನು ತನ್ನನ್ನು ಮತ್ತು ತನ್ನ ಶ್ರೋತೃಗಳನ್ನು ಸೂಚಿಸುವದಕ್ಕೆ ಬಳಸುವಂತೆ ತೋರುತ್ತದೆ (ಬಹುಶಃ 2:5; 5:11; 9:5ರಲ್ಲಿರುವಂತೆ). ಇನ್ನು ಕೆಲವು ಸಂದರ್ಭಗಳಲ್ಲಿ ಲೇಖಕನು ತನ್ನೊಂದಿಗೆ ಪತ್ರಿಕೆಯನ್ನು ಬರೆಯುವದರಲ್ಲಿ ಭಾಗಿಯಾಗಿರುವ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನು ಸೇರ್ಪಡೆಗೊಳಿಸಿ ಹೇಳುತ್ತಿರಬಹುದಾಗಿದೆ. ಅದು 2:5 ಮಾತ್ರವಲ್ಲದೆ 13:18ರಲ್ಲಿ ಸತ್ಯವಾಗಿರಬಹುದಾಗಿದೆ. 6:9ರಲ್ಲಿ ಲೇಖಕನು ತನಗೋಸ್ಕರ ಮತ್ತು ಕನಿಷ್ಠ ಬೇರೆ ಇನ್ನೊಬ್ಬ ವ್ಯಕ್ತಿಗೋಸ್ಕರ ಮಾತಾಡುತ್ತಿರಬಹುದಾಗಿದೆ.

ಇದೇ ಪ್ರಥಮ ಬಾರಿಗೆ ಪ್ರಕರಣ ಗ್ರಂಥವು ಸ್ವೀಕರಿಸಿಕೊಂಡವರನ್ನು **ಪ್ರಿಯರೇ** ಎಂದು ಕರೆಯುತ್ತದೆ. ಈ ಪದವು ಒಂದು ಔಪಚಾರಿಕ ಸಭ್ಯತೆಗಿಂತಲೂ ಹೆಚ್ಚಿನದ್ದಾಗಿದೆ; ಲೇಖಕನು ಈ ಜನರ ಕಡೆಗೆ ನಿಜವಾದ ಆದರದ ಭಾವವನ್ನು ವ್ಯಕ್ತಪಡಿಸುತ್ತಿದ್ದಾನೆ. ಅವರು ಸಹೋದರರಿಗೆ

ತಮ್ಮ ಪ್ರೀತಿಯನ್ನು ತೋರ್ಪಡಿಸಿದ ವಿಧಕ್ಕಾಗಿ (ವ. 10), ಅವರು "ಪ್ರಿಯರೇ" ಎಂಬ ಬಣ್ಣನೆಗೆ ಯೋಗ್ಯವಾಗಿದ್ದರು. ಲೇಖಕನು ಅವರನ್ನು **ಈ ರೀತಿಯಾಗಿ** ಕಠಿಣ ಭಾಷೆಯಲ್ಲಿ (6:4-6) ಸಂಬೋಧಿಸಿದ್ದನಾದರೂ, ಅವರು ಅಪಾಯದ ಬಗ್ಗೆ ಎಚ್ಚರಗೊಂಡಿರಲೆಂಬ ಕಾರಣಕ್ಕಾಗಿ ಪ್ರೀತಿಯಿಂದಾಗಿ ಆ ರೀತಿ ಮಾಡಿದ್ದನು. ಪೌಲನು ರೋಮಾಪುರದ ಸಹೋದರರ ವಿಷಯದಲ್ಲಿ ಅವರು "ಒಳ್ಳೇತನದಿಂದ ಭರಿತ" ರಾಗಿದ್ದಾರೆಂದು **ಮನವರಿಕೆಗೊಂಡ** ಪ್ರಕಾರವೇ (ರೋಮಾ 15:14), ಇಬ್ರಿಯ ಕ್ರೈಸ್ತರಲ್ಲಿದ್ದ ಉತ್ತಮ ಗುಣಗಳ ಬಗ್ಗೆ ಆತನು ದೃಢವಾಗಿ ನಂಬಿದ್ದನು.

"ರಕ್ಷಣೆಯ ಜೊತೆಯಾಗಿ" ಎಂಬ ಪದಗುಚ್ಛವು ಈ ಕ್ರೈಸ್ತರು ಬೆಳೆಯಬೇಕಾಗಿದ್ದ ರೀತಿಯಲ್ಲಿ ಬೆಳೆದಿರಲಿಲ್ಲವಾದಾಗ್ಯೂ, ಅವರು ರಕ್ಷಣಕರ ಸ್ಥಿತಿಯಲ್ಲಿದ್ದರೂ ಎಂಬುದನ್ನು ಸೂಚಿಸುತ್ತದೆ. ರಕ್ಷಣೆಯನ್ನು ಹೊಂದಿಕೊಂಡವರಾಗಿ, ಅವರು ನಿಜವಾದ ನಂಬಿಕೆಯನ್ನು ಮತ್ತು ದೇವರಿಗೆ ವಿಧೇಯರಾಗಬೇಕೆಂಬ ಬಯಕೆಯನ್ನು ಕಾಪಾಡಿಕೊಂಡು ಬಂದಿದ್ದರು. ಹೇಗೂ, 6:4-6ರಲ್ಲಿ ಪ್ರಸ್ತುತಪಡಿಸಲಾದ ಕ್ಲೇಶಕರವಾದ ಭವಿಷ್ಯದ ಬಳಿಕ, ಪ್ರೋತ್ಸಾಹದ ಅಗತ್ಯತೆಯಿತ್ತು.

"ರಕ್ಷಣೆಯ ಜೊತೆಯಾಗಿರುವ ಸಂಗತಿಗಳು" ಎಂಬುದು ರಕ್ಷಣೆಯಿಂದ ಸ್ವಾಭಾವಿಕವಾಗಿ ಫಲಿತಗೊಳ್ಳುವ ಗುಣಗಳು ಎಂದರ್ಥವಾಗಿರಬಹುದು. ಅದು ಮತ್ತಾಯ 25:34-40ರಲ್ಲಿ ಪ್ರಸ್ತಾಪಿಸಿರುವ ಪ್ರಕಾರ, ಧರ್ಮಾರ್ಥವಾದ ಕಾರ್ಯಗಳಿಗೆ ಸಿಕ್ಕುವ ಪ್ರತಿಫಲ ಸಹ ಆಗಿರಬಹುದಾಗಿದೆ. ಮತ್ತಾಯ 25ನೇ ಅಧ್ಯಾಯವು ಕ್ರಿಯೆಗಳು ರಕ್ಷಣೆಯನ್ನು ಸಂಪಾದಿಸಿ ಕೊಡುತ್ತವೆಂಬುದನ್ನು ಕಲಿಸುವದಿಲ್ಲವಾದರೂ, ವಾಕ್ಯಭಾಗವು ನಿತ್ಯವಾದ ಪ್ರತಿಫಲಗಳಲ್ಲಿನ ಪ್ರಮಾಣಗಳ ಬಗ್ಗೆ ಸೂಚಿಸುತ್ತದೆ. ನಿಶ್ಚಯವಾಗಿಯೂ, ನಂಬಿಗಸ್ತರು ತಾವು ಮಾಡಿದ ಹೆಚ್ಚು ಶ್ರೇಷ್ಠವಾದ ಸೇವೆಗೆ ಹೆಚ್ಚು ಶ್ರೇಷ್ಠವಾದ ಪ್ರತಿಫಲವನ್ನು ಹೊಂದಿಕೊಳ್ಳುವರು; ಇಲ್ಲವಾದರೆ, ತಲಾಂತುಗಳ ಸಾಮ್ಯವು ಅರ್ಥವಿಲ್ಲದ್ದಾಗುತ್ತದೆ (ಮತ್ತಾಯ 25:14-30). ಪ್ರತಿಯೊಬ್ಬ ವ್ಯಕ್ತಿಗೂ "ಅವನವನ ಕೃತ್ಯಗಳಿಗೆ ತಕ್ಕ" ಹಾಗೆ ನ್ಯಾಯತೀರಿಸಲ್ಪಡುವದು (ರೋಮಾ 2:6; ನೋಡಿರಿ ಪ್ರಕಟನೆ 20:12).

**ವಚನ 10.** ದೇವರು **ಅನ್ಯಾಯಸ್ಥನಲ್ಲ** ಎಂಬುದು "ದೇವರು ಸಂಪೂರ್ಣವಾಗಿ ನ್ಯಾಯವಂತನು" ಎಂದು ಹೇಳುವ ಒಂದು ಶಕ್ತಿಶಾಲಿ ವಿಧವಾಗಿರುತ್ತದೆ. ಆತನು ನಮ್ಮ ಒಳ್ಳೇ **ಕೆಲಸ**[ಗಳನ್ನು] ಜ್ಞಾಪಕದಲ್ಲಿಟ್ಟುಕೊಳ್ಳುವನು, ಒಬ್ಬ ಶಿಷ್ಯನಾಗಿ ಕೊಟ್ಟ ತಣ್ಣೀರನ್ನು ಸಹ ನೆನಪಿಟ್ಟುಕೊಂಡಿರುತ್ತಾನೆ (ಮತ್ತಾಯ 10:42). ಹಾಗಿದ್ದರೂ, ನಾವು ಸುವಾರ್ತೆಗೆ ವಿಧೇಯರಾಗುವದಕ್ಕೆ ನಿರಾಕರಿಸುವದಾದರೆ ಒಳ್ಳೇ ಕಾರ್ಯಗಳು ನಮ್ಮನ್ನು ರಕ್ಷಿಸಲಾರವು, ನಾವು ಸುವಾರ್ತೆಗೆ ಪ್ರಾಥಮಿಕ ವಿಧೇಯತೆಯನ್ನು ತೋರಿದ ಬಳಿಕ ಕ್ರಿಸ್ತನಿಂದ ತಪ್ಪಿ ಹೋದರು ಸಹ ಅದು ನಮ್ಮನ್ನು ರಕ್ಷಿಸಲು ಸಾಧ್ಯವಿಲ್ಲ.

ನ್ಯಾಯವಂತ ದೇವರಾಗಿದ್ದು ಆತನು ನಮ್ಮ ಕರುಣೆಯ ಕ್ರಿಯೆಗಳನ್ನು **ಮರೆಯುವ**ದಿಲ್ಲ. ಈ ವಾಗ್ದಾನವು ನಮಗೆ ಆತನ ಕನಿಕರವುಳ್ಳ ಕೋಮಲ ಹೃದಯವನ್ನು ತೋರಿಸುತ್ತದೆ ಮತ್ತು ನೀತಿಯನ್ನು ಅನುಸರಿಸುವಂತೆ ನಮ್ಮನ್ನು ಸ್ಫೂರ್ತಿಗೊಳಿಸುತ್ತದೆ. ಅದು ಪ್ರೋತ್ಸಾಹಗೊಳಿಸುವ ಉದ್ದೇಶದಿಂದಾಗಿತ್ತು ಹೊರತು ಆತ್ಮೀಕ ಬೆಳವಣಿಗೆಯ ವಿಷಯದಲ್ಲಿ ಸೋಮಾರಿತನದಿಂದ ಮುಂದುವರೆಯುವದಕ್ಕೆ ಒಂದು ನೆಪವಾಗಿ ಅಲ್ಲ.

ಧರ್ಮಾರ್ಥ ಸೇವೆಯು ಮುಂದುವರೆದಿರುವ ಬಗ್ಗೆ ಇಬ್ರಿಯರಿಗೆ ಪತ್ರಿಕೆಯು ಪುರಾವೆಯನ್ನು ಒದಗಿಸುತ್ತಾದರೂ, ಅವರು ವಾಕ್ಯದ ಅಧ್ಯಯನವನ್ನು ನಿರ್ಲಕ್ಷಿಸಿದ್ದರು (5:12). ತಮ್ಮನ್ನು "ಕ್ರೈಸ್ತರು" ಎಂದು ಹೇಳಿಕೊಳ್ಳುವ ಅನೇಕರು ತಾವು ಮಾಡುವ ಒಳ್ಳೇ ಕ್ರಿಯೆಗಳು ಬೇರೆ ಕ್ಷೇತ್ರಗಳಲ್ಲಿರುವ ಅವರ ಆತ್ಮೀಕ ಕೊರತೆಯನ್ನು ನೀಗಿಸುವದೆಂದು ಊಹೆ ಮಾಡಿಕೊಳ್ಳುತ್ತಾರೆ.

ಒಬ್ಬ ವ್ಯಕ್ತಿಯು ಕ್ರೈಸ್ತತ್ವನ್ನು ಪಾಲಿಸುತ್ತಿರುವ ಕ್ರೈಸ್ತನಾಗಿದ್ದಾಗ್ಯೂ ವೈಯಕ್ತಿಕ ಬೈಬಲ್ ಅಧ್ಯಯನದ ಕೊರತೆಯಿಂದಾಗಿ ಬೆಳೆಯು ತ್ತಿರುವವನಾಗಿ ಇಲ್ಲದಿರಬಹುದಾಗಿದೆ. ಈ ಕ್ರೈಸ್ತರು ಅಪರಿಪಕ್ವವುಳ್ಳವರಾ ಗಿದ್ದಾಗ್ಯೂ, ಇನ್ನೂ ಬಿದ್ದು ಹೋದವರಾಗಿರಲಿಲ್ಲ. ಅವರು **ದೇವಜನರಿಗೆ ಉಪಚಾರ** ಮಾಡಿದ್ದನ್ನು ದೇವರು ಜ್ಞಾಪಕದಲ್ಲಿಟ್ಟುಕೊಂಡನು ಮತ್ತು ಅವರು ಈಗಲೂ ಮಾಡುತ್ತಿರುವ ಸೇವೆ ಮಾಡುತ್ತಿರುವದನ್ನು ಬಲ್ಲವನಾಗಿದ್ದನು. ಆವರು ಸೆರೆಯಲ್ಲಿರುವವರಿಗೆ ದಯೆಯನ್ನು ತೋರಿಸಿದ್ದರು (10:34), ಅದರಲ್ಲಿ ಅವರ ಜೀವಗಳಿಗೆ ಕೆಲವೊಂದು ಗಂಡಾಂತರವು ಇರುತ್ತಿತ್ತು. ಅವರು ಆ ವಿಧವಾದ ಸೇವೆಯನ್ನು ನಿಲ್ಲಿಸಿದ್ದರೆ ಅವರು ಮತಭ್ರಷ್ಟತೆಯೊಳಗೆ ಜಾರಿರುತ್ತಿದ್ದರು.

ಬೇರೆಯವರಿಗೆ ತೋರಿಸುವ ಪ್ರೀತಿಯು **ದೇವರ ನಾಮದ ವಿಷಯವಾಗಿ ತೋರಿಸಿದ ಪ್ರೀತಿ** ಆಗಿರುತ್ತದೆ. “ನಾಮ” ಸ್ವತಃ ಕ್ರಿಸ್ತನನ್ನು ಪ್ರತಿನಿಧಿಸುತ್ತದೆ ಮತ್ತು ಅದು ಅನೇಕ ಸಾರಿ ಯೆಹೂದ್ಯರು ದೇವರನ್ನು ಸೂಚಿಸುವದಕ್ಕೆ ಬಳಸುತ್ತಿದ್ದರು, ಅವರು ದೇವರ ನಾಮವನ್ನು ಹೇಳುತ್ತಿದ್ದದ್ದು ವಿರಳವಾಗಿರುತ್ತಿತ್ತು. ಈ ಕ್ರೈಸ್ತರು ಕರ್ತನ ಬೋಧನೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ತಮ್ಮ ಧರ್ಮಾರ್ಥ ಕಾರ್ಯಗಳನ್ನು ನಡಿಸುತ್ತಿದ್ದರು. ಅವರು ವೈಯಕ್ತಿಕ ವಿಧವಾಗಿ “ಇನ್ನೂ ಸೇವೆಯನ್ನು ಮಾಡುತ್ತಾ ಇದ್ದರು” (διακονέω, *diakoneō*) ಮತ್ತು ಬೇರೆಯವರ ಬಾಧೆಗಳನ್ನು ಹಂಚಿಕೊಳ್ಳುತ್ತಿದ್ದರು. ದೇಹದ ಅಂಗಗಳು ಪರಸ್ಪರರ ನೋವು ಅನುಭವಿಸಬೇಕೆಂದು ಪೌಲನು ಬೇಡಿಕೊಳ್ಳುತ್ತಾನೆ (1 ಕೊರಿಂಥ 12:26).

“ಒಂದೇ ಮನೆಯವರಂತಿರುವ ಕ್ರಿಸ್ತನಂಬಿಕೆಯುಳ್ಳವರಿಗೆ” ಸಹಾಯ ಮಾಡುವದಕ್ಕೆ ವಿಶೇಷವಾದ ಗಮನವನ್ನು ಕೊಡತಕ್ಕದ್ದು (ಗಲಾತ್ಯ 6:10). ಇದು ಖಂಡಿತವಾಗಿಯೂ ಯೆರೂಸಲೇಮಿನಲ್ಲಿ ಆರಂಭಗೊಂಡಾಗ ಕ್ರೈಸ್ತರ ಗುಣವೈಶಿಷ್ಟವಾಗಿತ್ತು (ಅಪೊಸ್ತಲರ ಕೃತ್ಯಗಳು 4:32-35). ಪ್ರಥಮ ಶತಮಾನದ ಕ್ರೈಸ್ತರು ಬಡವರಿಗೆ ಸಹಾಯ ಮಾಡುವದಕ್ಕೆ ಬಯಸುತ್ತಿದ್ದರು (ಅಪೊಸ್ತಲರ ಕೃತ್ಯಗಳು 15:4; ಗಲಾತ್ಯ 2:10). ಈ ವಾಕ್ಯಭಾಗದ ಆಧಾರದಲ್ಲಿ, ಅಂತ ಕೃತ್ಯಗಳು ಸಭೆಗೆ ವೈಶಿಷ್ಟ್ಯವಾಗಿ ಮುಂದುವರೆದಿದ್ದವು ಎಂದು ನಾವು ಹೇಳಬಹುದು. ರೋಗದಲ್ಲಿರುವವರನ್ನು ಸಂಧಿಸಿದವರನ್ನು ನಾವು ಗೌರವಿಸತಕ್ಕದ್ದು ಯಾಕೆಂದರೆ ಅವರು ಆತನಿಗಾಗಿಯೇ ಮಾಡಿದವರಾಗಿದ್ದರು (ಮತ್ತಾಯ 25:36, 40).

ಇಲ್ಲಿ ಪ್ರಸ್ತಾಪಿಸಲಾಗಿರುವ ಆರೈಕೆಯ ಕಾಳಜಿಯು “ದೇವಜನರ” ಕಡೆಗೆ, ಅಂದರೆ ಬದುಕಿದ್ದ ಕ್ರೈಸ್ತರಿಗೆ ತೋರಿಸಿದ್ದಾಗಿತ್ತು. ಒಬ್ಬನು “ದೇವಮನುಷ್ಯ” (ಸಂತ) ಎಂದು ಘೋಷಿಸಲ್ಪಡಬೇಕೆಂದರೆ ಸತ್ತವನಾಗಿರುವದರ ಅಗತ್ಯವಿಲ್ಲ; ಆ ಪದದ ಸರಳ ಅರ್ಥವು “ಪ್ರತಿಷ್ಠಿಸಲ್ಪಟ್ಟವನು” ಎಂದಾಗಿರುತ್ತದಷ್ಟೆ. ಹಳೆಯ ಒಡಂಬಡಿಕೆಯಲ್ಲಿ ಇಸ್ರಾಯೇಲವು ದೇವರಿಗಾಗಿ ಪ್ರತಿಷ್ಠಿಸಲ್ಪಟ್ಟಿತ್ತು (ನೋಡಿರಿ ಕೀರ್ತನೆ 85:8; ದಾನಿಯೇಲ 7:21-27), ಮತ್ತು ಈಗ ಆ ಪದವು ಹೊಸ ಒಡಂಬಡಿಕೆಯ ಕ್ರೈಸ್ತರಿಗೆ ಅನ್ವಯಿಸಲ್ಪಟ್ಟಿದೆ.

**ವಚನ 11.** ಕಷ್ಟದಲ್ಲಿರುವವರಿಗೆ ಈ ಕ್ರೈಸ್ತರು ತೋರ್ಪಡಿಸಿದ್ದ ಕಳಕಳಿಯು ಅವರ ಜೀವಿತಗಳ **ಕಡೇ ತನಕ** ಮುಂದುವರೆಯಬೇಕಿತ್ತು. ನಾವು ಕರ್ತನ ವಿರಾಮ ಪಡೆದು ರಜೆಯ ವಿಹಾರಕ್ಕೆ ಹೋಗುವದಕ್ಕೆ ಸಾಧ್ಯವಿಲ್ಲ. ನಾವು ದಾರಿಯ ಮಧ್ಯದಲ್ಲಿ ನಾವು ಬಾಧೆ ಮತ್ತು ಪರಿಶೋಧನೆಯನ್ನು ಅನುಭವಿಸಬಹುದಾದರೂ, ಕರ್ತನೊಂದಿಗಿನ ನಮ್ಮ ನಡೆಯಲ್ಲಿ ಎಚ್ಚರಿಕೆಯಾಗಿಯೇ ಉಳಿಯತಕ್ಕದ್ದು (ಇಬ್ರಿಯ 12:6, 7).

ಇಲ್ಲಿ ಪ್ರಸ್ತಾಪಿಸಲಾಗಿರುವ ***ಆಸಕ್ತಿ*** ಯೇಸು ತನ್ನ ಶಿಷ್ಯರ ಸಂಗಡ ಪಸ್ಕ ಭೋಜನವನ್ನು ಮಾಡಬೇಕೆಂದು ಭಾವಿಸಿದ ಅದೇ ರೀತಿಯ ಹಂಬಲಿಸಿಕೆ ಆಗಿರುತ್ತದೆ (ἐπιθυμέω,

*epithumeō*; ಲೂಕ 22:15). ಆ ಸಂಭವದ ಬಗ್ಗೆ ಮಾತಾಡುತ್ತಾ, ಯೇಸು ಒತ್ತಿ ಹೇಳುವದಕ್ಕಾಗಿ ಆ ಪದವನ್ನು ಪುನರಾವರ್ತಿಸುತ್ತಾನೆ, ಅದು ತಾನು "ಅತ್ಯಾಸಕ್ತಿಯಿಂದ ಹಂಬಲಿಸಿದ" ಸಂಗತಿಯಾಗಿತ್ತೆಂಬುದನ್ನು ಸೂಚಿಸುತ್ತಾನೆ.

ಲೇಖಕನು ಸಹ ಈ ದೇವಜನರಿಗಾಗಿ ಕನಿಕರ ಪಟ್ಟಂತೆ ತೋರುತ್ತದೆ. "ಆತನು ಅವರನ್ನೆಲ್ಲಾ ಹೆಸರು ಹಿಡಿದು ಕರೆಯಬಲ್ಲವನಾಗಿದ್ದನು ಎಂಬ ಭಾವನೆಯನ್ನು ಒಬ್ಬನು ಹೊಂದುತ್ತಾನೆ."[33] ಆತನು ಅವರಿಗೆ ಸಾರಭೂತವಾಗಿ ಬೆಳೆಯುವದಕ್ಕಿರುವ ಹೆಜ್ಜೆಗಳ ಕುರಿತು ಪೇತ್ರನು ಹೇಳಿದ ಅದೇ ಸಂಗತಿಯನ್ನು ಹೇಳುತ್ತಿದ್ದಾನೆ (2 ಪೇತ್ರ 1:5-11). ಆತನು ಶಿಷ್ಯರಿಗೆ "ಮತ್ತಷ್ಟು ಪ್ರಯಾಸಪಡಿರಿ" ಎಂದು ಹೇಳಿದನು (ವ. 10). ಕ್ರೈಸ್ತೀಯ ಸದ್ಗುಣಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಪ್ರಯತ್ನಿಸುತ್ತಿರುವ ವೇಳೆ, ನಾವು ದೇವರು "ಕರೆದದ್ದನ್ನು" ಅಂದರೆ ರಕ್ಷಣೆಯ ಬಗ್ಗೆ "ದೃಢಪಡಿಸಿಕೊಳ್ಳುವೆವು" ಎಂದು ಪೇತ್ರನು ಹೇಳುತ್ತಾನೆ (ನೋಡಿರಿ 2 ಪೇತ್ರ 1:10). ಸ್ಪಷ್ಟವಾಗಿರುವ ಪ್ರಕಾರ, ಈ ಕ್ರೈಸ್ತರು ತಮ್ಮ ಭರವಸೆಯಲ್ಲಿ ಹೆಚ್ಚುತ್ತಾ ಹೋಗಬೇಕಾಗಿದ್ದ ಕಡೆಯಲ್ಲಿ ಅವರು ಕುಗ್ಗುವಿಕೆಯನ್ನು ಕಾಣುತ್ತಿದ್ದರು.

**ನಿರೀಕ್ಷೆಯನ್ನು ದೃಢಮಾಡಿಕೊಂಡು** ಎಂಬುದು ಭವಿಷ್ಯದ ಕುರಿತಾಗಿ ಒಂದು ಹಾರೈಕೆಯ ಯೋಚನೆ ಮಾತ್ರವೇ ಆಗಿರುವದಿಲ್ಲ, ಆದರೆ ದೇವರ ವಾಗ್ದಾನದ ಮೇಲೆ ಆಧಾರವಾಗಿರುವ ಒಂದು ನಂಬಿಕೆಯಾಗಿದೆ (ನೋಡಿರಿ 11:1). ಹೊಸ ಒಡಂಬಡಿಕೆಯಲ್ಲಿ, "ನಿರೀಕ್ಷೆ" ಎಂದರೆ "ದೃಢವಿಶ್ವಾಸದಿಂದ ಎದುರು ನೋಡುವಿಕೆ" ಎಂದರ್ಥವಾಗಿರುತ್ತದೆ. ನಿಜವಾದ ನಿರೀಕ್ಷೆ ಮತ್ತು ನಿಜವಾದ ನಂಬಿಕೆಗಳು ತಾಳ್ಮೆಯ ಸಂಗಡ ಜೊತೆಜೊತೆಯಾಗಿ ಸಾಗುತ್ತವೆ. ದೇವರ ಪ್ರಕಟನೆಯು ನಮ್ಮಲ್ಲಿ ನಂಬಿಕೆಯಿಂದ ಸೃಷ್ಟಿಸಲ್ಪಟ್ಟಿದ್ದು ನಿರೀಕ್ಷೆಯಲ್ಲಿ ಫಲಿತಗೊಳ್ಳುತ್ತದೆ. ನಮಗೆ ಕ್ರಿಸ್ತನಲ್ಲಿರುವ ಖಚಿತತೆಯು ನಂಬಿಕೆಯಿಂದ ಬೆಳೆಯುವದಾಗಿದೆ. ಒಬ್ಬನು ತನ್ನನ್ನು ಮೆಚ್ಚಿಸಿಕೊಳ್ಳುವದಕ್ಕೆ ಜೀವಿಸುವಾಗ, ಆತನು ನಿಜವಾದ ಭರವಸವನ್ನು ಹೊಂದಿರುವದಕ್ಕೆ ಸಾಧ್ಯವಿಲ್ಲ; ಅಂತಹ ಜೀವಿತವು ನಂಬಿಕೆಯನ್ನಾಧರಿಸಿದ ನಿರೀಕ್ಷೆಯನ್ನು ಹೊಂದಿರುವದಿಲ್ಲ. "ಪ್ರೀತಿ" (ವ. 10), "ನಿರೀಕ್ಷೆ" (ವ. 11), ಮತ್ತು "ನಂಬಿಕೆ" (ವ. 12) ಎಂಬವುಗಳು ಪೌಲನು 1 ಕೊರಿಂಥ 13:13ರಲ್ಲಿ ಒತ್ತಿ ಹೇಳಿರುವ ಅದೇ ಮೂರು ಪದಗಳಾಗಿವೆ.

ವಾಕ್ಯದಲ್ಲಿ ಬೆಳೆಯುವದು ನಮ್ಮ ರಕ್ಷಣೆಯಲ್ಲಿ ಪೂರ್ಣ ದೃಢವಿಶ್ವಾಸವಿಡುವಂತೆ ನಮ್ಮ ಹೃದಯಗಳನ್ನು ತೆರೆಯಲು ಬಹುಮುಖ್ಯವಾಗಿರುತ್ತದೆ. ನಮ್ಮ ಪರಿಶುದ್ಧವಾದ ಜೀವಿಸುವಿಕೆಯಲ್ಲಿ ಅನ್ವಯಿಸಿಕೊಳ್ಳುವ **ಆಸಕ್ತಿ**ಯ ಮೂಲಕ ಮಾತ್ರವೇ "ಪೂರ್ಣ ದೃಢವಿಶ್ವಾಸ" ವು ನಮ್ಮದಾಗಬಲ್ಲದು. ಒಬ್ಬನು ಪರಲೋಕವನ್ನು ತನ್ನ ಪ್ರತಿಫಲವಾಗಿ ಪಡೆಯುವದನ್ನು ಬಯಸುವಾಗ ಮತ್ತು ಅಪೇಕ್ಷಿಸುವಾಗ ಅಂಥ ದೃಢವಿಶ್ವಾಸವು ಹೊಂದಿಕೊಳ್ಳಲ್ಪಡುತ್ತದೆ (ಇಬ್ರಿಯ 11:6). ಈ ನಿಶ್ಚಿತವಾದ ನಿರೀಕ್ಷೆಯು ಸಮರ್ಪಣೆಯುಳ್ಳ ನಂಬಿಕೆಯ ಭಾಗವಾಗಿರುತ್ತದೆ. ಅದರಲ್ಲಿ ದೇವರ ಚಿತ್ತವನ್ನು ಕುರಿತು ತಿಳಿದುಕೊಂಡು ಅದನ್ನು ಮಾಡುವಂತೆ ನಮಗೆ ಸಹಾಯವನ್ನು ಒದಗಿಸುವ ಹಾಗೆ ಶಾಸ್ತ್ರಗಳನ್ನು ಅಧ್ಯಯನ ಮಾಡುವದು ಸೇರಿರುತ್ತದೆ.

**ವಚನ 12.** ರಕ್ಷಣೆಯ ನಿಶ್ಚಿತತೆಯನ್ನು ಹೊಂದಿಕೊಳ್ಳಬೇಕಾದರೆ, ಇಬ್ರಿಯ ಕ್ರೈಸ್ತರು **ಮಂದಮತಿಗಳು** ಅಥವಾ "ಸೋಮಾರಿಗಳು" (νωθρός, *nōthros*; ನೋಡಿರಿ 5:11). ಈ ಪದವು "ಮೊದ್ದು" ಎಂಬ ಪದದಂತೆಯೇ ಆಗಿರುತ್ತದೆ. ಅವರು ನಿಧಾನವಾದವರು ಅಥವಾ ಮಂದಮತಿಯವರು ಆಗಿರುವದರ ಬದಲಾಗಿ ನಂಬಿಗಸ್ತರನ್ನು **ಅನುಸರಿಸುವವರು** ಆಗಿರಬೇಕಿತ್ತು, ಅವರ ಬಗ್ಗೆ ಅಧ್ಯಾಯ 11ರಲ್ಲಿ ಇನ್ನಷ್ಟು ಹೆಚ್ಚು ವಿವರಣಾತ್ಮಕವಾಗಿ ತಿಳಿಸಲಾಗಿರುತ್ತದೆ. ಇದು ಪೌಲನಿಂದ ನೀಡಲ್ಪಟ್ಟ ಹೇಳಿಕೆಗಳನ್ನು ಸಹ ನೆನಪಿಗೆ ತರುತ್ತದೆ

(1 ಕೊರಿಂಥ 11:1; ಅಲ್ಲದೆ ಎಫೆಸ 5:1; 1 ಥೆಸಲೋನಿಕ 1:6; 2:14 ಸಹ ನೋಡಿರಿ). ಆತನು "ಅನುಸರಿಸುವವರು" (μιμητής, *mimētēs*) ಎಂಬ ಸರಿಯಾಗಿ ಅದೇ ಪದವನ್ನು ಆತನು ಬಳಸಿದನು, ಅದರಿಂದ "ಅನುಸರಿಸು," "ಅನುಕರಣ ಮಾಡು," ಮತ್ತು "ಅಣಕ ಮಾಡು" ಎಂಬ ಪದಗಳು ಬಂದಿರುತ್ತವೆ.

ಮರಣಿಸಿರುವ ನಂಬಿಸಗ್ತರು ಈಗಾಗಲೆ ಜೀವದೊಳಗೆ ಪ್ರವೇಶಿಸಿದ್ದಾರೆ ಮತ್ತು ದೇವರ ವಾಗ್ದಾನಗಳನ್ನು ಬಾಧ್ಯವಾಗಿ ಹೊಂದಿರುತ್ತಾರೆ. ಲಾಜರನು ಸತ್ತ ವೇಳೆ ಇದು ಸತ್ಯವಾಗಿತ್ತು (ಲೂಕ 16:22, 25) ಮತ್ತು ಯೇಸುವಿನ ವಿಷಯದಲ್ಲಿ ಸತ್ಯವಾಗಿತ್ತು, ಆತನು ತನ್ನ ಮರಣದ ವೇಳೆ ಆತ್ಮದಲ್ಲಿ "ಬದುಕಿಸಲ್ಪಟ್ಟನು" (1 ಪೇತ್ರ 3:18). ವಾಚಕರು ತಮ್ಮ ಮುಂದುಗಡೆ ಹೋಗಿರುವ ನಂಬಿಗಸ್ತರ ಅನುಕರಣ ಮಾಡುವದನ್ನು ಮುಂದುವರೆಸುವದಾದರೆ, ಅವರು ದೇವರ ವಾಗ್ದಾನಗಳ ನೆರವೇರಿಕೆಯಾಗಿ ಅದೇ ಪ್ರತಿಫಲವನ್ನು ಹೊಂದಿಕೊಳ್ಳುವರು. ಅವರು ಈ ಪ್ರತಿಫಲವನ್ನು ನಂಬಿಕೆಯ ಮತ್ತು ತಾಳ್ಮೆಯಿಂದ ಸಹಿಸಿಕೊಳ್ಳುವ ಮೂಲಕ ಪಡೆದುಕೊಳ್ಳುವರು, ಮತ್ತು ನಮ್ಮ ವಿಷಯದಲ್ಲಿ ಸಹ ಅದು ಅಷ್ಟೆ ಸತ್ಯವಾದದ್ದು. ನಾವು ಪ್ರಯಾಣದ ದಾರಿಯಲ್ಲಿ ಭಾರಗಳ ಕಾಲಾವಧಿ ಅಥವಾ ತೂಕದ ಬಗ್ಗೆ ಕಳವಳಗೊಳ್ಳಬಾರದು, ಯಾಕೆಂದರೆ ಮಹಿಮೆಯಲ್ಲಿ ಸಿಕ್ಕುವ ಪ್ರತಿಫಲದ "ತೂಕ" ಕ್ಕೆ ಹೋಲಿಸಿದರೆ ಅವುಗಳು "ಹಗುರ" ಆಗಿರುತ್ತವೆ (2 ಕೊರಿಂಥ 4:17, 18).

ನಂಬಿಗಸ್ತರು ನಂಬಿಕೆಯಲ್ಲಿ ಮರಣಿಸಿದಂತೆ ಪ್ರಸ್ತುತದಲ್ಲಿ **ವಾಗ್ದಾನಗಳನ್ನು ನಂಬಿ . . . ಹೊಂದುತ್ತಾ** [ಇದ್ದರು] (κληρονομούντων, *klēronomountōn*, ಒಂದು ವರ್ತಮಾನಕಾಲ ರೂಪದ ಕೃದಂತ). ಇನ್ನೊಂದು ಅರ್ಥದಲ್ಲಿ ಅವರು "ವಾಗ್ದಾನ ಮಾಡಲ್ಪಟ್ಟದ್ದನ್ನು ಇನ್ನೂ ಪಡೆದಿರಲಿಲ್ಲ," ಯಾಕೆಂದರೆ ಅವರು ಇನ್ನೂ ಅಂತಿಮ ಪ್ರತಿಫಲವನ್ನು ಹೊಂದಿಕೊಂಡಿರಲಿಲ್ಲ (ಇಬ್ರಿಯ 11:39). ಈ ಪ್ರತಿಫಲವು ಕಡೇ ತನಕ ನಂಬಿಗಸ್ತರಾಗಿರುವವರಿಗೆ ಮಾತ್ರವೇ ಸಿಕ್ಕುವದಾಗಿದೆ. ನಂಬಿಗಸ್ತರು "ಎಂದಿಗೂ ನಾಶಗೊಳ್ಳರು" ಯಾಕೆಂದರೆ ನಿರಂತರವಾಗಿ ಆಲಿಸಿದ್ದಾರೆ ಮತ್ತು ನಂಬಿರುತ್ತಾರೆ (ಯೋಹಾನ 10:27, 28). ನಿತ್ಯವಾಗಿ ರಕ್ಷಣೆ ಹೊಂದುವದಕ್ಕೆ ಬಯಸುವವರು ರಕ್ಷಕನ ಸ್ವರವನ್ನು ಕೇಳುತ್ತಲೇ ಇರಬೇಕು ಮತ್ತು ಕಿವಿಗೊಡುತ್ತಲೇ ಇರಬೇಕು.

ದೇವರ ವಾಗ್ದಾನಗಳು **ಬಹು ದಿವಸಗಳ ವರೆಗೆ ಕಾದಿದ್ದು** (μακροθυμία, *makrothumia*; "ತಾಳ್ಮೆಯಿಂದ") ಹೊಂದಿಕೊಳ್ಳಲ್ಪಡುತ್ತವೆ, ಅದರರ್ಥವು "ಸ್ಥೈರಣೆ" ಅಥವಾ "ಜನರ ಕಡೆಗೆ ದೀರ್ಘಶಾಂತಿಯಿಂದಿರುವಿಕೆ" ಎಂದಾಗಿರುತ್ತದೆ. "ತಾಳ್ಮೆ" ಎಂಬುದಕ್ಕೆ ಸಾಮಾನ್ಯವಾದ ಪದವು ὑπομονή (*hupomonē*) ಎಂದಾಗಿರುತ್ತದೆ, ಅದರರ್ಥವು ಒಂದು ಸಂತೋಷಕರವಾದ ಮನೋಧರ್ಮವನ್ನು ಕಾಪಾಡಿಕೊಳ್ಳುವವರಾಗಿ ಸಂಕಷ್ಟಗಳನ್ನು ಮತ್ತು ಕಷ್ಟಗಳನ್ನು ಸಹಿಸಿಕೊಳ್ಳುವದು ಎಂದಾಗಿದೆ. ನಂಬಿಕೆಯಲ್ಲಿ ಸ್ಥಿರವಾಗಿ ಮುಂದುವರೆಯದ ವ್ಯಕ್ತಿಯು ಬಾಧ್ಯತೆಯನ್ನು ಪಡೆದುಕೊಳ್ಳುವದಿಲ್ಲ.

ನಿರೀಕ್ಷೆಗಳ ಒಬ್ಬ ಬಾಧ್ಯಸ್ತನು; ಆತನು ಬಾಧ್ಯತೆಯನ್ನು ಪಡೆದುಕೊಳ್ಳುವಾಗ, ಆತನ ನಿರೀಕ್ಷೆಯು ನೆರವೇರುತ್ತದೆ. ಇದು 1:14ನ್ನು ಜ್ಞಾಪಿಸುವದಾಗಿದೆ, ಅದು "ರಕ್ಷಣೆಯನ್ನು ಬಾಧ್ಯವಾಗಿ ಹೊಂದಲಿದ್ದವರ ಕುರಿತು"[34] ಮಾತಾಡುತ್ತದೆ. "ಕ್ರಿಸ್ತನು ಇಲ್ಲಿ ಜನರನ್ನು 'ಅವರ ಪಾಪಗಳಿಂದ' ಬಿಡಿಸಿ ಕಾಯುವದಕ್ಕೆ ಬಂದನು (ಮತ್ತಾಯ 1:21) ಹೊರತು ಅವರಲ್ಲಿನ ಪಾಪಗಳಲ್ಲ. ನಾನು ನರಕದ ಮಗುವಾಗಿ ಜೀವಿಸುತ್ತಿರುವವನಾಗಿದ್ದ ಪರಲೋಕಕ್ಕೆ ಪ್ರಯಾಣಿಸುತ್ತಿದ್ದೇನೆಂಬ ಯೋಚನೆಗೆ ಆಸ್ಪದವನ್ನು ಕೊಡುವದಕ್ಕಿಂತಲೂ ಕೆಟ್ಟದಾದ ಕಲ್ಪನೆಯು ಮತ್ತೊಂದಿಲ್ಲ."[35]

**6:13-20**

**13ದೇವರು ಅಬ್ರಹಾಮನಿಗೆ ವಾಗ್ದಾನಮಾಡಿದಾಗ ತನಗಿಂತ ಹೆಚ್ಚಿನವನ ಆಣೆಯಿಡುವದಕ್ಕಾಗದೆ
ಇದ್ದದರಿಂದ 14ತನ್ನಾಣೆಯಿಟ್ಟು – ನಿಜವಾಗಿ ನಿನ್ನನ್ನು ಆಶೀರ್ವದಿಸೇ ಆಶಿರ್ವದಿಸುವೆನು, ನಿನ್ನನ್ನು
ಹೆಚ್ಚಿಸೇ ಹೆಚ್ಚಿಸುವೆನು ಎಂದು ಹೇಳಿದನಷ್ಟೆ. 15ಆ ವಾಗ್ದಾನದ ಫಲಕ್ಕೋಸ್ಕರ ಅಬ್ರಹಾಮನು ಬಹು
ದಿವಸ ಕಾದುಕೊಂಡಿದ್ದು ಆ ಫಲವನ್ನು ದೇವರು ಹೇಳಿದ ಹಾಗೆಯೇ ಹೊಂದಿದನು. 16ಮನುಷ್ಯರು
ತಮಗಿಂತ ಹೆಚ್ಚಿನವನ ಆಣೆಯಿಡು ತ್ತಾರಷ್ಟೆ; ಮಾತಿಗೆ ಆಣೆಯಿಟ್ಟು ಸ್ಥಿರಪಡಿಸಿದ ಮೇಲೆ
ಅವರೊಳಗೆ ವಿವಾದವೇನೂ ಇರುವದಿಲ್ಲ. 17ಹಾಗೆಯೇ ದೇವರು ತನ್ನ ಸಂಕಲ್ಪವು
ನಿಶ್ಚಲವಾದದ್ದೆಂಬದನ್ನು ವಾಗ್ದಾನದ ಫಲಕ್ಕೆ ಬಾಧ್ಯರಾಗುವವರಿಗೆ ಬಹು ಸ್ಪಷ್ಟವಾಗಿ
ತೋರಿಸಬೇಕೆಂದು ಆಣೆಯಿಟ್ಟು ತನ್ನ ಮಾತನ್ನು ಸ್ಥಿರಪಡಿಸಿದನು. 18ಆಶ್ರಯವನ್ನು
ಹೊಂದಬೇಕೆಂದು ಓಡಿಬಂದು ನಮ್ಮ ಮುಂದೆ ಇಟ್ಟಿರುವ ನಿರೀಕ್ಷೆಯನ್ನು ಹಿಡುಕೊಂಡವರಾದ
ನಮಗೆ ಎರಡು ನಿಶ್ಚಲವಾದ ಆಧಾರಗಳು ಇರುವ ಕಾರಣ ಬಲವಾದ ಧೈರ್ಯವುಂಟಾಯಿತು.
19ಈ ಆಧಾರಗಳನ್ನು ಕೊಟ್ಟದ್ದರಲ್ಲಿ ದೇವರು ಸುಳ್ಳಾಡಿಲಾರನು. ಆ ನಿರೀಕ್ಷೆಯು ನಮ್ಮ ಪ್ರಾಣಕ್ಕೆ
ಲಂಗರದ ಹಾಗಿದ್ದು ಭರವಸಕ್ಕೆ ಯೋಗ್ಯವಾದದ್ದೂ ಸ್ಥಿರವಾದದ್ದೂ ಆಗಿದೆ. ಅದು ತೆರೆಯೊಳಗಣ
ದೇವಸಾನಿಧ್ಯವನ್ನು ಪ್ರವೇಶಿಸುವಂಥದು. 20ಯೇಸು ಸದಾಕಾಲವೂ ಮೆಲ್ಕಿಜೆದೇಕನ ತರಹದ
ಮಹಾಯಾಜಕನಾಗಿದ್ದು ನಮಗೋಸ್ಕರ ಮುಂದಾಗಿ ಹೋಗಿ ಆ ಸಾನಿಧ್ಯವನ್ನು ಪ್ರವೇಶಿಸಿದ್ದಾನೆ.**

ಸೋಮಾರಿಗಳಾಗಿರಬೇಡಿರೆಂದು ಇಬ್ರಿಯರಿಗೆ ಬುದ್ಧಿವಾದ ಹೇಳಿದ ಬಳಿಕ, ಲೇಖಕನು ಈಗ ಅವರ ಚರಿತ್ರೆಯಲ್ಲಿಯೇ ಅತ್ಯಂಥ ಶ್ರೇಷ್ಠವಾದ ನಂಬಿಕೆ ಮತ್ತು ತಾಳ್ಮೆಯ ಉದಾಹರಣೆಯನ್ನು ಜ್ಞಾಪಿಸುತ್ತಾನೆ. ಆತನು ಎರಡನೆಯ ಬಾರಿಗೆ ಅಬ್ರಹಾಮನನನ್ನು ಪ್ರಸ್ತಾಪಿಸುತ್ತಾನೆ (ನೋಡಿರಿ 2:16). ಇದಾದ ಬಳಿಕ, ಆತನ ಹೆಸರು ಹೆಚ್ಚೆಚ್ಚಾಗಿ ಕಂಡು ಬರುತ್ತದೆ. ಬಹುಶಃ ಲೇಖಕನು ಇಸ್ರಾಯೇಲಿನ ಪಿತೃವಿನ ವಿಷಯದಲ್ಲಿ ದೇವರು ಆರಂಭದಲ್ಲಿ ನಡೆದುಕೊಂಡ ರೀತಿಗಳ ಕುರಿತು ಸೂಚಿಸುವ ಮೂಲಕ ಇಬ್ರಿಯ ಕ್ರೈಸ್ತರಿಗೆ ಧರ್ಮಶಾಸ್ತ್ರದಿಂದ ದೂರವಾಗಿ ಬೆರಳು ತೋರಿಸುತ್ತಿದ್ದಾನೆ. ಹೇಗೆ ಅಬ್ರಹಾಮನಿಗೆ "ಸಂತಾನ" ಕೊಡಲ್ಪಟ್ಟು 430 ವರ್ಷಗಳಾದ ಬಳಿಕ ಧರ್ಮಶಾಸ್ತ್ರವು ಕೊಡಲ್ಪಟ್ಟಿತ್ತೆಂಬುದನ್ನು ತೋರಿಸುವ ಮೂಲಕ ಅದನ್ನೇ ಮಾಡಿದ್ದನು. ಈ ವಿಶಿಷ್ಟವಾದ ವಾಗ್ದಾನವು ಕ್ರಿಸ್ತನ ಬರೋಣದಲ್ಲಿ ನೆರವೇರಿತ್ತು (ಗಲಾತ್ಯ 3:16–19).

**ವಚನ 13. ದೇವರು ಅಬ್ರಹಾಮನಿಗೆ ವಾಗ್ದಾನ ಮಾಡಿದ್ದು** ಆದಿಕಾಂಡ 12:1–7; 15:5; 17:5–8; ಮತ್ತು 22:15–18ರಲ್ಲಿ ದಾಖಲಿಸಲ್ಪಟ್ಟಿದೆ. ಅಬ್ರಹಾಮನನ್ನ ದೃಶ್ಯದೊಳಗೆ ಕರೆ ತರುವದಕ್ಕೆ ಒಂದು ಕಾರಣವೆಂದರೆ ಆತನಿಗೆ ಮಾಡಲ್ಪಟ್ಟಿದ್ದ ವಾಗ್ದಾನಗಳ ನೆರವೇರಿಕೆಯನ್ನು ಈಗಾಗಲೆ ಆತನು ಹೊಂದಿಕೊಂಡಿದ್ದನು. Bruceನು ಊಹಿಸಿಕೊಂಡಿದ್ದೇನೆಂದರೆ ಇಸಾಕನನ್ನು "ಒಂದು ನಮೂನೆಯಲ್ಲಿ ಸತ್ತವರೊಳಗಿಂದ" (ಅಥವಾ "ಒಂದು ಸಾದೃಶ್ಯದಲ್ಲಿ"; ಇಬ್ರಿಯ 11:19; ASV) ಪುನಃ ಪಡೆದುಕೊಂಡದ್ದರಲ್ಲಿ ಆತನು "ಒಂದು ಅತ್ಯಂತ ಸಾರಭೂತವಾದ ಅರ್ಥದಲ್ಲಿ, 'ವಾಗ್ದಾನವನ್ನು ಹೊಂದಿಕೊಂಡನು'" ಎಂಬದೆ.[36] ಆತನ "ಸಂತಾನ" ದ ಕುರಿತಾದ ವಾಗ್ದಾನವು ಆಗ ನಿಶ್ಚಿತಗೊಳಿಸಲ್ಪಟ್ಟಿತು. ವಾಗ್ದಾನದ ಭಾಗವು — ಅದು ಕ್ರಿಸ್ತನಲ್ಲಿ ಸಿಕ್ಕುವ ರಕ್ಷಣೆಗೆ ಸಮವಾಗಿದ್ದು (ಗಲಾತ್ಯ 3:26–29) — ಆತನ ಮರಣವಾದ ನಂತರದ ತನಕ ಸ್ವೀಕರಿಸಿಕೊಳ್ಳಲ್ಪಡಲಿಲ್ಲ. ಯೆಹೂದಿ ಹಾಗೂ ಅನ್ಯಜನಾಂಗದ ಹಿನ್ನಲೆಯ ಇನ್ನು ಅನೇಕರ ಜೊತೆಯಲ್ಲಿ, ಅಬ್ರಹಾಮನು ಅಂತಿಮವಾಗಿ ಪರಲೋಕದಲ್ಲಿ ರಕ್ಷಣೆಯ ಪರಿಪೂರ್ಣತೆಯನ್ನು

ಸ್ವೀಕರಿಸಿಕೊಳ್ಳುವನು (ನೋಡಿರಿ ಮತ್ತಾಯ 8:11).

ಹೊಸ ಒಡಂಬಡಿಕೆಯು ನಂಬಿಕೆಯ ಕುರಿತು ಚರ್ಚಿಸುವ ವೇಳೆಯಲ್ಲೆಲ್ಲಾ, ಅಬ್ರಹಾಮನ ಹೆಸರು ಪ್ರಸ್ತಾಪಿಸಲ್ಪಡುತ್ತದೆ. ತಾನು ದೇವರ ವಾಗ್ದಾನಗಳಿಗೆ ಹೊಂದಿರುವ ಭಕ್ತಿಯಲ್ಲಿ ಅಬ್ರಹಾಮನೊಂದಿಗೆ ಗುರುತಿಸಿಕೊಳ್ಳುವ ವಾಚಕನು ಮೆಲ್ಕಿಜೆದೇಕನಿಗೆ ಅಬ್ರಹಾಮನು ತೋರಿಸಿದ ವಿಧೇಯತೆಯನ್ನು ಅನುಸರಿಸುವದಕ್ಕೆ ಒಂದು ನಮೂನೆಯಾಗಿ ಒಪ್ಪಿಕೊಳ್ಳುವನು. ಈ ನಮೂನೆಯು 7:1-10ರಲ್ಲಿ ಮುಂದಿಡಲ್ಪಟ್ಟಿರುವ ಪ್ರಕಾರ, ಹೊಸ "ಮೆಲ್ಕಿಜೆದೇಕ" ನಾಗಿರುವ ಕ್ರಿಸ್ತನಿಗೆ ನಂಬಿಗಸ್ತಿಕೆಯಿಂದ ಅಧೀನಪಡಿಸಿಕೊಳ್ಳುವ ಅಗತ್ಯತೆಯನ್ನು ಪ್ರತಿನಿಧಿಸುತ್ತದೆ.

ಅಬ್ರಹಾಮನಿಗೆ ಮಾಡಲ್ಪಟ್ಟ ವಾಗ್ದಾನ ಮತ್ತು ದೇವರ ಆಣೆಯ ಕುರಿತು ಆದಿಕಾಂಡ 22:15-18ರಲ್ಲಿ ದಾಖಲಿಸಲ್ಪಟ್ಟಿರುತ್ತದೆ; ಬೇರೆ ಯಾವ ಸಂದರ್ಭದಲ್ಲಿಯೂ ದೇವರು ಒಂದು ಆಣೆಯನ್ನಿಟ್ಟು ಅಬ್ರಹಾಮನಿಗೆ ಖಾತ್ರಿಪಡಿಸಿಲಿಲ್ಲ. ವಾಗ್ದಾನವು ಏನಾಗಿತ್ತು? ಆತನು ವೈಯಕ್ತಿಕವಾಗಿ ಆಶೀರ್ವದಿಸಲ್ಪಡುವನು, ಆತನಿಗೆ ಅಸಂಖ್ಯಾತ ಸಂತತಿಯಿರುವರು, ಆತನ ಸಂತಾನದ ಮೂಲಕ ಮೆಸ್ಸೀಯನು ಬರುವನು (ಗಲಾತ್ಯ 3:16), ಮತ್ತು ಆ "ಸಂತಾನ" ದ ಮೂಲಕ ಆತನು ಸಕಲ ನಂಬಿಗಸ್ತರಿಗೆ ತಂದೆಯಾಗುವನು. ಎಲ್ಲಾ ಕ್ರೈಸ್ತರು, ಕ್ರಿಸ್ತನ ಭಾಗವಾದವರಾಗಿ, ಆ ಮೂಲಕ "ಅಬ್ರಹಾಮನ ಸಂತಾನ," ನಂಬಿಕೆಯಲ್ಲಿ ಆತನ "ಸಂತತಿಯವರು" ಆಗಿದ್ದಾರೆ (ಗಲಾತ್ಯ 3:26-29).

ಒಂದು ಆಣೆಯು ಅನಾವಶ್ಯಕವೆಂದು ತೋರುತ್ತದೆ, ಆದರೆ ಅದು ಕೇವಲ ಮಾನವ ಅಗತ್ಯತೆಯನ್ನು ಸರಿಹೊಂದಿಸಿಕೊಳ್ಳುವದಕ್ಕಾಗಿ ಮಾತ್ರವೇ ಕೊಡಲ್ಪಟ್ಟಿತೆಂದು Philo ಸರಿಯಾಗಿಯೇ ಹೇಳಿರಬಹುದಾಗಿದೆ.[37] ಬಹುಶಃ ಅಬ್ರಹಾಮನಿಗೆ ದೇವರ ಆಣೆಯಿಂದ ಸಿಕ್ಕುವ ಭರವಸದ ಅಗತ್ಯತೆಯಿತ್ತು. ದೇವರು ಅಬ್ರಹಾಮನಿಗೆ ವಾಗ್ದಾನ ಮಾಡಿದ ಬಹಳಷ್ಟು ಕಾರ್ಯವು ದೂರದ ಭವಿಷ್ಯದಲ್ಲಿ ಸಂಭವಿಸುವದಾಗಿತ್ತು. ನೆರವೇರಿಕೆಯಲ್ಲಾಗುವ ವಿಳಂಬವು ಅಬ್ರಹಾಮನಿಗೆ ತನ್ನ ನಂಬಿಕೆಯನ್ನು ಪೋಷಿಸಿಕೊಂಡು ಮುನ್ನಡೆಯಲು ಒಂದು ಆಣೆಯ ಅಗತ್ಯತೆಯನ್ನು ತೀವ್ರಗೊಳಿಸಿತ್ತು.

**ವಚನಗಳು 14, 15. ನಿಜವಾಗಿ ನಿನ್ನನ್ನು ಆಶೀರ್ವದಿಸೇ ಆಶೀರ್ವದಿಸುವೆನು** ಎಂದು ದೇವರು ಹೇಳಿದನು (ವ. 14). ಹಳೆಯ ಒಡಂಬಡಿಕೆಯ ವಾಗ್ದಾನದಲ್ಲಿನ ಇಬ್ರಿಯ ಅಕ್ಷರಶಃತೆಯು KJVಯಲ್ಲಿ ಪ್ರತಿಬಿಂಬಿತಗೊಂಡಿರುತ್ತದೆ: "ಆಶೀರ್ವಾದದಲ್ಲಿ ನಿನ್ನನ್ನು ಆಶೀರ್ವದಿಸುವೆನು" (ಆದಿಕಾಂಡ 22:17). "ಆಶೀರ್ವಾದ" ಎಂಬುದನ್ನು ಎರಡು ಸಾರಿ ಬಳಸಿದ್ದು ಒತ್ತಿ ಹೇಳುವದಕ್ಕಾಗಿ ಮತ್ತು ಖಚಿತತೆಯನ್ನು ಕೂಡಿಸುವದಕ್ಕಾಗಿ ಆಗಿತ್ತು. ವಾಗ್ದಾನವು ಈಗಾಗಲೆ ನಿಶ್ಚಿತವಾಗಿತ್ತು, ಆದರೆ ದೇವರ ಆಣೆಯನ್ನು ಸೇರ್ಪಡೆಗೊಳಿಸಿದ್ದರಿಂದಾಗಿ ಅದು ಮತ್ತಷ್ಟು ನಿಶ್ಚತವಾಗಿ ಕಾಣಿಸುವಂತಾಗಿತ್ತು. ಮನುಷ್ಯರು ಆಣೆಗಳನ್ನು ಇಡುವಾಗ, ಅವರು ತಮ್ಮ ಮಾತನ್ನು ಉಳಿಸಿಕೊಳ್ಳದಿದ್ದರೆ ಅವರನ್ನು ದಂಡಿಸಬಲ್ಲ ಹೆಚ್ಚು ಉನ್ನತವಾದ ಶಕ್ತಿಯ ಮೇಲೆ ಮೊರೆಯಿಡುತ್ತಾರೆ. ದೇವರು ಹೀಗೆ ಮಾಡುವದಕ್ಕೆ ಸಾಧ್ಯವಿಲ್ಲ, ಯಾಕೆಂದರೆ ಮೊರೆಯನ್ನು ಇಡುವದಕ್ಕೆ ಸಾಧ್ಯವಿರುವ ಆತನಿಗಿಂತ ಉನ್ನತವಾದವನೊಬ್ಬನು ಇರುವದಿಲ್ಲ. ಹೀಗೆ, ತನ್ನ ಆಣೆಯನ್ನು ಇಡುವ ಮೂಲಕ, ವಾಗ್ದಾನವು ಕಾಪಾಡಿಕೊಳ್ಳಲ್ಪಡುವದೆಂಬುದಕ್ಕೆ ಸ್ವತಃ ತನ್ನ ಅಸ್ತಿತ್ವವನ್ನೇ ಒತ್ತೆ ಇಡುತ್ತಾನೆ. ಮನುಷ್ಯನು ದೇವರ ನಾಮದಲ್ಲಿ ಆಣೆಯನ್ನಿಡುವಾಗ, ದೇವರು ಇದ್ದಾನೆ, ಆತನು ಪ್ರತಿಫಲವನ್ನು ಕೊಡುತ್ತಾನೆ (ಇಬ್ರಿಯ 11:6), ಮತ್ತು ತನಗೆ ಅವಿಧೇಯರಾಗುವವರನ್ನು ಆತನು ದಂಡಿಸುತ್ತಾನೆ ಎಂದು ಅವರು ನಂಬತಕ್ಕದ್ದು; ಇಲ್ಲವಾದರೆ ಅಂತಹ ಒಂದು ಆಣೆಯು ಅರ್ಥವಿಲ್ಲದ್ದಾಗುತ್ತದೆ.

ಇಬ್ರಿಯರಿಗೆ ಪತ್ರಿಕೆಯು ಒಂದು "ವಾಗ್ದಾನ" ದ ಪುಸ್ತಕವಾಗಿರುತ್ತದೆ. ಈ ಪದವು ನಾಮಪದ ಮತ್ತು ಕ್ರಿಯಾಪದ ರೂಪಗಳಲ್ಲಿ ಹದಿನೆಂಟು ಸಾರಿ ಕಾಣಿಸಿಕೊಳ್ಳುತ್ತದೆ, ಅದು ಹೊಸ ಒಡಂಬಡಿಕೆಯ ಬೇರೆ ಯಾವದೇ ಪುಸ್ತಕಕ್ಕಿಂತಲೂ ಹೆಚ್ಚಾಗಿರುತ್ತದೆ.[38] ತಾಳ್ಮೆಯಿಂದ ಕಾಯ್ದುಕೊಂಡ ಬಳಿಕ, ಅಬ್ರಹಾಮನು ದೇವರಿಂದ ಮಾಡಲ್ಪಟ್ಟ **ವಾಗ್ದಾನವನ್ನು ಹೊಂದಿದನು**. ಆದಿಕಾಂಡ 12:1-3ರ ವಾಗ್ದಾನವು ಅಬ್ರಹಾಮನಿಗೆ ಎಪ್ಪತ್ತು ವರ್ಷಗಳಾಗಿರುವ ವೇಳೆ ಮಾಡಲ್ಪಟ್ಟಿತು. ಆತನು ಇಸಾಕನ ಗರ್ಭಧಾರಣೆ ಮತ್ತು ನಂತರ ಜನಿಸುವಿಕೆಯಲ್ಲಿ ವಾಗ್ದಾನ ನೆರವೇರಿಕೆಯನ್ನಾದರೂ ನೋಡುವದಕ್ಕೆ ಮುನ್ನ ಇನ್ನೂ ಇಪ್ಪತ್ತೈದು ವರ್ಷಗಳಾಗಿ ಹೋಗಿತ್ತು. ಆತನು ಇಸಾಕನನ್ನು ಯಜ್ಞ ಮಾಡುವದಕ್ಕೆ ಪ್ರಯತ್ನಿಸಿದ ಬಳಿಕ, ದೇವರು ಆತನೊಂದಿಗೆ ತನ್ನ ವಾಗ್ದಾನವನ್ನು ನವೀಕರಿಸಿಕೊಂಡನು ಮತ್ತು ತನ್ನ ಆಣೆಯನ್ನು ಇಟ್ಟುಕೊಂಡು ಪ್ರಮಾಣ ಮಾಡಿದನು (ಆದಿಕಾಂಡ 22:16). ಅಬ್ರಹಾಮನು ಬಹುಶಃ ತನ್ನ ಮೊಮ್ಮಕ್ಕಳಾದ ಯಾಕೋಬ ಹಾಗೂ ಏಸಾವರನ್ನು ನೋಡುವದಕ್ಕೆ ಬದುಕಿದ್ದನು. ಹೇಗೂ, ನಂಬಿಕೆಯ ಮೂಲಕ, ಕ್ರಿಸ್ತನ ದಿನವನ್ನು ಕಂಡವನಾಗಿ ಸಂತೋಷ ಪಟ್ಟನು (ಯೋಹಾನ 8:54-56). ಆತನ ಮಹಾನ್ ನಂಬಿಕೆಯು **ಬಹು ದಿವಸ ಕಾದುಕೊಂಡಿದ್ದು** ಎಂದು ಬಣ್ಣಿಸಲ್ಪಟ್ಟಿದೆ. ಆತನು ಪ್ರತಿಯೊಂದು ಪರೀಕ್ಷೆಯ ಬಳಿಕ ನಂಬಿಕೆಯಲ್ಲಿ ಇನ್ನಷ್ಟು ಬಲಗೊಳ್ಳುತ್ತಾ ಬೆಳೆದನು (ರೋಮಾ 4:20); ಆದರೆ ವಾಗ್ದಾನ ಮಾಡಲ್ಪಟ್ಟ ಅನೇಕ ಆಶೀರ್ವಾದಗಳಿಗಾಗಿ ಆತನು ಮರಣದ ನಂತರವೂ ಕಾದುಕೊಂಡಿರಬೇಕಿತ್ತು. ನೆರವೇರಿಕೆಯು ತಕ್ಷಣದಲ್ಲಿ ಆಗುವದಾಗಿದ್ದಲ್ಲಿ ಆಣೆಯು ಅನಾವಶ್ಯಕವಾಗಿರುತ್ತಿತ್ತು.

ಅಬ್ರಹಾಮನ ತನ್ನ ಸಂತತಿಯನ್ನು ನೋಡುವ ಕಾಲದ ವರೆಗೂ ಬದುಕುವನು, ಆತನು ವೈರಿಗಳನ್ನು ಎದುರಿಸದಾಗಲೂ ಹಾನಿಯಿಂದ ದೇವರು ಆತನನ್ನು ತಪ್ಪಿಸಿ ಕಾಪಾಡುವನು, ಮತ್ತು ಆತನು ಅಸಂಖ್ಯಾತರಿಗೆ ತಂದೆಯಾಗುವನು – ಕೇವಲ ಶಾರೀರಿಕ ಮಾತ್ರವೇ ಅಲ್ಲ, ಆದರೆ ನಂಬಿಕೆಯಲ್ಲಿ, ಆತ್ಮೀಕ ಸಂತತಿಯವರಿಗೆ ಸಹ (ಗಲಾತ್ಯ 3:7, 26-29) – ಎಂಬುದನ್ನು ದೇವರ ಆನೆಯು ಖಾತ್ರಿಪಡಿಸಿತ್ತು.

**ವಚನ 16. ಸ್ಥಿರಪಡಿಸಿದ**, βεβαίωσις (*bebaiōsis*) ಎಂಬ ಪದವು, ಏಳು ನೂರಕ್ಕಿಂತ ಅಧಿಕ ವರ್ಷಗಳ ವರೆಗೆ, ಕಾನೂನಾತ್ಮಕವಾಗಿ ಒಂದು ಮಾರಾಟವನ್ನು ಖಾತ್ರಿಪಡಿಸುವಾಗ ಅನ್ವಯವಾಗುತ್ತಿದ್ದ ಅಧಿಕೃತ ಪದವಾಗಿತ್ತು.[39] ನಾವು ಏನನ್ನಾದರೂ ಖರೀದಿಸಲು ಬಯಸಿದರೆ, ನಾವು ಉಳಿದ ಮೊತ್ತವನ್ನು ಭವಿಷ್ಯದ ಒಂದು ಕಾಲದಲ್ಲಿ ಸಂದಾಯ ಮಾಡುತ್ತೇವೆಂಬುದಾಗಿ ನಮ್ಮ ನಂಬಿಕೆಯ ಉತ್ತಮ ಸಂಕೇತವಾಗಿ ಒಂದು ಮುಂಗಡ ಹಣವನ್ನು ಸಂದಾಯ ಮಾಡುವ ಅಗತ್ಯವಿರಬಹುದು. ಸಂದಾಯ ಮಾಡಿದ ಹಣವು ಖರೀದಿಯನ್ನು ನಾವು ಪೂರ್ತಿಗೊಳಿಸುತ್ತೇವೆ ಇಲ್ಲವಾದರೆ ಮುಂಗಡ ಹಣವನ್ನು ಕಳೆದುಕೊಳ್ಳುತ್ತೇವೆ ಎಂದು ಒಂದು **ಆಣೆ**ಯನ್ನು ಇಡುವಂತಿರುತ್ತದೆ. ಅಂತಿಮ, ಪೂರ್ಣ ಮೊತ್ತವನ್ನು ಸಂದಾಯ ಮಾಡುವದಕ್ಕೆ ವಿಫಲರಾದರೆ ತನ್ನ ಮಾತನ್ನು ಉಳಿಸಿಕೊಳ್ಳದಿರುವವನಿಗೆ ದಂಡನೆಯನ್ನು ತರುವದಾಗಿರುತ್ತದೆ.

ಎಲ್ಲಾ ದೇಶಗಳ ಜನರು ಆಣೆಗಳನ್ನು ಗಂಭೀರ ಸ್ವಭಾವದವುಗಳು ಮತ್ತು ಭಾಗಿಯಾಗಿರುವ ಎಲ್ಲಾ ಪಕ್ಷದವರಿಗೆ ಅನ್ವಯವಾಗುವಂಥವುಗಳೆಂದು ಎಣಿಸಿರುತ್ತಾರೆ. ಮನುಷ್ಯರು ತನ್ನ ಆಣೆಗಳನ್ನು ಗಂಭೀರವಾಗಿ ಪರಿಗಣಿಸದಿರುವಾಗ, ಆ ಪ್ರಾಮಾಣಿಕತೆಯ ಕೊರತೆಯು ಯಾವಾಗಲೂ ನೈತಿಕಯಲ್ಲಿನ ಕುಸಿತಕ್ಕೆ ಸೂಚನೆಯಾಗಿರುತ್ತದೆ. ದೇವರು ವಾಗ್ದಾನ ಮಾಡಲ್ಪಟ್ಟ ಬಾಧ್ಯತೆಯು ಒಂದೇ ಬಾರಿಗೆ ಎಲ್ಲಾ ಕಾಲಕ್ಕೂ ಇತ್ಯರ್ಥಗೊಳ್ಳಬೇಕೆಂದು ದೇವರು ಬಯಸಿದ್ದನು. ಆತನ ವಾಗ್ದಾನ ಮತ್ತು ಆಣೆಯ ಮೂಲಕ ಎಲ್ಲಾ ಸಂಶಯಗಳು ಅಳಿಸಿ

ಹಾಕಲ್ಪಡುವವು.

ಕ್ರಿಸ್ತನು ಭೂಮಿಯ ಮೇಲೆ ಜೀವಿಸಿದ ಹೊತ್ತಿಗೆ, ಯೆಹೂದ್ಯರು – ವಿಶೇಷವಾಗಿ ಶಾಸ್ತ್ರಿಗಳು ಮತ್ತು ಫರಿಸಾಯರು – ನಿರ್ಬಂಧಕ್ಕೊಳ ಪಡಿಸದ "ಕಡಿಮೆ ಆಣೆಗಳ" ಒಂದು ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಿದ್ದರು. ಬಹುಶಃ ಅವರು ಆ ವ್ಯವಸ್ಥೆಯನ್ನು ತಮ್ಮೊಳಗೆ ರಹಸ್ಯವಾಗಿ ಇಟ್ಟುಕೊಂಡಿರಬಹುದು, ಆದರೆ ಯೇಸುವಿಗೆ ಗೊತ್ತಿತ್ತು ಮತ್ತು ಅಂಥ ಆಚಾರಗಳ ನಿಮಿತ್ತವಾಗಿ ಅವರನ್ನು ಕಪಟಿಗಳೆಂದು ಬೈಲಿಗೆ ತಂದನು (ಮತ್ತಾಯ 23:16-22). "ನನ್ನ ಗಡ್ಡದ ಮೇಲೆ" ಅಥವಾ "ದೇವಾಲಯದ ಮೇಲೆ" ಆಣೆಯು ಅವರನ್ನು ನಿರ್ಬಂಧಗೊಳಪಡಿಸುವದಾಗಿರಲಿಲ್ಲ. ಆಣೆಯನ್ನಿಟ್ಟಿರುವ ವ್ಯಕ್ತಿಯ ಮೇಲೆ ಸುಳ್ಳಾಡಿದ ಆರೋಪವಿದ್ದಲ್ಲಿ ಆತನು ತಪ್ಪಿತಸ್ಥನೆಂದು ನ್ಯಾಯತೀರಿಸುವದಕ್ಕೆ ಆ ಸುಳ್ಳಿಗೆ ಇಬ್ಬರು ಅಥವಾ ಮೂವರು ಸಾಕ್ಷಿಗಳು ಧರ್ಮಶಾಸ್ತ್ರಕ್ಕೆ ಅಗತ್ಯವಿತ್ತು (ಇಬ್ರಿಯ 10:27, 28; ನೋಡಿರಿ ಧರ್ಮೋಪದೇಶಕಾಂಡ 17:6; 19:15; ಮತ್ತಾಯ 18:16; ಯೋಹಾನ 8:17, 18; 2 ಕೊರಿಂಥ 13:1). ಈ ವ್ಯವಸ್ಥೆಗೆ ವಿರುದ್ಧವಾಗಿ, ಯೇಸುವು ತನ್ನ ಶಿಷ್ಯರಿಗೆ ಸತ್ಯವನ್ನು ಆಡುವಂತೆ ಉಪದೇಶಿಸಿದನು, ಹೀಗೆ ಆಣೆಯಿಡುವದನ್ನು ಅನಾವಶ್ಯಕಗೊಳಿಸಿದನು (ಮತ್ತಾಯ 5:33-37; ಯಾಕೋಬ 5:12). ಆಣೆಯಿಡುವ ಕುರಿತ ಆತನ ಉಪದೇಶವು ಕಾನೂನಿನ ನ್ಯಾಯಾಲಯದಲ್ಲಿ ಸತ್ಯವನ್ನೇ ಹೇಳುತ್ತೇನೆಂದು ಆಣೆಯಿಡುವದನ್ನು ನಿಷೇಧಿಸಲಿಲ್ಲ. ಆತನನ್ನು ಸ್ವತಃ ಆಣೆಯೊಂದರಿಂದ ನಿರ್ಬಂಧಕ್ಕೊಳಪಡಿಸುವ ತನಕ ಆತನು ತನ್ನ ದೈವಿಕ ಪುತ್ರತ್ವದ ಕುರಿತು ಉತ್ತರವನ್ನು ಹೇಳಲಿಲ್ಲ (ಮತ್ತಾಯ 26:63, 64).

**ವಚನ 17.** ಇಬ್ರಿಯರು **ವಾಗ್ದಾನದ ಫಲಕ್ಕೆ ಬಾಧ್ಯರಾಗಿದ್ದರು**, ಆದರೆ **ದೇವರ** ವಾಗ್ದಾನಗಳು ಕ್ರಿಸ್ತನಲ್ಲಿ ಅವರಿಗೆ ಸೇರಿದವುಗಳಾಗಿವೆ ಎಂದು ನಿರ್ದಿಷ್ಟವಾಗಿ ಪುನರ್ದೃಢೀಕರಿಸಲ್ಪಟ್ಟಿರಬೇಕು. ಎಲ್ಲಾ ಕ್ರೈಸ್ತರು ಕ್ರಿಸ್ತನ "ಜೊತೆಯ ಬಾಧ್ಯರು" (ಅಥವಾ "ಜಂಟಿ-ಬಾಧ್ಯರು"; KJV), ಅದರರ್ಥವು ನಾವು ಆತನ ಸಂಗಡ ಸಮಾನವಾಗಿ ಬಾಧ್ಯಸ್ಥರಾಗಿದ್ದೇವೆ (ರೋಮಾ 8:17). ಅಬ್ರಹಾಮನ ಪಾರಂಪರೆಯಾಗಿ ಬಂದ ಸ್ವತ್ತು ಯೆಹೂದ್ಯರಿಗೆ ಮಾತ್ರವೇ ಅಲ್ಲ, ಆದರೆ ಕ್ರಿಸ್ತನಲ್ಲಿರುವ ಅನ್ಯಜನಾಂಗದ ವಿಶ್ವಾಸಿಗಳಿಗೆ ಸಹ ಆಗಿರುತ್ತದೆ. ದೇವರು ತನ್ನ ಜನರಿಗೋಸ್ಕರ ಹೊಂದಿರುವ ಅಂತಿಮವಾದ ಯೋಜನೆಯು ಎಂದಿಗೂ ಮಾರ್ಪಡುವದಿಲ್ಲ. ಆದುದರಿಂದ, ನಮಗೋಸ್ಕರ ಇರುವ ಆತನ ವಾಗ್ದಾನಗಳು **ನಿಶ್ಚಲವಾದದ್ದು**, ಅಥವಾ "ಮಾರ್ಪಡಲಾಗದ್ದು" (KJV) ಆಗಿರುತ್ತದೆ.

ದೇವರ ಕೆಲವು ವಾಗ್ದಾನಗಳು ಶರತ್ತುಬದ್ಧವಾದವುಗಳು; ನಾವು ಶರತ್ತನ್ನು ಪೂರೈಸದಿದ್ದರೆ ಅವುಗಳು ನೆರವೇರಿಕೆ ಬರದಿರಬಹುದು. ಹಾಗಾದರೆ, ಒಡಂಬಡಿಕೆಯು ಹೇಗೆ ಖಾತ್ರಿಪಡಿಸಲ್ಪಡುವದಕ್ಕೆ ಸಾಧ್ಯ? ಒಬ್ಬ ಜಾಮೀನುಗಾರನಾಗಿ ದೇವರಲ್ಲಿ ಭರವಸವಿಡಬಹುದಾಗಿದೆ. ಯಾವ ಮಾನವ ಶರತ್ತುಗಳು ಇಲ್ಲದಿರುವಾಗ ದೇವರ ನಡಿಸುವನೆಂಬದಾಗಿ ಆತನ ವಾಗ್ದಾನಗಳ ಮೇಲೆ ಅವಲಂಬಿತರಾಗಬಹುದಾಗಿದೆ. ಉದಾಹರಣೆಗೆ, ನಮ್ಮ ಕ್ರಿಯೆಗಳು ಏನೇ ಆಗಿದ್ದರೂ ಸರಿಯೇ, ಲೋಕದ ಅಂತ್ಯವು ಬರುತ್ತಿದೆ.

**ವಚನ 18.** ಆತನ ಚಿತ್ತದೊಂದಿಗೆ ಪೂರ್ಣ ಸಾಮರಸ್ಯದೊಂದಿಗೆ, ತಾನು ತನ್ನ ವಾಗ್ದಾನದಲ್ಲಿ ನಂಬಿಗಸ್ತನಾಗಿರುವನು ಎಂಬುದಕ್ಕೆ ದೇವರು ಅಬ್ರಹಾಮನಿಗೆ ಎರಡು ಸಾಕ್ಷಿಗಳನ್ನು ಒದಗಿಸಿದನು. ದೇವರ ಮಾರ್ಪಡಲಾಗದ ವಾಗ್ದಾನಕ್ಕೆ ಆತನ ಮಾರ್ಪಡಲಾಗದ ಆಣೆಯು ಸೇರ್ಪಡೆಗೊಳಿಸಲ್ಪಟ್ಟಿತು; ಹೀಗೆ **ಎರಡು ನಿಶ್ಚಲವಾದ ಆಧಾರಗಳು** ಆತನ ವಾಗ್ದಾನ ಮತ್ತು ಆತನ ಆಣೆಗಳಾಗಿವೆ.

**ದೇವರು ಸುಳ್ಳಾಡಿರಲಾರನು** ಅಥವಾ ತನ್ನ ಸ್ವಭಾವಕ್ಕೆ ಸಮಂಜಸವಲ್ಲದ ಯಾವದನ್ನೂ ಮಾಡುವದಕ್ಕೆ ಸಾಧ್ಯವಿಲ್ಲ; ಆದರೆ ಆತನು ಅಗತ್ಯವಾದರೆ, ತನ್ನ ಸ್ವಭಾವಕ್ಕೆ ಸಮಂಜಸವಾಗಿರುವಂಥದ್ದನ್ನು ಮಾಡಬಲ್ಲನು ಮತ್ತು ಮಾಡುವನು. ಆತನು ವಿಶ್ವವನ್ನು ಸೃಷ್ಟಿಸಬಲ್ಲನು ಅಥವಾ ಸತ್ತವರನ್ನು ಎಬ್ಬಿಸಬಲ್ಲನು, ಆದರೆ ಆತನು ಸುಳ್ಳಾಡಲಾರನು ಅಥವಾ ತನ್ನನ್ನು ನಿರಾಕರಿಸಿಕೊಳ್ಳಲಾರನು (2 ತಿಮೊಥೆ 2:13). ಆತನು ತನ್ನ ಆಣೆಯನ್ನು ಮೀರಿದವನಾಗಿದ್ದರೆ, ಆತನ ಇರುವಿಕೆಯ ಕಟ್ಟಳೆಗಳೇ ಸ್ವತಃ ಉಲ್ಲಂಘಿಸಲ್ಪಡುತ್ತಿದ್ದವು. ಆಗ ಆತನು ನಮಗೆ ಗೊತ್ತಿರುವ ಹಾಗೂ ನಾವು ಪ್ರೀತಿಸುವ ದೇವರಾಗಿ ಇರುವದನ್ನು ನಿಲ್ಲಿಸಿ ಬಿಟ್ಟಿರುತ್ತಿದ್ದನು.

ದೇವರು ಸುಳ್ಳಾಡುವದಕ್ಕೆ ಸಾಧ್ಯವಿಲ್ಲವೆಂದು ಪ್ರಾಚೀನ ಜಗತ್ತು ಜಾಗತಿಕವಾಗಿ ನಂಬಿತ್ತು. R. C. H. Lenskiನು ಹೀಗೆ ಬರೆದನು, "ಕ್ರಿಸ್ತನಿಂದ ವಿಮುಖನಾಗಬಹುದಾದ ಮತ್ತು ಯೆಹೂದಿಮತಕ್ಕೆ ಹಿಂದಿರುಗುವವನು [ಯಾವನಾದರೂ] ಆ ಮೂಲಕ ದೇವರ ಮೇಲೆ ಎರಡು ಸುಳ್ಳುಗಳ ಆರೋಪ ಮಾಡುವವನಾಗಿದ್ದಾನೆ: ಆತನ ವಾಗ್ದಾನವು ತಾನು ಹೇಳುವದನ್ನು ಗಂಭೀರವಾಗಿ ಪರಿಗಣಿಸುವದಿಲ್ಲ, ಮತ್ತು ಆ ಆಣೆಯು ಸುಳ್ಳು ಪ್ರಮಾಣ ಎಂಬದೆ."[40]

ನಾವು ದೇವರಲ್ಲಿ ಒಬ್ಬ ಪ್ರಾಚೀನ ಕೊಲೆಗಾರನು ಆಶ್ರಯನಗರಕ್ಕೆ ಓಡಿ ಹೋಗುತ್ತಿದ್ದ ಪ್ರಕಾರ[41] (ಅರಣ್ಯಕಾಂಡ 35; ಯೆಹೋಶುವ 20) ಅಥವಾ ನಾವಿಕನು ಸುರಕ್ಷಿತವಾದ ಬಂದರಿನಲ್ಲಿ ಇದ್ದು ಒಂದು ಬಿರುಗಾಳಿಯ ಕೋಪಾಗ್ನಿಯಿಂದ ತಪ್ಪಿಸಿಕೊಳ್ಳುವ ಪ್ರಕಾರ, **ಆಶ್ರಯವನ್ನು ಹೊಂದಬೇಕೆಂದು ಓಡಿಬಂದು . . .** ಇದ್ದೇವೆ. ಪ್ರಾಚೀನ ಜನರು, ವಿವಿಧ ಭಯಾನಕತೆಗಳಿಂದ ಓಡಿ ಹೋಗುವ ವೇಳೆ, ಅನೇಕ ಸಾರಿ ತಮ್ಮ ದೇವಾಲಯಗಳಲ್ಲಿ ಆಶ್ರಯ ಪಡಕೊಳ್ಳುತ್ತಿದ್ದರು. ಹೊಸ ಒಡಂಬಡಿಕೆಯ ಅಡಿಯಲ್ಲಿ, ಕ್ರೈಸ್ತರು ದೇವರ ಹೊಸ ಆಲಯದ ತೆರೆಯ ಹಿಂದೆ ಆಶ್ರಯವನ್ನು ಪಡಕೊಳ್ಳುತ್ತಾರೆ. ನಮಗೆ ಕ್ರಿಸ್ತನೊಂದಿಗೆ ಸಂಪೂರ್ಣ ಭದ್ರತೆಯು ಇರುತ್ತದೆ, ಆತನು ಈಗಾಗಲೆ ಅದನ್ನು ಪ್ರವೇಶಿಸಿದ್ದಾನೆ. ನಾವು "ತೆರೆಯೊಳಗಣ ಸಾನಿಧ್ಯವನ್ನು" ಪ್ರವೇಶಿಸುವಾಗ (ವ. 19), ನಾವು ಯೇಸುವಿನ ಬಾಹುಗಳಲ್ಲಿ ಸುರಕ್ಷಿತವಾಗಿರುತ್ತೇವೆ.

ಈ ಭದ್ರತೆಯು ಎಲ್ಲಾ ಬಂಧನಗಳಿಂದ ಬಿಡುಗಡೆಯು ಸಹ ಆಗಿರುತ್ತದೆ. ನಮ್ಮಲ್ಲಿ ಪ್ರತಿಯೊಬ್ಬರು ಸಹ ನಮ್ಮ ಜೀವಿತದಲ್ಲಿ ದೇವರೇ ನಮ್ಮ ಆಶ್ರಯವು ಮತ್ತು ಬಲವು ಆಗಿರಬೇಕಾದ ಸಮಯವೊಂದಕ್ಕೆ ಬರುವೆವು. ಕೀರ್ತನೆ 46:1, 2ರಲ್ಲಿ ಅನೇಕರು ಪ್ರೋತ್ಸಾಹವನ್ನು ಕಂಡುಕೊಂಡಿದ್ದಾರೆ:

> ದೇವರು ನಮಗೆ ಆಶ್ರಯದುರ್ಗವಾಗಿದ್ದಾನೆ;
> ಆತನು ಇಕ್ಕಟ್ಟಿನಲ್ಲಿ ನಮಗೆ ವಿಶೇಷ ಸಹಾಯಕನು.
> ಆದದರಿಂದ ಭೂಮಿಯು ಮಾರ್ಪಟ್ಟರೂ ಬೆಟ್ಟಗಳು ಸಮುದ್ರದಲ್ಲಿ ಮುಣುಗಿಹೋದರೂ
> ನಮಗೇನೂ ಭಯವಿಲ್ಲ.

ನಾವು ಶೀಘ್ರವೇ ಕಾಣೆಯಾಗಲಿರುವ ಈಗಿನ ಲೋಕದಿಂದ ತಪ್ಪಿಸಿಕೊಂಡು ಓಡುತ್ತಿರುವ ನಿರಾಶ್ರಿತರಾಗಿದ್ದೇವೆ. ನಮ್ಮ ಸಾನಿಧ್ಯವು ಪರಲೋಕದಲ್ಲಿರುವಂಥದು, ಹೊರತು ಭೂಲೋಕದ ದೇವಾಲಯದಲ್ಲಿ ಅಲ್ಲ. ನಮ್ಮ ನಿರೀಕ್ಷೆಯು ನಮ್ಮನ್ನು ಮುಂದೆ ಸಾಗುತ್ತಲೇ ಇರುವಂತೆ ಮಾಡುತ್ತದೆ; "ನಮ್ಮ ಮುಂದೆ ಇಟ್ಟಿರುವ ನಿರೀಕ್ಷೆ," "ಇನ್ನು ಮುಂದೆ ಆಗುವ ಪಟ್ಟಣ" ದಲ್ಲಿನ ನಂಬಿಕೆಯ ಮೂಲಕ ನಮಗೆ ಪುರಾವೆಯ ಇರುತ್ತದೆ (13:14).

ದೇವರು ನಮಗಾಗಿ **ಬಲವಾದ ಧೈರ್ಯ**ವನ್ನು ಕೊಡುವದಕ್ಕೆ ಬಯಸಿದ್ದನು. "ಧೈರ್ಯ"

ಎಂಬುದಕ್ಕಿರುವ ಪದವು παράκλησις (*paraklēsis*), ಅದರ ಅರ್ಥವು "ಸಾಮತ್ವನ," "ಆದರಣೆ," ಅಥವಾ "ಪ್ರಬೋಧನೆ" ಎಂದು ಸಹ ಆಗಿರಬಲ್ಲದು. ದೇವರ ವಾಗ್ದಾನದಲ್ಲಿ ಈ ಎಲ್ಲಾ ವಿಚಾರಗಳು ತುಂಬಿರುತ್ತವೆ. ಆ ವಾಗ್ದಾನಗಳಿಂದ ನಾವು ನಮ್ಮ ಅತ್ಯಂಥ ಬಲವಾದ ಧೈರ್ಯವನ್ನು ಪಡೆದುಕೊಳ್ಳುತ್ತೇವೆ; ನಾವು ಅವುಗಳಲ್ಲಿ ಸುರಕ್ಷಿತವಾಗಿ ನಿಲ್ಲಬಲ್ಲೆವು. ನಾವು ತಪ್ಪಿಸಿಕೊಳ್ಳುವ ದಾರಿಯನ್ನು ಹುಡುಕುವದಕ್ಕೆ, ಅದಕ್ಕಾಗಿ ಕಾಯುವದಕ್ಕೆ, ಮತ್ತು ಅದರ ಪ್ರಯೋಜನವನ್ನು ಪಡೆದುಕೊಳ್ಳುವದಾದರೆ, ದೇವರು ಯಾವಾಗಲೂ ಶೋಧನೆಯಿಂದ ತಪ್ಪಿಸಿಕೊಳ್ಳುವ ಒಂದು ದಾರಿಯನ್ನು ಏರ್ಪಡಿಸುತ್ತಾನೆ (1 ಕೊರಿಂಥ 10:13).

**ವಚನ 19.** ಯೋಹಾನ 14:1, 2ರಲ್ಲಿರುವ ರೀತಿಯ ವಾಗ್ದಾನಗಳ ಮೇಲೆ ಕಟ್ಟಲ್ಪಟ್ಟ **ನಿರೀಕ್ಷೆಯು ಪ್ರಾಣಕ್ಕೆ ಲಂಗರು** ಆಗಿರುತ್ತದೆ. ಒಂದು ನೌಕೆಯು ಸರಿಯಾಗಿ ಲಂಗರು ಹಾಕಲ್ಪಟ್ಟಿದ್ದರೆ ಅತ್ತಿತ್ತ ತಪ್ಪಿ ಹೋಗಲಾರದು, ಅದೇ ರೀತಿಯಲ್ಲಿ ನಾವು ತಪ್ಪಿ ಹೋಗಲಾರೆವು. ಲಂಗರು ಬಲವಾಗಿರುವದಾದರೆ, ಅದು ಬಗ್ಗುವದಿಲ್ಲ ಅಥವಾ ಮುರಿಯುವದಿಲ್ಲ; ಮತ್ತು ಭದ್ರವಾಗಿ ನೆಲೆಯೂರಿಸಲ್ಪಟ್ಟಿದ್ದರೆ, ನಮ್ಮ ಜೀವನದ ಹಡಗು ಭದ್ರವಾಗಿರುವದು. ನಾವು ನಮ್ಮ ಮಹಿಮಕರವಾದ ನಿರೀಕ್ಷೆಯನ್ನು ಕಳಕೊಳ್ಳುವದಾದರೆ, ಎಲ್ಲವೂ ಕಳೆದು ಹೋದಂತೆಯೇ. ಪ್ರಾಚೀನ ಜಗತ್ತಿನಲ್ಲಿ ಲಂಗರಿನ ಸಾದೃಶ್ಯವು ಸಾಮಾನ್ಯವಾಗಿರುತ್ತಿತ್ತು. Socratesನು ಹೀಗೆ ಹೇಳಿದನು, "ಒಂದು ಹಡಗು ಒಂದು ಲಂಗರಿನ ಮೇಲೆ ಆಧಾರವಾಗಿರಲಾರದು, ಅಥವಾ ಜೀವಿತವು ಒಂದು ನಿರೀಕ್ಷೆಯ ಮೇಲೆ ಆಧಾರವಾಗಿರಲಾರದು."[42] ನಾವಿಕನು ಲಂಗರನ್ನು ಸಮುದ್ರದ ಆಳಕ್ಕೆ ಎಸೆಯುತ್ತಾನೆ, ಆದರೆ ಕ್ರೈಸ್ತನ ಲಂಗರು ಪರಲೋಕದಲ್ಲಿದೆ, ಅಲ್ಲಿ ಯೇಸು **ತೆರೆಯೊಳಗಣ ಸಾನಿಧ್ಯ**ವನ್ನು ಪ್ರವೇಶಿಸಿದ್ದಾನೆ (6:19; ನೋಡಿರಿ 9:24). ನಮ್ಮ ಲಂಗರು ಕ್ರಿಸ್ತನು – "ಕ್ರಿಸ್ತನು ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರಭೂತನಾಗಿರುವದೇ" (ಕೊಲೊಸ್ಸೆ 1:27; ನೋಡಿರಿ 1 ತಿಮೊಥೆ 1:1).

ಲೇಖಕನು ಈ ರೀತಿಯಾಗಿ ಹೇಳಬೇಕೆಂದು ಒಬ್ಬನು ಎದುರುನೋಡಿರಬಹುದು, "ನಾವು ಸುರಕ್ಷಿತವಾದ ಬಂದರಿನ ಆಳದಲ್ಲಿ ಲಂಗರು ಹಾಕಲ್ಪಟ್ಟಿದ್ದೇವೆ." ಬದಲಾಗಿ, ಆತನು ಒಂದು "ಅಚ್ಚುಕಟ್ಟಾದ ಭಾವೋತ್ತೇಜಕ ಸಾಧನ"[43] ಮೂಲಕ, ಆತನು ಕ್ರಿಸ್ತನ ಮಹಾಯಾಜಕತ್ವದ ವಿಷಯದ ಕಡೆಗೆ ಹಿಂದಿರುಗಿಕೊಳ್ಳುತ್ತಾನೆ.

**ವಚನ 20. ಯೇಸು**ವು ನಡಿಸುವ ರೀತಿಯಲ್ಲಿ, ಹಳೆಯ ಒಡಂಬಡಿಕೆಯ ಯಾವ ಯಾಜಕನೂ ಆರಾಧಕರನ್ನು ತೆರೆಯ ಹೊಂದಿನ ಸ್ಥಳದೊಳಗೆ ನಡಿಸಲಾರನು, ಮತ್ತು ಹಳೆಯ ಒಡಂಬಡಿಕೆಯ ಯಾವ ಯಾಜಕನೂ ನಮಗೆ **ಮುಂದಾಗಿ** (ಮುಂದೂತನಾಗಿ) ಹೋಗಿರುವದಕ್ಕೆ ಸಾಧ್ಯವಿರಲಿಲ್ಲ. ಈ πρόδρομος (*prodromos*) ಎಂಬ ಪದವು ಒಂದು ಸೈನ್ಯಕ್ಕೆ ಮುಂದಾಗಿ ಹೋಗುವ ಬೇಹುಗಾರನಿಗೆ ಬಳಸಲಾಗಿರುತ್ತದೆ. ನಮಗೆ "ತೆರೆಯ ಹಿಂದಿನ ಒಳಗಣ ಗುಡಿಯೊಳಗೆ ಪ್ರವೇಶಿಸುವಂಥ ನಿರೀಕ್ಷೆಯು" ಇರುತ್ತದೆ (NRSV), ಅದು ದೇವಾಲಯದಲ್ಲಿ ಅತಿ ಪರಿಶುದ್ಧ ಸ್ಥಳವು ಪರಲೋಕದಲ್ಲಿನ ಮಹಿಮೆಯ ಸಂಕೇತವಾಗಿತ್ತೆಂಬುದನ್ನು ಸೂಚಿಸುತ್ತದೆ (ನೋಡಿರಿ 9:11, 12). ಅದೇ ಸ್ಥಳಕ್ಕೆ ಯೇಸು ತನ್ನ ರಕ್ತವನ್ನು ತೆಗೆದುಕೊಂಡವನಾಗಿ ಹೋದನು.

ಯೇಸು ಒಂದು ದಿನ ನಮ್ಮನ್ನು ತನ್ನೊಂದಿಗೆ ಪರಲೋಕದೊಳಗೆ ಕರೆದೊಯ್ಯುವನು. ಭೂಲೋಕದ ಯಾಜಕರು ಕೇವಲ ಪರಲೋಕದಲ್ಲಿರುವದಕ್ಕೆ ಛಾಯೆಯಾಗಿದ್ದರಲ್ಲಿ ಮಾತ್ರವೇ ಪ್ರವೇಶಿಸುವದಕ್ಕೆ ಶಕ್ತರಾಗಿದ್ದರು. "ತೆರೆ"ಯು ಭೌತಿಕ ಮತ್ತು ಅಭೌತಿಕ ಪ್ರಪಂಚಗಳ ನಡುವಿನ ಒಂದು ಹಂತವನ್ನು ಸೂಚಿಸಬಹುದಾಗಿದೆ. ಮಾನವನ ಅನುಭವಕ್ಕೆ ನಿಲುಕದಂತಹ ಮಂಡಲದೊಳಗೆ ಪ್ರವೇಶಿಸಿದವನಾಗಿ, ಕ್ರಿಸ್ತನು ನಮಗೆ ಅನುಸರಿಸುವದಕ್ಕಾಗಿ ಒಂದು

"ಜೀವವುಳ್ಳ ಹೊಸ ದಾರಿ"ಯನ್ನು ತೆರೆದನು (10:20-22). ಅಂಥ ವಾಗ್ದಾನಗಳು "ಭರವಸಕ್ಕೆ ಯೋಗ್ಯ ಮತ್ತು ಸ್ಥಿರವಾದವುಗಳು" ಆಗಿವೆ (ವ. 19) ಯಾಕೆಂದರೆ ದೇವರ ವಾಕ್ಯಗಳು ಯಾವಾಗಲೂ ಸತ್ಯವೆಂದು ಸಾಬಿತಾಗಿರುತ್ತವೆ. ಆತನು ಕೇವಲ ಒಂದು ಅಂಶದಲ್ಲಿ ವಿಫಲನಾದರೆ, ನಾವು ಆತನನ್ನು ಸುಳ್ಳುಗಾರನು ಮತ್ತು ಆತನ ವಾಗ್ದಾನಗಳಲ್ಲಿ ಒಂದನ್ನೂ ವಿಶ್ವಾಸಿಸಬಾರದು ಎಂದು ಪರಿಗಣಿಸುವೆವು.

ಸ್ನಾನಿಕನಾದ ಯೋಹಾನನ ರೂಪದಲ್ಲಿ ಯೇಸುವಿಗೆ ಒಬ್ಬ ಮುಂದೂತನು ಇದ್ದ ಹಾಗೆಯೇ, ಯೇಸುವಿನ ರೂಪದಲ್ಲಿ ನಮಗೊಬ್ಬ ಮುಂದೂತನು ಇದ್ದಾನೆ, ಆತನು ದಾರಿಯನ್ನು ಸಿದ್ಧಗೊಳಿಸಿದನು ಮತ್ತು ನಮಗಾಗಿ ಒಂದು ಸ್ಥಳವನ್ನು ಸಿದ್ಧಪಡಿಸುತ್ತಿದ್ದಾನೆ (ಯೋಹಾನ 14:1-3, 6). "ಮುಂದೂತನು" ಎಂಬುದು ವಸಂತಕಾಲದ ಮೊಲದ ಚಿಗುರು ಹಾಗೂ ದ್ರಾಕ್ಷೆಯ ಗಾಣದಿಂದ ಬೀಳುವ ಮೊದಲ ಹನಿಗಳನ್ನು ಸೂಚಿಸಬಹುದಾಗಿದೆ.[44] ಈ ಪದವನ್ನು ಗ್ರೀಕ್ ಬರಹಗಳಲ್ಲಿ ಒಂದು ಸೈನ್ಯದ ಮುಂದಾಗಿ ಹೋಗಿ ಒಂದು ಇಳುಕೊಳ್ಳುವ ಸ್ಥಳವನ್ನು ಕಂಡುಕೊಳ್ಳಲು ಮತ್ತು ವೈರಿಯ ಅನಿರೀಕ್ಷಿತ ದಾಳಿಗಳನ್ನು ತಡೆಯುವದಕ್ಕಾಗಿ ಕಳುಹಿಸಲ್ಪಡುತ್ತಿದ್ದ ಬೇಹುಗಾರರನ್ನು ಸೂಚಿಸುವದಕ್ಕೆ ಬಳಸಲ್ಪಡುತ್ತಿತ್ತೆಂದು Bruceನು ಹೇಳುತ್ತಾನೆ.[45] ಆರೋನನು ನಿಯತಕ್ರಮವಾಗಿ ಅತಿ ಪರಿಶುದ್ಧ ಸ್ಥಳದೊಳಗೆ ಹೋಗುತ್ತಿದ್ದನು, ಆದರೆ ಎಂದಿಗೂ ಒಬ್ಬ "ಮುಂದೂತ" ನಾಗಿ ಹೋಗಲಿಲ್ಲ. ಯೇಸುವು ನಮ್ಮ ಬೇಹುಗಾರನು; ಆತನು ನಮಗಾಗಿ ದಾರಿಯನ್ನು ಬಹಳಷ್ಟು ಸುಲಭಗೊಳಿಸುವದಕ್ಕಾಗಿ ನಮ್ಮ ಮುಂದಾಗಿ ಹೋಗಿದ್ದಾನೆ.

ಯೇಸುವು ನಮ್ಮ "ಮಾರ್ಗಶೋಧಕ" ಮತ್ತು ನಮಗೆ ಕೆಲವು ಸಾರಿ ಬಂಡೆಗಳಿಂದ ಕೂಡಿದ್ದರೂ ಆ ನಿತ್ಯವಾದ ಗಮ್ಯತೆಗೆ ಸಾಗುವ ಹೆಜ್ಜೆಗಳ ಗುರುತಿನ ದಾರಿಯು ಚೆನ್ನಾಗಿ ಗುರುತಿಸಲ್ಪಟ್ಟಿರುವಂತಾಗಲು ಆತನು ಪರಲೋಕವನ್ನು ಪ್ರವೇಶಿಸಿದ್ದಾನೆ. ಕ್ರಿಸ್ತನು ಮರಣಿಸಿದಾಗ, ದೇವರಿಗೊಬ್ಬನಿಗೆ ಮಾಡುವದಕ್ಕೆ ಸಾಧ್ಯವಿರುವ ಪ್ರಕಾರ, ದೇವಾಲಯದೊಳಗಿನ ತೆರೆಯು ಮೇಲಿನಿಂದ ಕೆಳಗಿನ ವರೆಗೂ ಇಬ್ಭಾಗವಾಯಿತು (ಮತ್ತಾಯ 27:51); ಮಹಿಮೆಯೊಳಗೆ ಪ್ರವೇಶಿಸುವ ದಾರಿಯು ಈಗ ತೆರೆಯಲ್ಪಟ್ಟಿರುತ್ತದೆ.

20ನೇ ವಚನವು **ಸದಾಕಾಲವೂ ಮೆಲ್ಕಿಜೆದೇಕನ ತರಹದ ಮಹಾಯಾಜಕನಾಗಿದ್ದು** ಎಂಬುದರೊಂದಿಗೆ ಮುಕ್ತಾಯಗೊಳ್ಳುತ್ತದೆ. (5:6, 10; 6:20; 7:1-15ರ ಮೇಲಿನ ಚರ್ಚೆಯನ್ನು ನೋಡಿರಿ.)

## ಹೆಚ್ಚಿನ ಅಧ್ಯಯನಕ್ಕಾಗಿ: ದೀಕ್ಷಾಸ್ನಾನ (6:2)

ಹೊಸ ಒಡಂಬಡಿಕೆಯ ಸಭೆ ಸದಸ್ಯರು ಯೇಸುವಿನಿಂದ ಆಜ್ಞಾಪಿಸಲ್ಪಟ್ಟ ದೀಕ್ಷಾಸ್ನಾನವನ್ನು ತಮ್ಮ ಮೂಲಭೂತ ಬೋಧನೆಯ ಭಾಗವೆಂದು ಅರ್ಥಮಾಡಿಕೊಂಡಿದ್ದರು. ಅವರು ರಾಜ್ಯವನ್ನು, ಅಥವಾ ಕ್ರಿಸ್ತನ ದೇಹವನ್ನು ಪ್ರವೇಶಿಸಬೇಕಾದರೆ ಸಹ ಇದನ್ನು ತಿಳಿದುಕೊಳ್ಳಬೇಕಿತ್ತು (1 ಕೊರಿಂಥ 12:13). ಇದೊಂದು ಮತ್ತೆಂದಿಗೂ ಪುನರಾವರ್ತನೆ ಮಾಡಲಾಗದ ಕ್ರಿಯೆಯಾಗಿದೆ ಎಂಬುದನ್ನು ಅವರು ಬಲ್ಲವರಾಗಿದ್ದರು. ಅವರು ಆ ಸತ್ಯವನ್ನು ಮರೆತು ಹೋಗದೆ ಅದನ್ನು ದಾಟಿ ಬೆಳೆದವರಾಗಿರಬೇಕಿತ್ತು. ದೀಕ್ಷಾಸ್ನಾನವು ಮರೆತು ಹೋಗಲಾರದಷ್ಟು ಅತ್ಯಂಥ ಜೀವಧಾರಕವಾಗಿತ್ತು! ಇದು ಆಜ್ಞೆಗಳಲ್ಲಿ ತೋರಿಸಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 10:48), ಇದು ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ "ಕ್ರಿಸ್ತನು ಸಾರಲ್ಪಡುವದನ್ನು" ಕೇಳಿದ್ದಕ್ಕೆ ವಿಧೇಯರಾಗುವಂತೆ ದೃಷ್ಟಾಂತಪಡಿಸಲ್ಪಟ್ಟಿರುತ್ತದೆ (8:29-39),

ಮತ್ತು ಪತ್ರಿಕೆಗಳಲ್ಲಿ ಕರ್ತನ ದೇಹದ ಎಲ್ಲಾ ಸದಸ್ಯರಿಂದ ಮಾಡಲ್ಪಡುವ ಕಾರ್ಯವೆಂದು ಸೂಚಿಸಲ್ಪಟ್ಟಿದೆ.[46] ಅದು ಕ್ರಿಸ್ತನನ್ನು ಮತ್ತು ಶಿಲುಬೆಗೆ ಹಾಕಲ್ಪಟ್ಟವನನ್ನು ಸಾರುವದರ ಒಂದು ಭಾಗವಾಗಿ ಉಪದೇಶಿಸಲ್ಪಡುತ್ತಿತ್ತು (ಅಪೊಸ್ತಲರ ಕೃತ್ಯಗಳು 8:35-39; 1 ಕೊರಿಂಥ 2:2; ನೋಡಿರಿ ಅಪೊಸ್ತಲರ ಕೃತ್ಯಗಳು 18:8).

ಕ್ರೈಸ್ತರು ಅದರ ಮಹತ್ವಪೂರ್ಣತೆಯನ್ನು ಅರ್ಥಮಾಡಿಕೊಂಡರು, ಮತ್ತು ಅವರು ಪುನಃ ಪಾಪಕ್ಕೆ ಹಿಂದಿರುಗದಂತೆ ಅವರನ್ನು ಪ್ರೋತ್ಸಾಹಿಸುವದಕ್ಕೆ ಪೌಲನು ಮಾಡಬೇಕಾದದ್ದೆಲ್ಲಾ ಅವರಿಗೆ "ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ" ಮಾಡಿಸಿಕೊಂಡಾಗ ಏನಾಯಿತೆಂಬುದನ್ನು ಕೇವಲ ಜ್ಞಾಪಿಸುವದಷ್ಟೆ ಆಗಿತ್ತು (ರೋಮಾ 6:3, 4). ಆ "ಮರಣ" ವು ಅವರು ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಾಗ ಸಂಭವಿಸಿದ ಅವರ ಪಾಪಗಳ ಮರಣ ಆಗಿತ್ತು. ಇದು ನೋಹನ ರಕ್ಷಣೆಯಲ್ಲಿನ ಕಾಣುವ ನಮೂನೆಯ ಒಂದು ನೆರವೇರಿಕೆಯಾಗಿತ್ತು (1 ಪೇತ್ರ 3:20, 21). ಖಂಡಿತವಾಗಿಯೂ, ಕೆಲವರು ದೀಕ್ಷಾಸ್ನಾನವನ್ನು "ಅದು ಆಂತರ್ಯದ ಅನುಭವವೊಂದರ ಬಾಹ್ಯ ವ್ಯಕ್ತಪಡಿಸುವಿಕೆ" ಎಂದು ಕರೆಯುವದಕ್ಕಿಂತಲೂ ಹೆಚ್ಚಿನದೆಂದು ಅವರಿಗೆ ಗೊತ್ತಿತ್ತು. ಇದು ಅವರು ಕ್ರಿಸ್ತನನ್ನು ನಂಬಿಕೆಯ ಮೂಲಕ ಪ್ರವೇಶಿಸಿದ ಮತ್ತು ಕ್ರಿಸ್ತನ ಮೇಲಿಟ್ಟಿರುವ ನಂಬಿಕೆಯಿಟ್ಟ ದಾರಿಯಾಗಿತ್ತು (ಗಲಾತ್ಯ 3:26, 27). ದೀಕ್ಷಾಸ್ನಾನವು ಆಜ್ಞಾಪಿಸಲ್ಪಟ್ಟಿದೆಯಾದ್ದರಿಂದ ಹೊಸ ಒಡಂಬಡಿಕೆಯಲ್ಲಿ ಅದರ ಬಗ್ಗೆ ಅಷ್ಟಾಗಿ ಚರ್ಚಿಸಲಾಗಿರುವದಿಲ್ಲ. ಅದು ಸ್ನಾನಿಕನಾದ ಯೋಹಾನನ ಅಡಿಯಲ್ಲಿ ವಿಧೇಯವಾಗಲ್ಪಟ್ಟಿತು (ಮತ್ತಾಯ 3:1-5), ಯೇಸು ಕ್ರಿಸ್ತನು ವಿಧೇಯನಾದನು (ಯೋಹಾನ 4:1-3), ಮತ್ತು ಅಪೊಸ್ತಲರ ಕೃತ್ಯಗಳಲ್ಲಿನ ಪರಿವರ್ತನೆಗಳ ವಿವರಣೆಯಲ್ಲಿ ವಿಧೇಯವಾಗಲ್ಪಟ್ಟಿತು. ಅದೊಂದು ಎಷ್ಟು ಸರಳವಾದ ಆಜ್ಞೆಯಾಗಿತ್ತೆಂದರೆ ಅದಕ್ಕೆ ವಿಧೇಯರಾದವರೆಲ್ಲರೂ ತಾವು "ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು" ಎಂಬುದನ್ನು ಅರ್ಥಮಾಡಿಕೊಂಡರು (ರೋಮಾ 6:3; ಗಲಾತ್ಯ 3:27), ಮತ್ತು ಅದರ ಚಟುವಟಿಕೆ ಅಥವಾ ಕ್ರಿಯೆಯ ಕುರಿತು ಯಾವದೇ ಚರ್ಚೆಯ ಅಗತ್ಯವು ಅದಕ್ಕಿರಲಿಲ್ಲ.

## ಅನ್ವಯಿಸುವಿಕೆ

### ಪರಿಪೂರ್ಣತೆಯ ಕಡೆಗೆ (6:1)

ಪೌಲನು ಆತ್ಮದಲ್ಲಿ ಪ್ರಗತಿ ಹೊಂದುವದಕ್ಕೆ ಬಹು ಮುಖ್ಯವಾಗಿರುವದು ಏನೆಂದು ತಿಮೊಥೆಯನಿಗೆ ತಿಳಿಸಿದನು: "ನೀನಾದರೋ ಕಲಿತು ದೃಢವಾಗಿ ನಂಬಿದ ಬೋಧನೆಗಳಲ್ಲಿ ನೆಲೆಯಾಗಿರು" (2 ತಿಮೊಥೆ 3:14). ನಮ್ಮನ್ನು ಹಿಂದಿನ ಸ್ಥಿತಿಗೆ ಹೋಗದಂತೆ ತಡೆಯುವದಕ್ಕಾಗಿ ಬೆಳೆಯುವಂತಹ ನಂಬಿಕೆಯು ಅವಶ್ಯಕವಾಗಿರುತ್ತದೆ. ಮತಭ್ರಷ್ಟತೆಯಿಂದ ದೂರವಿರುವದಕ್ಕೆ, ನಾವು ಆ ಅಪಾಯದ ಕುರಿತ ಭಯದ ಮೂಲಕ ಸ್ಫೂರ್ತಿಯನ್ನು ಪಡೆದುಕೊಳ್ಳತಕ್ಕದ್ದು. ದುಷ್ಟ ಮನುಷ್ಯರ ಮೋಸತನಗಳಿಗೆ ತದ್ವಿರುದ್ಧವಾಗಿ, ಪೌಲನು ತಿಮೊಥೆಯನಿಗೆ ತಾನು ಈಗಾಗಲೆ ಕಲಿತಿರುವ ಮತ್ತು ಖಂಡಿತವಾಗಿ ತಿಳಿದುಕೊಂಡಿರುವಂತಥವುಗಳಿಂದ ವಿಮುಖನಾಗದಂತೆ ಬೇಡಿಕೊಳ್ಳುತ್ತಾನೆ. ಪೌಲನು ಮನಸ್ಸಿನಲ್ಲಿ ಏನನ್ನು ಇಟ್ಟುಕೊಂಡು ಹೇಳಿದನು? ಆತನು ಮುಂದುವರೆದು ಹೀಗೆ ಹೇಳುತ್ತಾನೆ,

> ಚಿಕ್ಕಂದಿನಿಂದಲೂ ನಿನಗೆ ಪರಿಶುದ್ಧ ಗ್ರಂಥಗಳ ಪರಿಚಯವಾಯಿತಲ್ಲಾ. ಆ ಗ್ರಂಥಗಳು ಕ್ರಿಸ್ತಯೇಸುವಿನಲ್ಲಿರುವ ನಂಬಿಕೆಯ ಮೂಲಕ ರಕ್ಷಣೆಹೊಂದಿಸುವ ಜ್ಞಾನವನ್ನು ಕೊಡುವದಕ್ಕೆ

> ಶಕ್ತವಾಗಿವೆ. ದೈವಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿಶಿಕ್ಷೆಗೂ ಉಪಯುಕ್ತವಾಗಿದೆ. ಅದರಿಂದ ದೇವರ ಮನುಷ್ಯನು ಪ್ರವೀಣನಾಗಿ ಸಕಲಸತ್ಕಾರ್ಯಕ್ಕೆ ಸನ್ನದ್ಧನಾಗುವನು (2 ತಿಮೊಥೆ 3:14-17).

ಪ್ರೇರಿತ ಶಾಸ್ತ್ರಗಳು, ಅಥವಾ ಪವಿತ್ರ ಬರಹಗಳು ಹಳೆಯ ಮತ್ತು ಹೊಸ ಒಡಂಬಡಿಕೆಗಳನ್ನು ಒಳಗೊಂಡಿವೆ. ತಿಮೊಥೆಯನು ಬೆಳೆಯಬೇಕಾದರೆ ಅವೆರಡನ್ನೂ ಅಧ್ಯಯನ ಮಾಡುವದನ್ನು ಮುಂದುವರೆಸಬೇಕಿತ್ತು. ಆತನು ಒಬ್ಬ ಯುವಕನಾಗಿರುವಾಗ ಹೊಸ ಒಡಂಬಡಿಕೆಯ ತತ್ವಗಳು ಕಲಿಸಲ್ಪಟ್ಟಿರಲಿಲ್ಲ, ಕನಿಷ್ಠ ಪೌಲನು ಸುವಾರ್ತೆಯನ್ನು ಸಾರುವದಕ್ಕೆ ಬರುವ ತನಕ ಅವನಿಗೆ ಕಲಿಸಲ್ಪಟ್ಟಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ; ಆದರೆ ಪೌಲನು "ಗ್ರಂಥಗಳು" ಎಂದು ಕರೆಯುವದರಲ್ಲಿ ಹೊಸ ಒಡಂಬಡಿಕೆಯನ್ನು ಒಳಗೊಂಡಿರುತ್ತದೆ. ಹಳೆಯ ಒಡಂಬಡಿಕೆಯಿಂದ ಉಲ್ಲೇಖ ಮಾಡುವದರ ಜೊತೆಗೆ, ಆತನು 1 ತಿಮೊಥೆ 5:18ರಲ್ಲಿ ಲೂಕ 10:7 ಅಥವಾ ಮತ್ತಾಯ 10:10ನ್ನು ಉಲ್ಲೇಖಿಸುವ ಮೂಲಕ ಅವುಗಳನ್ನು "ಶಾಸ್ತ್ರ" ಎಂದು ಕರೆದನು. ಹೀಗೆ 2 ತಿಮೊಥೆ 3:16ರಲ್ಲಿನ "ಗ್ರಂಥಗಳು" ಎಂದರೆ ಹಳೆಯ ಮತ್ತು ಹೊಸ ಎರಡೂ ಒಡಂಬಡಿಕೆಗಳು ಎಂದರ್ಥವಾಗಿದೆ.

ಆತ್ಮೀಕ ಬೆಳವಣಿಗೆಯು ಒಂದು ಕ್ರಮೇಣವಾಗಿ ನಡೆಯುವ ಪ್ರಕ್ರಿಯೆಯಾಗಿರುತ್ತದೆ. ನಾವು ದಿನದಿಂದ ದಿನಕ್ಕೆ ಬೆಳೆವಣಿಗೆಯ ಪ್ರಮಾಣವನ್ನು ಗ್ರಹಿಸದಿದ್ದಲ್ಲಿ ನಿರಾಶಗೊಳ್ಳಬಾರದು, ಆದರೆ ನಾವು ಪರಿಪಕ್ವತೆಯ ಕಡೆಗೆ ಸಾಗುತ್ತಾ ಹೋಗುವ ವೇಳೆ ಶಾಸ್ತ್ರಗಳ ಅಧ್ಯಯನವನ್ನು ಮುಂದುವರೆಸಬೇಕು.

### ನಮ್ಮ "ಪ್ರಥಮ ಬೋಧನೆ" (6:1, 2)

ಅತ್ಯಂತ ಮೂಲಭೂತವಾದ ಸತ್ಯವೇನೆಂದರೆ ಯೇಸು ಕ್ರಿಸ್ತನು ದೇವಕುಮಾರನು ಎಂಬದೆ (ಮತ್ತಾಯ 3:17; 16:13-17; ನೋಡಿರಿ 1 ಕೊರಿಂಥ 3:11). ನಂಬಿಕೆಯ ಈ ಸರಳವಾದ ಒಪ್ಪಿಕೊಳ್ಳುವಿಕೆಯು ನಾವು ನಂಬುವಂತಹ ಬೇರೆ ಎಲ್ಲದಕ್ಕಾಗಿಯೂ ನಿಲ್ಲುತ್ತದೆ. ಒಬ್ಬನು ಇದನ್ನು ಅಂಗೀಕರಿಸಿಕೊಳ್ಳುವದಾದರೆ, ಕ್ರಿಸ್ತನಿಂದ ಮತ್ತು ಅಪೊಸ್ತಲರಿಂದ ಬಂದವುಗಳೆಂದು ಹೊಸ ಒಡಂಬಡಿಕೆಯು ಕಲಿಸುವ ಎಲ್ಲವನ್ನೂ ಅಂಗೀಕರಿಸಿಕೊಳ್ಳುವದಕ್ಕೆ ಆತನು ಸಿದ್ಧನೆಂದಾಗುತ್ತದೆ. ನಮಗೆ ಸತ್ಯವನ್ನು ತಲುಪಿಸಬೇಕೆಂದು ಕ್ರಿಸ್ತನು ಅವರಿಗೆ ಶಕ್ತಿಯನ್ನು ನೀಡಿದನು (ಯೋಹಾನ 16:12, 13) ಮತ್ತು ತಾನು ಮಾಡುತ್ತೇನೆಂದು ಸೂಚ್ಯಾರ್ಥವಾಗಿ ಹೇಳಿದ ರೀತಿಯಲ್ಲಿಯೇ ಪವಿತ್ರಾತ್ಮನ ಪ್ರಕಟನೆಯನ್ನು ದೈವನಿಯಾಮಕದಂತೆ ಕಾಪಾಡಿದನು (ಮತ್ತಾಯ 24:35). ನಮಗೆ ಪ್ರೇರಿತ ಪ್ರವಾದಿಗಳು, ಅಪೊಸ್ತಲರು, ಮತ್ತು ಇತರರ ಮೂಲಕ ಕೊಡಲ್ಪಟ್ಟ ಪ್ರಕಟನೆಯ ಕಾರಣದಿಂದ ನಾವು ಯೇಸುವಿನಲ್ಲಿ ನಂಬಿಕೆಯನ್ನಿಟ್ಟಿದ್ದೇವೆ. ಅವರು ಬರೆದ ಎಲ್ಲವನ್ನೂ ಅಂಗೀಕರಿಸಿಕೊಳ್ಳದೆಯೇ ನಾವು ಯೇಸುವಿನಲ್ಲಿ ನಂಬಿಕೆಯನ್ನಿಡುವದಕ್ಕೆ ಸಾಧ್ಯವಿಲ್ಲ. ಆತನ "ಮಾತುಗಳನ್ನು" ಜಾಣನು ಅನುಸರಿಸುವನೆಂದು ಯೇಸು ಹೇಳಿದನು (ಮತ್ತಾಯ 7:24, 25). ಖಂಡಿತವಾಗಿಯೂ, ಆತನಿಗೆ ತನ್ನ ಮಾತುಗಳು ಹೇಗೆ ಎಲ್ಲೆಡೆಯೂ ಇರುವಂತ ಜನರಿಗೆ ಪ್ರಸರಿಸಲ್ಪಡುತ್ತವೆಂಬುದು ಗೊತ್ತಿತ್ತು ಎಂದಾಗುತ್ತದೆ. ಹೀಗೆ "ಒಳ್ಳೇ ಪ್ರತಿಜ್ಞೆ"ಯು (1 ತಿಮೊಥೆ 6:12), ಅದರ ಎಲ್ಲಾ ಸೂಚ್ಯಾರ್ಥಗಳೊಂದಿಗೆ, ಸ್ಪಷ್ಟವಾಗಿ ನಮ್ಮ ನಂಬಿಕೆಯ ಬುನಾದಿ ಆಗಿರುತ್ತದೆ.

**ಹಸ್ತಾರ್ಪಣ (6:2)**

ಅಪೊಸ್ತಲರ ಕೃತ್ಯಗಳಲ್ಲಿ ಹಸ್ತಾರ್ಪಣವು "ಆತ್ಮೀಕ ವರಗಳನ್ನು" ಬೇರೆಯವರಿಗೆ ಹಸ್ತಾಂತರಿಸುವದರೊಂದರಿಗೆ ಸಂಬಂಧ ಹೊಂದಿರುತ್ತದೆ, ಅದು ವ್ಯತ್ಯಾಸವಿಲ್ಲದೆ ಒಂದು ಅಸ್ವಾಭಾವಿ ಶಕ್ತಿ ಎಂದರ್ಥವಾಗಿದೆ. ಏಳು ಜನರ ಮೇಲೆ ಅಪೊಸ್ತಲರು ತಮ್ಮ ಹಸ್ತಗಳನ್ನಿಟ್ಟ ತಕ್ಷಣದಲ್ಲಿ (ಅಪೊಸ್ತಲರ ಕೃತ್ಯಗಳು 6), ಸ್ತೇಫನ ಹಾಗೂ ಫಿಲಿಪ್ಪ ಇಬ್ಬರೂ ಅದ್ಭುತಗಳನ್ನು ಮಾಡುವದಕ್ಕೆ ಶಕ್ತರಾದರು (ಅಪೊಸ್ತಲರ ಕೃತ್ಯಗಳು 6:6, 8; 8:4-8, 12, 13). ಆಧುನಿಕ ಸಮಯಗಳಲ್ಲಿ "ಆತ್ಮೀಕ ವರಗಳ" ಯೋಚನೆಯು ಹಿಗ್ಗಿಸಲ್ಪಟ್ಟಿದೆ ಮತ್ತು ವಿಶೇಷ ಅದ್ಭುತಕರ ಶಕ್ತಿಗಳು ಎಂಬದನ್ನು (1 ಕೊರಿಂಥ 12:4-11ರಲ್ಲಿ ಬಣ್ಣಿಸಲ್ಪಟ್ಟಿರುವ ಪ್ರಕಾರ) ಸಾರಹೀನಗೊಳಿಸಿ, ಒಬ್ಬನಿಗೆ ಹಣವನ್ನು ಸಂಪಾದಿಸಿ ಅದನ್ನು ಬಡವರಿಗೆ ಕೊಡುವದಕ್ಕೆ ಇರುವ ಸಾಮರ್ಥ್ಯವು ಸೇರಿದಂತೆ ಆತನಿಗಿರುವ ಯಾವದೇ ರೀತಿಯ ಪ್ರತಿಭೆ ಎಂಬ ಅರ್ಥವನ್ನು ಕೊಡುವ ರೀತಿಯಲ್ಲಿ ಬದಲಾಯಿಸಲಾಗಿರುತ್ತದೆ. ಇದು ರೋಮಾ 12:6-8ನ್ನು ಅಪಾರ್ಥಮಾಡಿಕೊಳ್ಳುವದರ ಮೇಲೆ ಆಧಾರವಾಗಿರುತ್ತದೆ. ಆ ವಿಭಾಗದಲ್ಲಿರುವ ವರಗಳ ಮೊದಲ ಭಾಗವು 1 ಕೊರಿಂಥ 12:4-11ರಲ್ಲಿರುವದನ್ನೇ ಹೋಲುವಂಥದ್ದಾಗಿದೆ, ಪ್ರವಾದನೆ, ಸೇವೆ ಮಾಡುವದು, ಉಪದೇಶ, ಮತ್ತು ಬುದ್ಧಿಹೇಳುವಿಕೆ ಎಂದು ಪಟ್ಟಿ ಮಾಡುತ್ತದೆ. ಇದು 1 ಕೊರಿಂಥ 12 ಮತ್ತು ಎಫೆಸ 4:11ರಲ್ಲಿ ಹೆಸರಿಸಲಾಗಿರುವ ವರಗಳೊಂದಿಗೆ ಸಾಮರಸ್ಯದಲ್ಲಿರುತ್ತದೆ. ಅಪೊಸ್ತಲರು, ಪ್ರವಾದಿಗಳು (ದೇವರ ಚಿತ್ತದ ಕುರಿತು ಮಾತಾಡುವವರು), ಸುವಾರ್ತಿಕರು, ಸಭಾಪಾಲಕರು (ಕುರುಬರು/ಹಿರಿಯರು), ಮತ್ತು ಉಪದೇಶಕರು ತಮ್ಮ ಪವಿತ್ರಾತ್ಮನಿಂದ ಮಾರ್ಗದರ್ಶಿಸಲ್ಪಡುವ ಕೆಲವನ್ನು ನಿರ್ವಹಿಸುವದಕ್ಕೆ ಶಕ್ತಗೊಳಿಸಲ್ಪಡುವಂತೆ ವಿಶೇಷ ವರಗಳನ್ನು ಹೊಂದಿಕೊಂಡರು.

ರೋಮಾ 12ರಲ್ಲಿನ ಪಟ್ಟಿಯಲ್ಲಿ, "ಪ್ರವಾದಿಸುವದು" ಬಳಿಕ "ಸೇವೆ ಮಾಡುವದು" (διακονία, *diakonia*) ಬರುತ್ತದೆ. ಈ ಪದದ ಒಂದು ರೂಪವು ಅಪೊಸ್ತಲರ ಕೃತ್ಯಗಳು 6:2ರಲ್ಲಿನ ಏಳು ಮಂದಿಗೆ ಅನ್ವಯಿಸಲ್ಪಟ್ಟಿರುತ್ತದೆ. ಆ ಏಳು ಜನರು ತಮ್ಮ ಮೇಲೆ ಅಪೊಸ್ತಲರು ಕೈಗಳನ್ನಿಟ್ಟ ಬಳಿಕ ಅಂಥ ಶಕ್ತಿಗಳನ್ನು ಪಡೆದುಕೊಂಡರು. ರೋಮಾ 12ರ ವಿಷಯದಲ್ಲಿ, ಗ್ರೀಕ್ ವಾಕ್ಯದಲ್ಲಿ "ದಾರಾಳತನದಿಂದ ಕೊಡುವಾತನು" ಎಂಬ ಮಾತುಗಳೊಂದಿಗೆ ಪದರಚನೆಯಲ್ಲಿ ಒಂದು ಬದಲಾವಣೆಯಿರುತ್ತದೆಂದು Moses Lard ಗಮನಕ್ಕೆ ತರುತ್ತಾನೆ (12:8):

> *Eite* ["ಆಗಲಿ"] ನಾನು ತೆಗೆದುಕೊಳ್ಳುವಂಥದು, ಆಕಸ್ಮೀಕವಾಗಿಯಲ್ಲ, ಆದರೆ ಈ ಉಪವಾಕ್ಯಕ್ಕೆ ಮುಂಚೆ ರಚಿತವಾಗಿ ಕೈಬಿಡಲ್ಪಟ್ಟಿದೆ. ಆದು ಮುಂಚೆ ನಿಂತಿತ್ತು, ಮತ್ತು ಈ ಮುಂಚಿನ ನಾಲ್ಕು ಉಪವಾಕ್ಯಗಳನ್ನು ಒಂದಾಗಿ ಜೋಡಿಸಿತ್ತು; ಮತ್ತು ಅವುಗಳಲ್ಲಿ ಪ್ರತಿಯೊಂದು ಯಾವದೋ ಒಂದು ವಿಶೇಷ ವರವನ್ನು ಸೂಚಿಸಿತ್ತು. ಆದರೆ ಈ ನಾಲ್ಕು ಉಪವಾಕ್ಯಗಳನ್ನು ದಾಟಿ, ವಿಶೇಷ ವರಗಳು ವಿಸ್ತರಿಸುವದಿಲ್ಲ. ಐದನೆಯ ಉಪವಾಕ್ಯದೊಂದಿಗೆ, [ಲೇಖಕನು] ವಿಶೇಷ ಶಕ್ತಿಯ ಅಗತ್ಯವಿಲ್ಲದ ಬೇರೆ ಕರ್ತವ್ಯಗಳ ಕುರಿತು ಬರೆಯಲಾರಂಭಿಸುತ್ತಾನೆ; ಮತ್ತು ಆ ಕಾರಣದಿಂದ *eite*ನ್ನು ಕೈ ಬಿಡಲ್ಪಡುತ್ತದೆ.[47]

ಇದು ಶಾಸ್ತ್ರಗಳ ಭಾವಾನುವಾದದ ಆವೃತ್ತಿಗಳನ್ನು ಮಾತ್ರವೇ ಓದುವದರ ಅಪಾಯವನ್ನು ಸೂಚಿಸುತ್ತದೆ, ಅವುಗಳು ಅತ್ಯಂತ ದೊಡ್ಡ ಮಹತ್ವಪೂರ್ಣತೆಯನ್ನು ಹೊಂದಿರಬಹುದಾದ ಪದಗಳನ್ನು ಕೈ ಬಿಡುವ ಪ್ರವೃತ್ತಿ ಹೊಂದಿರುತ್ತವೆ. ಒಬ್ಬನು ರೋಮಾ 12:6ರಲ್ಲಿ ಸಾರಭೂತ ಪದವಾದ "ಆಗಲಿ" (εἴτε, *eite*) ಕಾಣಬೇಕಾದರೆ ಹಳೆಯ ASV ತರ್ಜುಮೆಯನ್ನು ಓದಬೇಕು. ರೋಮಾಪುರದವರಿಗೆ ಪತ್ರಿಕೆಯ ವಾಕ್ಯಭಾಗಗಳ ಎರಡನೆಯ ವಿಭಾಗವು ಹೆಚ್ಚು

ಸ್ವಾಭಾವಿಕವಾದ ಸಾಮರ್ಥ್ಯಗಳನ್ನು ಪ್ರಸ್ತಾಪಿಸುತ್ತದೆ, ಅವುಗಳನ್ನು ನಾವು ಈ *ಪ್ರತಿಭೆಗಳು* ಎಂದು ಕರೆಯುತ್ತೇವೆ, ಅವುಗಳ ಇತರರಿಗೆ ಸೇವೆಯನ್ನು ಮಾಡುವಂತೆ ಕ್ರೈಸ್ತರನ್ನು ಶಕ್ತರನ್ನಾಗಿರುತ್ತವೆ, ಅದರಲ್ಲಿ ಯಾವದೇ ಅದ್ಭುತಕರತೆಯು ಭಾಗಿಯಾಗಿರುವದಿಲ್ಲ. ಹಣದಿಂದ ಆಶೀರ್ವದಿಸಲ್ಪಟ್ಟವರು ಅವರಿಗೆ ದೇವರು ಕೊಟ್ಟಿರುವ "ವರ" ದ ಕಾರಣದಿಂದ ಹೆಚ್ಚು ಕೊಡಬಲ್ಲರು, ಆದರೆ ಬೈಬಲಿನ ಅರ್ಥದಲ್ಲಿ ಅದೊಂದು "ಆತ್ಮೀಕ ವರ" (πνευματικός χάρισμα, *pneumatikos charisma*; ಅಕ್ಷರಶಃ "ಆತ್ಮೀಕತೆಯ ವರ") ಆಗಿರುವದಿಲ್ಲ.

ಅಷ್ಟುಮಾತ್ರವಲ್ಲದೆ, ಪೌಲನು ರೋಮಾಪುರಕ್ಕೆ ಭೇಟಿ ಕೊಟ್ಟಿರಲಿಲ್ಲ, ಅಲ್ಲಿರುವ ಸಹೋದರರಿಗೆ ಒಂದು ಆತ್ಮೀಕ ವರವನ್ನು ಅನುಗ್ರಹಿಸುವದಕ್ಕಾಗಿ ಅಲ್ಲಿ ಹೋಗಬೇಕೆಂದು ಬಯಕೆ ಹೊಂದಿದ್ದನು (ರೋಮಾ 1:11). ಅದು ಕೇವಲ ಆತನು ಬೋಧನೆಯ ಮೂಲಕ ಕೊಡತಕ್ಕ ಒಂದು ಕಾರ್ಯ ಮಾತ್ರವೇ ಆಗಿದ್ದಲ್ಲಿ, ಆತನು ತನ್ನ ಪತ್ರಿಕೆಯನ್ನು ರೋಮಾಪುರಕ್ಕೆ ಕಳುಹಿಸಿ ಕೊಡುವ ಮೂಲಕ ಆ ಕೆಲಸವನ್ನು ಮಾಡಿರಬಹುದಿತ್ತು. ಅನೇಕರು "ಆತ್ಮೀಕ ವರಗಳ" ಕುರಿತ ಸೂಕ್ತವಾದ ಬೈಬಲ್ ಅರ್ಥವನ್ನು ಕಾಣುವದಕ್ಕೆ ವಿಫಲರಾಗುತ್ತಾರೆ ಮತ್ತು, ಅದರ ಫಲಿತವಾಗಿ, "ಆತ್ಮೀಕ ವರಗಳನ್ನು" ಹೊಂದಿದ್ದೇವೆಂದು ಹೇಳಿಕೊಳ್ಳುತ್ತಾರೆ. ಅವರಲ್ಲಿ ನಿಜವಾಗಿಯೂ ಇರುವಂಥದ್ದು ಬೆಳೆಸಿಕೊಂಡಿರುವ ಪ್ರತಿಭೆಗಳೇ ಆಗಿರುತ್ತವೆ. ಬೇರೆ ಕೆಲವರು ಅದೇ ರೀತಿಯ ತರಬೇತಿಯನ್ನು ಪಡೆದುಕೊಂಡರೆ ಅದೇ ಪ್ರತಿಭೆಗಳನ್ನು ಬಳಸಿಕೊಳ್ಳಬಲ್ಲರು.

## ನಿತ್ಯವಾದ ನ್ಯಾಯತೀರ್ಪು (6:2)

ಆಧುನಿಕ ಬೋಧನೆಯು ನಿತ್ಯವಾದ ನ್ಯಾಯತೀರ್ಪಿನ ಯೋಚನೆಯನ್ನು ನಿರ್ಲಕ್ಷಿಸುತ್ತದೆ. ಮತ್ತಾಯ 25:31-46ರಲ್ಲಿ ಬಣ್ಣಿಸಲಾಗಿರುವ ನ್ಯಾಯತೀರ್ಪಿನ ದಿನದಂದು, "ಎಲ್ಲಾ ದೇಶಗಳು" (ಅದರರ್ಥವು "ಎಲ್ಲಾ ಜನರು") ಕ್ರಿಸ್ತನ ನ್ಯಾಯಾಸನದ ಮುಂದೆ ನಿಲ್ಲುವರು. ಯೋಹಾನ 5:28, 29 ವಚನಗಳು "ಜೀವಕ್ಕಾಗಿ ಪುನರುತ್ಥಾನ" ಮತ್ತು "ತೀರ್ಪಿಗಾಗಿ ಪುನರುತ್ಥಾನ" ಆಗುವ ಕುರಿತು ಮಾತಾಡುತ್ತವೆ. ನಾವು ಯಾವ ರೀತಿಯ ಪುನರುತ್ಥಾನವನ್ನು ಅನುಭವಿಸುತ್ತೇವೆಂಬುದನ್ನು ನ್ಯಾಯತೀರ್ಪು ನಿರ್ಧರಿಸುವದು.

ನಾವು ಬರಲಿರುವ ನ್ಯಾಯತೀರ್ಪಿನ ಕುರಿತು ಬೋಧಿಸಬೇಕು. ಪೌಲನು ರೋಮಾಪುರದ ದೇಶಾಧಿಪತಿಯಾದ ಫೇಲಿಕ್ಸನ ಮುಂದೆ ಅದನ್ನು ಪರಿಣಾಮಕಾರಿಯಾಗಿ ಮಾಡಿದನು ಮತ್ತು ಆತನು ಭಯ ಪಡುವಂತೆ ಮಾಡಿದನು (ಅಪೊಸ್ತಲರ ಕೃತ್ಯಗಳು 24:25). ಇಬ್ರಿಯ 12:29 ನಮಗೆ "ನಮ್ಮ ದೇವರು ಧಹಿಸುವ ಅಗ್ನಿ" ಆಗಿದ್ದಾನೆಂದು ಹೇಳುತ್ತದೆ. 10:30, 31ರಲ್ಲಿ ಹೀಗೆ ಓದುತ್ತೇವೆ, "ಕರ್ತನು ತನ್ನ ಜನರ ನ್ಯಾಯವನ್ನು ವಿಚಾರಿಸುವನು . . . ಜೀವಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿಬೀಳುವದು ಭಯಂಕರವಾದದ್ದು." ದೇವರ ಶಾಸ್ತ್ರಗಳು ಬರಲಿರುವ ನ್ಯಾಯತೀರ್ಪಿನ ಕುರಿತ ಎಚ್ಚರಿಕೆಗಳಿಂದ ತುಂಬಿರುತ್ತದೆ: ಮತ್ತಾಯ 12:41, 42; ಯೋಹಾನ 12:48; ಅಪೊಸ್ತಲರ ಕೃತ್ಯಗಳು 17:30, 31; ರೋಮಾ 2:4, 5; 14:10-12; 2 ಕೊರಿಂಥ 5:10; ಇಬ್ರಿಯ 9:27; ಮತ್ತು ಪ್ರಕಟನೆ 20:11-15 ಓದಿರಿ.

## "ದೇವರ ಚಿತ್ತವಾದರೆ" (6:3)

ದೇವರ ವಾಕ್ಯವಿಲ್ಲದೆಯೇ ದೇವರ ಪವಿತ್ರಾತ್ಮನು ನಮ್ಮನ್ನು ಆತ್ಮೀಕ ಪರಿಪೂರ್ಣತೆಯ ಕಡೆಗೆ ಸೆಳೆಯುವನೆಂದು ಕೆಲವರು ಹೇಳಿಕೊಳ್ಳುತ್ತಾರೆ. ಇದು ಸತ್ಯವಾಗಿದ್ದರೆ, ಅಧ್ಯಯನ ಮಾಡುವದಕ್ಕೆ ಅಷ್ಟೇನೂ ಅಗತ್ಯವಿರುವದಿಲ್ಲ. ಒಬ್ಬನು ಅಸಮರ್ಪಕವಾದ ಮನೋಭಾವವನ್ನು

ಹೊಂದಿದವನಾಗಿದ್ದು ತನ್ನನ್ನು ಒಂದು ಪ್ರಶ್ನೆಯಲ್ಲಿ ಸರಿಯೆಂದು ಸಾಭಿತುಪಡಿಸಿಕೊಳ್ಳಲು ಶಾಸ್ತ್ರಗಳನ್ನು ಅಧ್ಯಯನ ಮಾಡಬಹುದು, ಆದರೆ ಒಂದು ಹಂಬಲದ ಮನಸ್ಸಿನಿಂದ ವಾಕ್ಯದ ಕಡೆಗೆ ನಿರಂತರವಾಗಿ ತಿರುಗಿಕೊಳ್ಳುವವನು ದೇವರು ಆತನ ವಿಷಯದಲ್ಲಿ ಇಚ್ಛಿಸುವ ಪ್ರಕಾರ ಹೆಚ್ಚೆಚ್ಚಾಗಿ ಮಾರ್ಪಡುತ್ತಾ ಹೋಗುವನು (2 ಕೊರಿಂಥ 3:18; ನೋಡಿರಿ ಯಾಕೋಬ 1:23-25). ದೇವರ ವಾಕ್ಯವು ತನ್ನ ಉದ್ದೇಶಿತ ಪರಿಣಾಮವನ್ನು ಬೀರಬೇಕೆಂದರೆ ನಾವು ಅದನ್ನು ನಿರಂತರವಾಗಿ ಅಧ್ಯಯನ ಮಾಡಬೇಕು.

ಆತ್ಮೀಕ ಬೆಳವಣಿಗೆಯು ಒಂದು ಅದ್ಭುತವಲ್ಲ, ಆದರೆ ಅದೊಂದು ಸ್ವಾಭಾವಿಕವಾದ ಪ್ರಕ್ರಿಯೆಯಾಗಿದೆ. ಕೆಲವರು ನೂತನ ಜೀವನ ಸೇರಿದಂತೆ ಎಲ್ಲವನ್ನೂ ಒಂದು ಅದ್ಭುತವಾಗಿಸುವದಕ್ಕೆ ಪ್ರಯತ್ನಿಸುತ್ತಾರೆ. ಅದು "ಆಶ್ಚರ್ಯ" ಪಡುವ ವಿಚಾರವೇನಲ್ಲ ಎಂದು ಯೇಸು ಹೇಳಿದನು (ಯೋಹಾನ 3:7). ಅದ್ಭುತಗಳು ವಿಸ್ಮಯ ಅಥವಾ ಆಶ್ಚರ್ಯವನ್ನು ಹುಟ್ಟಿಸುವದಕ್ಕೆ ರಚಿಸಲ್ಪಟ್ಟವುಗಳು. ನೂತನ ಜನನವು ಒಂದು ಅದ್ಭುತವಾಗಿದ್ದರೆ, ಅದು ಒಂದು ದಿನ ಒಂದು ರೀತಿಯಲ್ಲಿ ಮತ್ತು ಮತ್ತೊಂದು ದಿನ ಬೇರೆಯಾದ ರೀತಿಯಲ್ಲಿ ಸಂಭವಿಸುತ್ತಿತ್ತು. ಅದಕ್ಕೆ ತದ್ವಿರುದ್ಧವಾಗಿ, ಅದು ಯಾವಾಗಲೂ ಸುವಾರ್ತೆಯ ಮೂಲಕವೇ ಸಂಭವಿಸುತ್ತದೆ (1 ಕೊರಿಂಥ 4:15; ಯಾಕೋಬ 1:18; 1 ಪೇತ್ರ 1:22, 23). ಆಧುನಿಕ ವಿಜ್ಞಾನದ ಹಸ್ತಕ್ಷೇಪವಿಲ್ಲದಿದ್ದರೆ ಸ್ವಾಭಾವಿಕವಾದ ಜನನವು ಅದೇ ಸ್ಥಿರವಾದ ವಿಧಾನದ ಮೂಲಕ ಉಂಟಾಗುತ್ತದೆ. ಗರ್ಭಧಾರಣೆ ಮತ್ತು ಜನ್ಮ ನೀಡುವಿಕೆಯು ನಮಗೆ ಆಶ್ಚರ್ಯವನ್ನು ತರಬಹುದು, ಆದರೆ ಹೆರಿಗೆ ದಿನವನ್ನು ಮುಂತಿಳಿಸಲು ಸಾಧ್ಯವಿರುತ್ತದೆ ಹಾಗೂ ಅದು ಅದ್ಭುತಕರವಲ್ಲ. ಅದು ದೈವಿಕ ಮೂಲದಿಂದ ಬಂದದ್ದು ಮತ್ತು ದೈವಿಕ ನಿಯಮದ ಪ್ರಕಾರ ನಡೆಯುತ್ತದೆ. ಅದೇ ರೀತಿ ನೂತನ ಜನನವು ಸಹ ಆಗಿದೆ (ಯೋಹಾನ 3:7, 8). ಅದು ದೇವರ ವಾಕ್ಯದ ಮೂಲಕ ಪವಿತ್ರಾತ್ಮನು ("ಬಿರುಗಾಳಿ" ಎಂಬದಕ್ಕಿಂತ ಮೇಲಾದ ಅನುವಾದ) ತನ್ನ ಶಕ್ತಿಯನ್ನು ಊದುವಾಗ ಸಂಭವಿಸುತ್ತದೆ ಮತ್ತು ಕ್ರಿಸ್ತನಲ್ಲಿ ಒಬ್ಬ ನೂತನ ವ್ಯಕ್ತಿಯಾಗುವದರಲ್ಲಿ ಫಲಿತಗೊಳ್ಳುವಂಥ ಹೃದಯದ ಹಾಗೂ ಜೀವನದ ಬದಲಾವಣೆಯನ್ನು ತರುತ್ತಾನೆ.

"ದೇವರ ಚಿತ್ತವಾದರೆ" ಎಂಬುದು ಹೊಸ ಒಡಂಬಡಿಕೆಯ ಲೇಖಕರಿಗೆ ಭವಿಷ್ಯದಲ್ಲಿ ಏನಾಗುವದೆಂಬುದನ್ನಾಗಲಿ ದೇವರು ಒಂದು ನಿರ್ದಿಷ್ಟವಾದ ಘಟನೆಯಲ್ಲಿ ಯಾವಾಗ ಕಾರ್ಯಮಾಡುತ್ತಿದ್ದನೆಂಬುದನ್ನಾಗಲಿ ಯಾವಾಗಲೂ ತಿಳಿದಿರಲಿಲ್ಲ ಎಂಬುದನ್ನು ಪರೋಕ್ಷವಾಗಿ ಸೂಚಿಸುತ್ತದೆ. "ಈಗ ಸದ್ಯ ದೇವರು ಸಭೆಯನ್ನು ಆಶೀರ್ವದಿಸುತ್ತಿದ್ದಾ ನೆಂದು ನಾನು ಬಲ್ಲೆನು" ಎಂದು ಹೇಳಿಕೊಳ್ಳುವಂಥದ್ದು ಸರಿಯಾಗಿರಬಹುದಾದ ಅಥವಾ ಇಲ್ಲದೆ ಇರಬಹುದಾದ ಸಂಗತಿಯೊಂದರ ಬಗ್ಗೆ ಹೆಚ್ಚಳ ಪಟ್ಟುಕೊಂಡಂತಾಗುವದು. ಸಭೆಯ ಬೆಳವಣಿಗೆಯು ಯಾವಾಗಲೂ ಒಳ್ಳೇದು ಎಂದು ನಾವು ಯೋಚಿಸುತ್ತೇವೆ, ಆದರೆ ಅನೇಕರು ದೋಷಪೂರಿತ ಬೋಧನೆಯಲ್ಲಿ ಬೆಳೆಯಬಲ್ಲರು. ಕೆಲವು ಸಂಗತಿಗಳು ಸೈತಾನನ ಚಿತ್ತವಾಗಿರುತ್ತವೆ (ಲೂಕ 13:16; 1 ಥೆಸಲೋನಿಕ 2:18) ಹೊರತು ದೇವರ ಚಿತ್ತವಲ್ಲ. ದೇವರು ಏನನ್ನು ಸಂಭವಿಸುವಂತೆ ಅನುಮತಿಸುತ್ತಾನೋ ಅದು ಆತನಿಂದ ಅಧಿಕಾರ ಹೊಂದಿ ಬಂದದ್ದಾಗಿರಬೇಕೆಂಬ ಅವಶ್ಯವಿಲ್ಲ.

ಒನೇಸಿಮನು ಫಿಲೆಮೋನನ ಬಳಿಗೆ ಹಿಂದಿರುಗಬೇಕೋ ಎಂಬ ವಿಚಾರದಲ್ಲಿ ಪೌಲನು ಖಚಿತತೆಯನ್ನು ಹೊಂದಿರಲಿಲ್ಲ (ಫಿಲೆಮೋನ 15). ಆತನು ಹೀಗೆ ಹೇಳಿದನು, "ಅವನು ಸ್ವಲ್ಪಕಾಲ ನಿನ್ನಿಂದ ಅಗಲಿಸಲ್ಪಟ್ಟುದ್ದು ನಿರಂತರೂ ನಿನ್ನವನಾಗಬೇಕೆಂಬ ದಕ್ಕೋಸ್ಕರವೋ ಏನೋ." ದೈವಿಕ ಪ್ರಕಟಣೆಗಳನ್ನು ಮತ್ತು ಅಂತರ್ದೃಷ್ಟಿಗಳನ್ನು ಹೊಂದಿದವನಾಗಿದ್ದ ಪೌಲನು ಒಂದು ಘಟನೆಯು ದೇವರ ಅನುಗ್ರಹದ ಕ್ರಿಯೆಯ ಒಂದು ಭಾಗವೋ ಅಲ್ಲವೋ ಎಂಬುದನ್ನು

ಯಾವಾಗಲೂ ತಿಳಿದವನಾಗಿರಲಿಲ್ಲ. "ಕರ್ತನ ಚಿತ್ತವಾದರೆ" ಎಂದು ಹೇಳುವದರಿಂದ ನಮಗೆ ಪ್ರಯೋಜನವಾಗುತ್ತದೆ, ಆದರೆ "ಇದು ಕರ್ತನ ಆಶೀರ್ವಾದವೆಂದು ನಾನು ಬಲ್ಲೆನು" ಎಂದು ಹೇಳುವದರಿಂದ ಪ್ರಯೋಜನವಾ ಗುವದಿಲ್ಲ. ಮೊದಲನೆಯದ್ದು ವಿಶ್ವಾಸವನ್ನು ತೋರಿಸಿದರೆ, ಎರಡನೆಯದ್ದು ತಿಳಿಯದ ವಿಚಾರಗಳಲ್ಲಿ ಗರ್ವ ಮತ್ತು ಕಲ್ಪನೆಗಳನ್ನು ತೋರಿಸುತ್ತದೆ.

ಈ ಮಾತನ್ನು ಬಳಸುವದು ಕೇವಲ ಒಂದು ಭಕ್ತಿವೈರಾಗ್ಯದ ಹಳಸಲು ನುಡಿಯಷ್ಟೆ ಅಲ್ಲ, ಆದರೆ ಹೊಸ ಒಡಂಬಡಿಕೆಯ ಕ್ರೈಸ್ತರ ನುಡಿಗಳಲ್ಲಿ ಪ್ರತಿಬಿಂಬಿಸಲ್ಪಡುತ್ತಿದ್ದ ನಂಬಿಕೆಯ ಒಂದು ಪ್ರಾಮಾಣಿಕ ಅಂಶವಾಗಿತ್ತು. ಮನುಷ್ಯರ ವ್ಯವಹಾರಗಳ ಮೇಲೆ ದೇವರು ಆಳ್ವಿಕೆ ಮಾಡುತ್ತಾನೆಂಬುದನ್ನು ಅವರು ಒಪ್ಪಿಕೊಳ್ಳುವವರಾಗಿದ್ದರು. ಈ ಮನವರಿಕೆ ಮತ್ತು ದೇವರ ಆಧಿಪತ್ಯದ ಅನುಗ್ರಹದಲ್ಲಿ ನಂಬಿಕೆಯಿಲ್ಲದೆ, ನಾವು ಒಬ್ಬ ಅತ್ಯಂಥ ವೈಯಕ್ತಿ ದೇವರಲ್ಲಿ ಒಂದು ಬಲಹೀನವಾದ ವೈಯಕ್ತಿಕ ನಂಬಿಕೆಯನ್ನು ಇಟ್ಟವರಾಗಿದ್ದೇವೆ. ಯಾಕೋಬ 4:13-16 ವಚನಗಳು ತಾತ್ಕಾಲಿಕ ಸ್ವಭಾವದ ಜೀವಿತವನ್ನು ನಾವು ಹೇಗೆ ಕಾಣಬೇಕೆಂಬುದನ್ನು ತೋರಿಸಿ ಕೊಡುತ್ತದೆ:

> ಈ ಹೊತ್ತು ಇಲ್ಲವೆ ನಾಳೆ ಇಂಥ ಪಟ್ಟಣಕ್ಕೆ ಹೋಗಿ ಅಲ್ಲಿ ಒಂದು ವರುಷವಿದ್ದು ವ್ಯಾಪಾರವನ್ನು ಮಾಡಿ ಲಾಭವನ್ನು ಸಂಪಾದಿಸುತ್ತೇವೆ ಅನ್ನುವವರೇ, ಕೇಳಿರಿ. ನಾಳೆ ಏನಾಗುವದೋ ನಿಮಗೆ ತಿಳಿಯದು. ನಿಮ್ಮ ಜೀವಮಾನವು ಎಂಥದು? ನೀವು ಸ್ವಲ್ಪ ಹೊತ್ತು ಕಾಣಿಸಿಕೊಂಡು ಆ ಮೇಲೆ ಕಾಣದೆ ಹೋಗುವ ಹಬೆಯಂತಿರುತ್ತೀರಿ. ಆದದರಿಂದ ನೀವು ಅಂಥ ಮಾತನ್ನು ಬಿಟ್ಟು ದೇವರ ಚಿತ್ತವಾದರೆ ನಾವು ಬದುಕಿ ಈ ಕೆಲಸವನ್ನಾಗಲಿ ಆ ಕೆಲಸವನ್ನಾಗಲಿ ಮಾಡುವೆವು ಎಂದು ಹೇಳಬೇಕು. ಹೀಗೆ ಹೇಳದೆ ನೀವು ಅಹಂಭಾವದಿಂದ ಹೊಗಳಿಕೊಳ್ಳುತ್ತೀರಿ. ಅಂಥ ಹೊಗಳಿಕೆಯೆಲ್ಲಾ ಕೆಟ್ಟದ್ದೇ.

## ಜ್ಞಾನಪ್ರಕಾಶ ಮತ್ತು ದೀಕ್ಷಾಸ್ನಾನ (6:4)

ಎರಡನೆಯ ಶತಮಾನದ ಸಭೆಯ ಪಿತೃಗಳು ದೀಕ್ಷಾಸ್ನಾನದ ಕ್ಷಣವನ್ನು "ಜ್ಞಾನಪ್ರಕಾಶ" ಸಮಯವೆಂದು ಏಕೆ ಕರೆದರು? ಅದು ಒಬ್ಬನು ಕ್ರಿಸ್ತನನ್ನು ಪ್ರವೇಶಿಸಿ "ಬೆಳಕಿನಲ್ಲಿ ನಡೆಯುವದಕ್ಕೆ" ಆರಂಭಿಸುವ (1 ಯೋಹಾನ 1:7) ಹಂತವಾಗಿರುತ್ತದೆಂಬು ದನ್ನು ಅವರು ಗುರುತಿಸಿದರೋ? ನಿಶ್ಚಯವಾಗಿಯೂ, ಹಾಗೆಯೇ ಆಗಿತ್ತು. ಬಹುಪಾಲು ಆಧುನಿಕ ದೈವಶಾಸ್ತ್ರಜ್ಞರ ರೀತಿಯಲ್ಲಿಯೇ, ಅವರು ಈ ಕ್ರಿಯೆಯು ಒಬ್ಬನನ್ನು "ಕ್ರಿಸ್ತನಲ್ಲಿ ಸೇರಿಸುತ್ತದೆ" (ರೋಮಾ 6:3; ಗಲಾತ್ಯ 3:26, 27) ಮತ್ತು ಹೊಸ ಕ್ರೈಸ್ತನು ಬೆಳಕಿನಲ್ಲಿ ಮುಂದುವರೆಯಬೇಕು ಎಂಬುದನ್ನು ಕಂಡರು. ಈ ಹಂತದಲ್ಲಿ, ಒಬ್ಬನು ಸತ್ಯಕ್ಕೆ ವಿಧೇಯನಾಗಿರುತ್ತಾನೆ ಮತ್ತು ಹೆಚ್ಚಿನ ಜ್ಞಾನದ ಕಡೆಗೆ ತನ್ನ ಪ್ರಯಾಣವನ್ನು ಆರಂಭಿಸುತ್ತಾನೆ. ಅಲ್ಲದೆ ಈ ಹಂತದಲ್ಲಿಯೇ ಒಬ್ಬನು "ಅಂಧಕಾರದ ಧೊರೆತನದಿಂದ ಬಿಡಿಸಲ್ಪಟ್ಟು ಆತನ ಕುಮಾರನ ರಾಜ್ಯದಲ್ಲಿ ಸೇರಿಸಲ್ಪಡುತ್ತಾನೆ" (ಕೊಲೊಸ್ಸೆ 1:13).

"ಬೆಳಕು" ಜ್ಞಾನ ಮತ್ತು ತಿಳುವಳಿಕೆಯ ಸಂಕೇತವಾದರೆ, "ಅಂಧಕಾರದಲ್ಲಿ" ಇರುವದು ಪಾಪ ಮತ್ತು ಅಜ್ಞಾನದಲ್ಲಿರುವದನ್ನು ಸಂಕೇತಿಸುತ್ತದೆ. ಕ್ರೈಸ್ತರು "ಬೆಳಕಿನ ಮಕ್ಕಳು" ಮತ್ತು "ಕತ್ತಲೆಯಲ್ಲಿರುವವರಲ್ಲ" (1 ಥೆಸಲೋನಿಕ 5:4, 5). ವಿಷಯವು ಹಾಗಿರುವಾಗ, ಕ್ರಿಸ್ತನಲ್ಲಿರುವವನು ಅಪಾಯಗಳಿಗೆ ಎಚ್ಚರಿಕೆಯಿಂದಿರಬೇಕು (ವ. 6).

## ಪರಲೋಕದಿಂದಾದ ದಾನ (6:4)

ರೋಮಾ 6:23 ಹೀಗೆ ಹೇಳುತ್ತದೆ, "ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ

ಯೇಸುವಿನಲ್ಲಿರುವ ನಿತ್ಯಜೀವ." ಈ ಅಮೂಲ್ಯವಾದ ವರವು ಒಂದು ಸಕ್ರಿಯವಾದ ನಂಬಿಕೆಯ ಫಲವಾಗಿ ಬರುವದಾಗಿದೆ. ಒಬ್ಬನು ಈ ವರವನ್ನು ನಂಬಿಕೆಯ ಹಂತದಲ್ಲಿ ಈಗಾಗಲೆ ಹೊಂದಿರುತ್ತಾನೆಂದಲ್ಲ, ನಂಬಿಕೆಯ ಮೂಲಕವೇ ಇದನ್ನು ಹೊಂದಿಕೊಳ್ಳು ತ್ತಾನೆಂದು ಯೋಹಾನನು ಘೋಷಿಸುತ್ತಾನೆ (ಯೋಹಾನ 1:11, 12). ಈ ವರವು ನಂಬಿಕೆಯಿಡುವವರಿಗಾಗಿ ಇರುತ್ತದೆ: "ಯಾರಾರು ಆತನನ್ನು ಅಂಗೀಕರಿಸಿದರೋ, ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು." "ಆಗುವ ಅಧಿಕಾರ" ಎಂಬುದರ ಅರ್ಥವು "ಈಗಾಗಲೆ ಇರುತ್ತದೆ" ಎಂದರ್ಥವಲ್ಲ. ಒಬ್ಬ ಪ್ರಯಾಣಿಕನು ವಿಮಾನಯಾನದ ಟಿಕೆಟನ್ನು ಖರೀದಿಸಿದಾಗ, ಆತನಿಗೆ ವಿಮಾನ ನಿಲ್ದಾಣಕ್ಕೆ ಹೋಗುವ, ವಿಮಾನವನ್ನು ಏರುವ, ಮತ್ತು ಆತನ ಸ್ಥಳಕ್ಕೆ ವಿಮಾನಯಾನ ಮಾಡುವ ಅಧಿಕಾರ ಇರುತ್ತದೆ. ಹೇಗೂ, ಟಿಕೆಟನ್ನು ಹೊಂದಿರುವದೆಂದರೆ ಆತನು ಈಗಾಗಲೆ ತನ್ನ ಸ್ಥಳಕ್ಕೆ ಬಂದು ಸೇರಿದ್ದಾನೆಂದು ಅರ್ಥವಲ್ಲ. ನಂಬಿಕೆಯು ನಮ್ಮ ಟಿಕೆಟ ಆಗಿದೆ, ಆದರೆ ನಾವು ಪರಲೋಕವನ್ನು ತಲುಪಬೇಕಾದರೆ ಅದನ್ನು ಪೋಷಿಸಬೇಕು ಮತ್ತು ಕಾಪಾಡಿಕೊಂಡು ಹೋಗಬೇಕು.

**ಎಂದಿಗೂ ಪಶ್ಚಾತ್ತಾಪಕ್ಕೆ ಹಿಂದಿರುಗದಿರುವದು (6:6)**

ದೇವರು ನಮ್ಮನ್ನು ಸ್ವತಂತ್ರರಾದ ನೈತಿಕ ಪ್ರತಿನಿಧಿಗಳಾಗಿ ಉಂಟು ಮಾಡಿದಾಗ, ಆತನು ನಮಗೆ ಕ್ರಿಸ್ತನನ್ನು ಹಿಂಬಾಲಿಸುವ ಅಥವಾ ಆತನಿಂದ ವಿಮುಖರಾಗುವ ಆಯ್ಕೆಯನ್ನು ನಮಗೆ ಕೊಟ್ಟನು. ಇಬ್ರಿಯ 6:6ನೇ ವಚನವು ನಮ್ಮ ಆಯ್ಕೆಯಲ್ಲಿ ನಿಲ್ಲುವಂತೆ ದೇವರು ಅನುಮತಿಸುತ್ತಾನೆಂಬುದನ್ನು ತೋರಿಸುತ್ತದೆ. ಒಬ್ಬನು ಕ್ರಿಸ್ತನಲ್ಲಿರುವ ತನ್ನ ವೈಯಕ್ತಿಕ ನಂಬಿಕೆಯನ್ನು ಶಿಲುಬೆಗೇರಿಸಬಹುದು ಮತ್ತು ಆ ಮೂಲಕ ಆತನಲ್ಲಿರುವ ಸಕಲ ನಿರೀಕ್ಷೆಯನ್ನು ಕಳಕೊಳ್ಳಬಹುದು. ವಾಕ್ಯಭಾಗವು ಪರಿವರ್ತನೆಗೊಂಡವನು, ಕುರಿಮರಿಯ ರಕ್ತದಿಂದ ರಕ್ಷಿಸಲ್ಪಟ್ಟ, ಮತ್ತು ಹೀಗೆ ತಪ್ಪಿ ಹೋಗುವದಕ್ಕೆ ಏನೋ ಒಂದನ್ನು ಹೊಂದಿದವನ ಕುರಿತು ಮಾತಾಡುತ್ತಿದೆ.

ಒಬ್ಬ ವ್ಯಕ್ತಿಯು ಯಾವದಾದರೊಂದು ರೋಗದ ಚಿಕ್ಕ ಒಂದಿಷ್ಟು ಪ್ರಮಾಣದ ಔಷಧ ತೆಗೆದುಕೊಳ್ಳುವದರ ಮೂಲಕ ಆ ರೋಗಕ್ಕೆ ನಿರೋಧಕತೆಯನ್ನು ಹೊಂದಿಕೊಳ್ಳಬಲ್ಲನು. ಅದೇ ರೀತಿಯೇ, ಒಬ್ಬ ವ್ಯಕ್ತಿಯು ಒಂದಿಷ್ಟು ಪ್ರಮಾಣದ ಕ್ರೈಸ್ತ ನಂಬಿಕೆಯನ್ನು ಅನುಭವಿಸಬಹುದು, ಪುನಃ ಲೋಕದ ಕಡೆಗೆ ತಿರುಗಿಕೊಳ್ಳಬಹುದು, ಮತ್ತು ಆ ಮೂಲಕ ಕ್ರಿಸ್ತನ ಪ್ರಯೋಜನಗಳಿಗೆ ಸೂಕ್ಷ್ಮತೆಯಿಲ್ಲದವನಾಗಬಹುದು. ಒಬ್ಬನು ಪಶ್ಚಾತ್ತಾಪ ಪಟ್ಟು ಬಳಿಕ ಬಿದ್ದು ಹೋಗಬಹುದು, ಆದರೆ ಅನಂತರದಲ್ಲಿ ದೇವರ ಕಡೆಗೆ ತಿರುಗಿಕೊಳ್ಳಬಹುದು; ಅಲ್ಲದೆ ಆತನು ತನ್ನ ನಂಬಿಕೆಯನ್ನು ಕಳೆದುಕೊಂಡು ಅದನ್ನು ಪುನಃಶ್ಚೇತನ ಪಡಿಸಿಕೊಳ್ಳಲು ಅಶಕ್ತನಾಗಬಹುದು. ಒಬ್ಬ ವ್ಯಕ್ತಿಯು ಒಂದು ಕಾಲದಲ್ಲಿ ತನಗೆ ಅದ್ಭುತಕರವೆಂದು ಎಣಿಸಿಕೊಂಡಿದ್ದ ಆಶೀರ್ವಾದಗಳಿಗಾಗಿರುವ ಸ್ವಾದವನ್ನು ಕಳಕೊಂಡಾಗ, ಆತನು ಅದನ್ನು ಎಂದಿಗೂ ಪುನಃ ಗಳಿಸಿಕೊಳ್ಳಲಾರನು. ಆ ಹಂತವು ಯಾವಾಗ ತಲುಪಲ್ಪಡುತ್ತದೆ ಎಂಬುದು ಬಹುಶಃ ದೇವರೊಬ್ಬನಿಗೆ ಗೊತ್ತು; ಅದರೆ ಕೆಲವು ವ್ಯಕ್ತಿಗಳಿಗೆ ತಾವು ಪಶ್ಚಾತ್ತಾಪ ಪಡುವ ಹಂತವನ್ನು ದಾಟಿ ಹೋಗಿದ್ದೇವೆಂಬುದನ್ನು ಬಲ್ಲವರಾಗಿರುತ್ತಾರೆಂದು ನಾನು ನಂಬುತ್ತೇನೆ. "ಇದು ಪವಿತ್ರಾತ್ಮನ ವಿರುದ್ಧದ ಪಾಪವೆಂದು ಕರೆಯಲ್ಪಟ್ಟಿದ್ದು ಸರಿಯಾಗಿಯೇ ಇರುತ್ತದೆ . . ."[48] ಒಬ್ಬನು ತಾನು ಪಾಪವನ್ನು ಮಾಡಿದ್ದೇನೆಂದು ಹೆದರುವದಾದರೆ, ಆತನು ಹಾಗೆ ಮಾಡಿಲ್ಲ ಎಂಬುದಕ್ಕೆ ಆತನ ಕಳಕಳಿಯು ಸ್ಪಷ್ಟವಾಗಿ ತೋರುತ್ತದೆ ಎಂದು ಹೇಳುವದನ್ನು ನಾವು ಕೇಳಿದ್ದೇವೆ. ಅಂಥ ಭಯವನ್ನು ಒಬ್ಬನು ಅಡಗಿಸಿ

ಬಿಡುವದಕ್ಕೆ ನೋಡುತ್ತಾನೋ ಅಂಥವನು ರಕ್ಷಣೆಯನ್ನುಂಟು ಮಾಡುವ ವಿಧೇಯತೆಗೆ ಮತ್ತು ಭರವಸಕ್ಕೆ ನಡಿಸುವ ಪಶ್ಚಾತ್ತಾಪಕ್ಕೆ ಎಂದಿಗೂ ಬರಲಾರನು.

## ನಾಲ್ಕು ಅಸಾಧ್ಯತೆಗಳು (6:6)

ಇಬ್ರಿಯರಿಗೆ ಪತ್ರಿಕೆಯಲ್ಲಿ ನಾಲ್ಕು "ಅಸಾಧ್ಯತೆಗಳು" ಕೊಡಲ್ಪಟ್ಟಿವೆ. ಮೊದಲನೆಯದ್ದು 6ನೇ ವಚನದಲ್ಲಿರುವಂಥದು. ಒಬ್ಬನು "ಭ್ರಷ್ಟನಾದಾಗ," ಆತನನ್ನು ಪಶ್ಚಾತ್ತಾಪ ಪಡುವಂತೆ ನವೀಕರಿಸುವದು ಅಸಾಧ್ಯವೆಂದು ದೇವರು ಹೇಳುತ್ತಾನೆ. ಇನ್ನೊಂದು ಅಸಾಧ್ಯತೆಯೆಂದರೆ ದೇವರು ಸುಳ್ಳಾಡುವದು ಸಾಧ್ಯವಿಲ್ಲ ಎಂಬದೆ (6:18). ಮೂರನೆಯ ಅಸಾಧ್ಯತೆಯು ಹೋತಗಳ ಮತ್ತು ಹೋರಿಗಳ ರಕ್ತವು ಪಾಪವನ್ನು ನಿವಾರಿಸಲಾರದು ಎಂಬದೆ (10:4). ಕಡೇ "ಅಸಾಧ್ಯತೆ" ಯೆಂದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದಕ್ಕೆ ಪ್ರಯತ್ನಿಸುವದು (11:6).

## ನಮ್ಮ ರಕ್ಷಣೆಯ ಉದ್ದೇಶ (6:6)

ನಮ್ಮನ್ನು ಕೇವಲ ಪರಲೋಕಕ್ಕೆ ಕರೆದೊಯ್ಯುವದಕ್ಕೋಸ್ಕರ ಯೇಸು ನಮ್ಮನ್ನು ರಕ್ಷಿಸಿದನೋ? ಹಾಗಿದ್ದರೆ, ನಾವು ಏಕೆ ಈಗಾಗಲೆ ಅಲ್ಲಿರುವದಿಲ್ಲ? ಇಲ್ಲ, ನಾವು ಆತ್ಮೀಕವಾಗಿ ಪರಿಪಕ್ವತೆಯುಳ್ಳವರಾಗಿ ಬೆಳೆದು ಬೇರೆಯವರಿಗೆ ರಕ್ಷಣೆ ಹೊಂದುವಂತೆ ಸಹಾಯ ಮಾಡಬೇಕೆಂದು ಆತನು ನಮ್ಮನ್ನು ರಕ್ಷಿಸಿದನು. ನಾವು ದೇವರಿಗೆ ಭಯ ಪಡುವವರಾಗಿ ಪರಿಶುದ್ಧತೆಯನ್ನು ಪರಿಪೂರ್ಣಗೊಳಿಸಿಕೊಳ್ಳುವದಕ್ಕೆ ಪ್ರಯಾಸ ಪಡಬೇಕು (2 ಕೊರಿಂಥ 7:1). ನಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳಬೇಕೆಂದು ಪೌಲನು ನಮ್ಮನ್ನು ಬೇಡಿಕೊಂಡನು (ಫಿಲಿಪ್ಪಿ 2:12). ನಾವು ಬೆಳೆಯಬೇಕು ಮತ್ತು ಪರಿಪಕ್ವಗೊಳ್ಳಬೇಕು ಎಂದು ನಮ್ಮ ಕರ್ತನು ನಮ್ಮನ್ನು ಸ್ವತಂತ್ರಗೊಳಿಸಿದ್ದಾನೆ, ಹೊರತು ಕ್ರಿಸ್ತನಲ್ಲಿ ಎಳೆಗೂಸುಗಳಾಗಿ ಉಳಿಯುವದಕ್ಕಾಗಿ ಅಲ್ಲ. ನಮ್ಮ ತಲೆಯಲ್ಲಿನ ಕೂದಲುಗಳನ್ನು ಎಣಿಸುವದಕ್ಕೆ ಶಕ್ತನಾಗಿರುವ ದೇವರು (ಮತ್ತಾಯ 10:30) ಈ ದಿಕ್ಕಿನಲ್ಲಿ ನಾವು ಎಷ್ಟು ಪ್ರಗತಿ ಹೊಂದಿದ್ದೇವೆಂಬುದನ್ನು ಖಂಡಿತವಾಗಿಯೂ ಬಲ್ಲವನಾಗಿದ್ದಾನೆ. ನಾವು ಆತನನ್ನು ಏನನ್ನಾದರೂ ಕೇಳುವದಕ್ಕೆ ಮುಂಚೆಯೇ ಆತನಿಗೆ ನಮ್ಮ ಅತ್ಯಂಥ ಆಳವಾದ ಅಗತ್ಯತೆಗಳು ಗೊತ್ತಿವೆ, ನಮ್ಮ ಸಂತೋಷಗಳು ಮತ್ತು ನಮ್ಮ ದುಃಖಗಳು, ಮತ್ತು ನಮ್ಮ ಬಯಕೆಗಳು ಗೊತ್ತಿವೆ.

## ಫಲ ಕೊಡುವವರಾಗಿರುವದು (6:7, 8)

ಬಿತ್ತುವವನ ಸಾಮ್ಯದಲ್ಲಿ, ಕೆಲವರು ಸ್ವಲ್ಪ ಕಾಲ ಮಾತ್ರವೇ "ನಂಬಿಕೆ" ಯಿಡುವವರಾಗಿ ಬಳಿಕ "ಭ್ರಷ್ಟರಾಗುವರು" ಎಂಬದಾಗಿ ಯೇಸು ತನ್ನ ಶ್ರೋತೃಗಳಿಗೆ ಎಚ್ಚರಿಸುತ್ತಾನೆ (ಲೂಕ 8:5–15). ಮುಕ್ತಾಯದಲ್ಲಿ, ಆತನು ಹೀಗೆ ಬುದ್ಧಿ ಹೇಳುತ್ತಾನೆ, "ಆದದರಿಂದ ನೀವು ಹೇಗೆ ಕಿವಿಗೊಡಬೇಕೋ ನೋಡಿಕೊಳ್ಳಿರಿ" (ಲೂಕ 8:18). ಪ್ರತಿಯೊಬ್ಬ ವ್ಯಕ್ತಿಯು ತಾನು ಹೇಗೆ ವಾಕ್ಯವನ್ನು ಕೇಳಿಸಿಕೊಳ್ಳುತ್ತಾನೆ, ಅಥವಾ "ಬೀಜವನ್ನು ಸ್ವೀಕರಿಕೊಳ್ಳುವನು" ಎಂಬುದಕ್ಕೆ ತಾನೇ ಜವಾಬ್ದಾರನಾಗಿದ್ದಾನೆ. ನಾವು ಪ್ರಕಟಗೊಂಡ ವಾಕ್ಯದಲ್ಲಿನ ಪ್ರತಿಯೊಂದು ಯೋಚನೆಗೆ ಜಾಗರೂಕತೆಯಿಂದ ಗಮನವನ್ನು ಕೊಡಬೇಕು ಮತ್ತು ಅದಕ್ಕೆ ಒಪ್ಪಿಸಿಕೊಳ್ಳಬೇಕು. ಅರ್ಥಮಾಡಿಕೊಳ್ಳುವದಕ್ಕೆ ಮತ್ತು ವಿಧೇಯರಾಗುವದಕ್ಕೆ ಸಾಮರ್ಥ್ಯವನ್ನು ಹೊಂದಿರುವದು ಕೇಳುವವನ ಮೇಲೆ ಬಹು ದೊಡ್ಡ ಜವಾಬ್ದಾರಿಯನ್ನು ಇಡುತ್ತದೆ (ಮತ್ತಾಯ 13:23). ನಮಗೆ "ಪವಿತ್ರಾತ್ಮನ ಫಲ" ವನ್ನು ಉಂಟು ಮಾಡುವ ಇಲ್ಲವೆ "ಶರೀರಭಾವದ ಕರ್ಮಗಳನ್ನು" ಉಂಟು ಮಾಡುವ ಆಯ್ಕೆಯು ಇರುತ್ತದೆ (ಗಲಾತ್ಯ 5:19–23). ದೇವರ ವಾಕ್ಯವನ್ನು ಗ್ರಹಿಸಿಕೊಂಡು

ಅದನ್ನು ನಮ್ಮ ಹೃದಯಗಳಿಗೆ ಅನ್ವಯಿಸಿಕೊಳ್ಳುವದು ಎರಡನೆಯದ್ದಕ್ಕಿಂತಲೂ ಮೊಲದಲನೆಯದ್ದನ್ನು ಉಂಟು ಮಾಡುವ ದಾಗಿದೆ. ಆಗ ನಾವು ದೇವರ ನಿಜವಾದ ಆಶೀರ್ವಾದಗಳನ್ನು ಪಡೆದುಕೊಳ್ಳುವೆವು. ಲೂಕ 8:15 ಹೀಗೆ ಹೇಳುತ್ತದೆ, "ಮತ್ತೆ ಕೆಲವರು ವಾಕ್ಯವನ್ನು ಕೇಳಿ ಸುಗುಣವುಳ್ಳ ಒಳ್ಳೆಯ ಹೃದಯದಲ್ಲಿ ಇಟ್ಟುಕೊಂಡು ತಾಳ್ಮೆಯಿಂದ ಫಲವನ್ನು ಕೊಡುತ್ತಾರೆ; ಇವರೇ ಬೀಜ ಬಿದ್ದ ಒಳ್ಳೆಯ ನೆಲವಾಗಿರುವವರು." ಪ್ರತಿಯೊಬ್ಬ ದೇವಮನುಷ್ಯನು "ತನ್ನನ್ನು ಕರೆದದ್ದನ್ನು ದೃಢಪಡಿಸಿಕೊಳ್ಳುವದಕ್ಕೆ ಮತ್ತಷ್ಟು ಪ್ರಯಾಸಪಡಬೇಕು" (2 ಪೇತ್ರ 1:10; KJV).

## ಸಹೋದರರನ್ನು ಪ್ರಶಂಸೆ ಮಾಡುವದು (6:9)

ಜೊತೆಯ ಕ್ರೈಸ್ತರು, ವಿಶೇಷವಾಗಿ ಬೋಧಕರು ಒಬ್ಬರನ್ನೊಬ್ಬರು ಪ್ರೋತ್ಸಾಹಿಸುವ ಅಗತ್ಯವಿರುತ್ತದೆ. ನಾವು ಜನರನ್ನು ದೂಷಿಸಬಾರದು, ಮತ್ತು ನಮ್ಮ ಸಹೋದರರು ನಮಗೆ ಗೊತ್ತಿರುವದಕ್ಕಿಂತಲೂ ಅಧಿಕವಾಗಿ ಕರ್ತನನ್ನು ಮೆಚ್ಚಿಸಬೇಕೆಂದು ಕಠಿಣವಾಗಿ ಪರಿಶ್ರಮ ಪಡುತ್ತಿರಬಹುದಾಗಿದೆ. ನಾವು ಹೆಚ್ಚು ಪ್ರೋತ್ಸಾಹ ಮತ್ತು ಸಾಂತ್ವನ ಹೇಳುವದಕ್ಕೆ ಪ್ರಯತ್ನಿಸುವದಾದರೆ, ಅದು ನಮ್ಮೆಲ್ಲರನ್ನು ಬಾರ್ನಬರನ್ನಾಗಿ ಮಾಡುವದು (ಅಪೊಸ್ತಲರ ಕೃತ್ಯಗಳು 4:36). ಸಭೆಯಲ್ಲಿ ಇಂಥಹ ಹೆಚ್ಚು ಜನರ ಅಗತ್ಯತೆಯು ಇರುತ್ತದೆ! ನಾವು ಕ್ರಿಸ್ತನಲ್ಲಿ ನಮ್ಮ ಸಹೋದರರು ಹಾಗೂ ಸಹೋದರಿಯರ ನಿಜವಾದ ಒಳ್ಳೇತನದಲ್ಲಿ ನಂಬಿಕೆಯಿಡಬೇಕು. ನಾವು ಅವರನ್ನು ಗೌರವಿಸುತ್ತೇವೆ ಮತ್ತು ಪ್ರಶಂಸಿಸುತ್ತೇವೆಂಬುದನ್ನು ಅವರಿಗೆ ತಿಳಿಯಪಡಿಸಬೇಕು. ಲೇಖಕನಿಗೆ ಮಾನವ ಮನಸ್ಸಿನ ಮನೋಶಾಸ್ತ್ರವು ಗೊತ್ತಿದ್ದದರಿಂದ ಆತನು ವಾಚಕರನ್ನು ತನ್ನ ವಾಚಕರನ್ನು ಪ್ರೋತ್ಸಾಹಿಸಿದನು. ನಮಗೆ ಭಾರವನ್ನುಂಟು ಮಾಡಿಕೊಳ್ಳುವದಕ್ಕೆ ಸಾಕಷ್ಟು ಇರುತ್ತದೆ. ಗದರಿಸುವದು ಅವಶ್ಯಕ, ಆದರೆ ನಮ್ಮ ಬೋಧನೆಯಲ್ಲಿ ಸಮತೋಲನ ಪಡಿಸಿಕೊಳ್ಳೋಣ. ನಾವು ಬಹುವಾಗಿ ನಕಾರಾತ್ಮಕತೆವುಳ್ಳವರಾಗಿ ಬೇರೆಯವರಲ್ಲಿ ಒಳ್ಳೇದು ಇರುವದೆಂಬ ಪ್ರಜ್ಞೆಯನ್ನು ಕಳಕೊಳ್ಳುವದಾದರೆ, ಅವರು ನಮ್ಮಲ್ಲಿರುವ ಯಾವದೇ ಒಳ್ಳೇತನದ ಪ್ರಜ್ಞೆಯನ್ನು ಕಳೆದುಕೊಳ್ಳುವರು. ಸಮತೋಲನವು ಇಬ್ರಿಯರಿಗೆ ಪತ್ರಿಕೆಯಲ್ಲಿ ಮಾತ್ರವೇ ಕಂಡು ಬರುವದಿಲ್ಲ, ಆದರೆ ಬೈಬಲಿನ ಎಲ್ಲಾ ಪುಸ್ತಕಗಳಲ್ಲೂ ಸ್ಪಷ್ಟವಾಗಿರುತ್ತದೆ.

## "ರಕ್ಷಣೆಯ ಜೊತೆಯಾಗಿ ಬರುವ ಸಂಗತಿಗಳು" (6:9, 10)

ನಮ್ಮ ರಕ್ಷಣೆಯ ಜೊತೆಯಾಗಿ ಅನೇಕ ಅದ್ಭುತವಾದ ಸಂಗತಿಗಳು ಬರುತ್ತವೆ. ವಾಸ್ತವದಲ್ಲಿ ಕೆಲವು ಪ್ರಾಥಮಿಕ ರಕ್ಷಣೆಯ ಭಾಗವಾಗಿರುವದಿಲ್ಲ, ಆದರೆ ಅವುಗಳು ಅದರ ಜೊತೆಯಲ್ಲಿ ಸಾಗುವ ಆಕಸ್ಮಿಕ ಶೋಧನೆಯಿಂದ ಸಿಕ್ಕುವಂತವುಗಳು, ಅಥವಾ ಅಂಚುಗಳಲ್ಲಿ ಸಿಕ್ಕುವ ಪ್ರಯೋಜನಗಳಾಗಿರುತ್ತವೆ. ನಮ್ಮ ಹೆಸರುಗಳು ಪರಲೋಕದಲ್ಲಿ ನೊಂದಣಿಯಾಗುವಾಗ ನಮಗೆ ಸಿಕ್ಕುವ ಕೆಲವೊಂದು ಪ್ರಯೋಜನಗಳಾವವು (12:23)?

ಬೇರೆಯವರ ಸೇವೆ ಮಾಡುವ ಅವಕಾಶ ಮತ್ತು ಜೀವನದಲ್ಲಿ ನಮಗೊಂದು ಉದ್ದೇಶವಿರುತ್ತದೆಂಬುದನ್ನು ಗ್ರಹಿಸಿಕೊಳ್ಳುವದು ರಾಜ್ಯದಲ್ಲಿ ದೇವರ ಸೇವೆಯನ್ನು ಮಾಡುವದರ ಸ್ವಾಭಾವಿಕವಾದ ಫಲಿತವಾಗಿರುತ್ತದೆ. ನಾವು ಬೇರೆಯವರಿಗೆ ಸಹಾಯ ವನ್ನು ಮಾಡುವಾಗ, ನಾವು ನಮ್ಮಲ್ಲಿಯೇ ಗಮನವನ್ನು ಹರಿಸುವದರ ಕಡೆಯಿಂದ ದೂರವಾಗಿ ಯೇಸುವಿನ ಮಹಿಮೆಯುಳ್ಳ ಆತ್ಮನೊಳಗೆ ಸಾಗುತ್ತೇವೆ. ಇದು ಪ್ರತಿಯಾಗಿ, ನಮ್ಮನ್ನು

ಸಂತೃಪ್ತಿಯ ನೂತನ ಎತ್ತರಗಳಿಗೆ ಹೊತ್ತೊಯ್ಯಬಲ್ಲದು. ನಮ್ಮ ರಕ್ಷಣೆಯು ಒಳ್ಳೇ ಕಾರ್ಯಗಳಲ್ಲಿ ವಿಸ್ತರಿಸತಕ್ಕದ್ದು, ಯಾಕೆಂದರೆ ಅದೇ ಕಾರಣಕ್ಕಾಗಿಯೇ ನಾವು "ಕ್ರಿಸ್ತ ಯೇಸುವಿನಲ್ಲಿ ಸೃಷ್ಟಿಸಲ್ಪಟ್ಟಿದ್ದೇವೆ" (ಎಫೆಸ 2:10). ಲೋಕದವರು ತಮ್ಮ ಕೃತ್ಯಗಳಲ್ಲಿ ಮತ್ತು ಕ್ರಿಯೆಗಳಲ್ಲಿ ಉದ್ದೇಶದ ಕೊರತೆಯನ್ನು ಹೊಂದಿರುತ್ತಾರೆ, ಅವರ ನಿರೀಕ್ಷೆರಹಿತ ಪರಿಸ್ಥಿತಿಯನ್ನು ಸುಧಾರಿಸುವದಕ್ಕೆ ಏನನ್ನೂ ಮಾಡುವದಕ್ಕೆ ಸಾಧ್ಯವಿಲ್ಲ ಎಂದು ಯೋಚಿಸುತ್ತಾರೆ. ಬೇರೆಯವರಿಗೆ ಸಹಾಯ ಮಾಡುವದು ನಮ್ಮ ವೈಯಕ್ತಿಕ ಪ್ರಯೋಜನಕ್ಕೆ ನಡಿಸುವದು.

ನಾವು ಕರ್ತನ ರಕ್ಷಣೆಯ ಕೊಡುಗೆಯನ್ನು ವಿಧೇಯತೆಯುಳ್ಳ ನಂಬಿಕೆಯ ಮೂಲಕ ಅಂಗೀಕರಿಸಿಕೊಳ್ಳುವಾಗ (ಇಬ್ರಿಯ 5:8, 9), ನಾವು ಆತನಿಂದ ಎಷ್ಟು ಪ್ರೀತಿಸಲ್ಪಟ್ಟಿದ್ದೇವೆಂಬುದನ್ನು ಅರಿತುಕೊಳ್ಳುವೆವು, ತತ್ಪರಿಣಾಮವಾಗಿ, ನಾವು ಬೇರೆಯವರನ್ನು ಎಷ್ಟು ಪ್ರೀತಿಸತಕ್ಕದ್ದೆಂಬುದನ್ನು ಅರಿತುಕೊಳ್ಳುತ್ತೇವೆ (1 ಯೋಹಾನ 4:19). ಈ ಪ್ರೀತಿಯನ್ನು ನಾವು ಹೆಚ್ಚೆಚ್ಚು ಹಂಚಿಕೊಂಡ ಹಾಗೆ, ನಾವು ಹೆಚ್ಚೆಚ್ಚು ಪ್ರೀತಿಯನ್ನು ಪಡೆದುಕೊಳ್ಳುವೆವು (ಅಪೊಸ್ತಲರ ಕೃತ್ಯಗಳು 20:35). ನಾವು ಎಷ್ಟು ಸ್ವೀಕರಿಸಿಕೊಳ್ಳುತ್ತೇವೋ ಅದಕ್ಕಿಂತ ಹೆಚ್ಚಾಗಿ ಕೊಡುವದಕ್ಕೆ ಸಾಧ್ಯವಿಲ್ಲ, ಯಾಕೆಂದರೆ ದಾರಾಳವಾಗಿ ಕೊಡುವವರು ದಾರಾಳವಾಗಿ ಆಶೀರ್ವದಿಸಲ್ಪಡುತ್ತಾರೆ (2 ಕೊರಿಂಥ 9:6-11). ಇದು ನೀತಿವಂತರು ಪುನಃ ಪುನಃ ಕಲಿತುಕೊಳ್ಳುವ ಪಾಠವಾಗಿರುತ್ತದೆ.

ದೇವರು ನಮ್ಮನ್ನು ಜ್ಞಾಪಕದಲ್ಲಿಟ್ಟುಕೊಂಡಿರುತ್ತಾನೆಂಬುದು ಅನುದಿನವೂ ಧ್ಯಾನಿಸುವದಕ್ಕೆ ಯೋಗ್ಯವಾದ ಯೋಚನೆಯಾಗಿರುತ್ತದೆ (ವ. 10). ಎಲ್ಲಕ್ಕಿಂತ ಮೇಲಾಗಿ, ಆತನು ನ್ಯಾಯವಂತನು ಮತ್ತು ನಾವು ತೋರಿಸಿರುವ ದಯೆಯನ್ನು ಜಾಗರೂಕತೆಯಿಂದ ಪರಿಗಣಿಸುತ್ತಾನೆ. ನಾವು ಆತನ ಸೇವೆಯಲ್ಲಿ ಮಾಡುವ ಕಾರ್ಯಗಳನ್ನು ದೇವರು ಮರೆಯುವದಕ್ಕೆ ಸಾಧ್ಯವಿಲ್ಲ ಯಾಕೆಂದರೆ ಅವುಗಳು ಆತನಿಗೆ ಮಾಡಿದ ಕಾರ್ಯಗಳಾಗಿವೆ! ಯೇಸು ಈ ಸತ್ಯವನ್ನು ನ್ಯಾಯತೀರ್ಪಿಗೆ ಒಂದು ತಳಹದಿಯೆಂದು ಘೋಷಿಸಿದನು: ನಾವು ಕಷ್ಟದಲ್ಲಿರುವ ಒಬ್ಬ ಸಹೋದರನಿಗೆ ಸಹಾಯವನ್ನು ಮಾಡುವಾಗ ವಾಸ್ತವದಲ್ಲಿ ನಾವು ಯೇಸುವಿಗೆ ಸಹಾಯ ಮಾಡಿದವರಾಗುತ್ತೇವೆ (ಮತ್ತಾಯ 25:40). ಕ್ರಿಸ್ತನಲ್ಲಿ ಬಾಧೆ ಪಡುವ ಸಹೋದರನಿಗೆ ನಾವು ಸಹಾಯವನ್ನು ಮಾಡಿದರೆ ಆತನು ನಮಗೆ "ಕ್ರಿಸ್ತನು" ಆಗುತ್ತಾನೆ. ನಾವು "ಬಡವನಿಗೆ ಸಹಾಯ ಮಾಡುವ ಮೂಲಕ ಕ್ರಿಸ್ತನಾಗಿದ್ದೇನೆ" ಎಂದು ಯೋಚಿಸಿಕೊಳ್ಳಬಾರದು; ಬದಲಾಗಿ, ಇದನ್ನು ಅರ್ಥಮಾಡಿಕೊಳ್ಳತಕ್ಕದ್ದು, ಏನೆಂದರೆ "ಕಷ್ಟದಲ್ಲಿರುವ ವ್ಯಕ್ತಿಯು ನನ್ನ ಕರ್ತನಿಗೆ ಸೇವೆ ಮಾಡುವಂತೆ ಸದವಕಾಶವನ್ನು ನನಗೆ ಕೊಡುವ ಮೂಲಕ ಆತನು ನನಗೆ ಕ್ರಿಸ್ತನಾದನು."

ನಮ್ಮ ಕೃತ್ಯಗಳನ್ನು ನಿರ್ಲಕ್ಷಿಸಲಾಗುತ್ತಿದೆ ಎಂಬದಾಗಿ ನಾವು ಎಂದಿಗೂ ನಿರಾಶೆಗೊಳ್ಳಬಾರದು. ದೇವರು ಮರೆತು ಬಿಡುವದಿಲ್ಲ! "ನಾನು ಮಾಡುವದನ್ನು ಯಾವನೂ ಲಕ್ಷಿಸುವದಿಲ್ಲ. ನನ್ನ ಸೇವೆಯೆಲ್ಲಾ ನಿಷ್ಫಲವಾದದ್ದು" ಎಂದು ನಾವು ಯೋಚಿಸಬಾರದು. ನಾವು ಎಲ್ಲರಿಂದಲೂ ನಿರ್ಲಕ್ಷಕ್ಕೊಳಗಾಗಿದ್ದೇವೆಂದು ಯೋಚಿಸುವದು ದೇವರನ್ನು ಕುರಿತು ಮರೆತು ಹೋಗುವ ರೀತಿಲ್ಲಿರುತ್ತದೆ!

**"ಎಂದಿಗೂ ಬಿಟ್ಟು ಬಿಡದಿರಿ!" (6:11, 12)**

ಬೇರೆಯವರ ಸೇವೆಯನ್ನು ಮಾಡುವ ಮೂಲಕ (6:9, 10), ನಾವು ನಂಬಿಕೆಯಲ್ಲಿ ಬೆಳೆಯುವದನ್ನು ಮುಂದುವರೆಯುತ್ತೇವೆ ಮತ್ತು "ನಿರೀಕ್ಷೆಯ ಪೂರ್ಣ ನಿಶ್ಚಯತೆಯನ್ನು"

ಸಾಧಿಸಿಕೊಳ್ಳುತ್ತೇವೆ (ವ. 11). ಈ ವಚನಗಳು ಕೃಪೆಯಲ್ಲಿ ಬೆಳೆದು ಆ ಮೂಲಕ ದಾರಾಳವಾದ ಪ್ರತಿಫಲದೊಂದಿಗೆ ಖಚಿತವಾದ ರಕ್ಷಣೆಯನ್ನು ಹೊಂದಿಕೊಳ್ಳಿರಿ ಎಂದು ಪೇತ್ರನು ನೀಡಿದ ಬುದ್ಧಿವಾದವನ್ನು ಜ್ಞಾಪಿಸುತ್ತವೆ (2 ಪೇತ್ರ 1:5-11). ನಾವು ನಂಬಿಕೆಯ ಅಸ್ತಿವಾರದ ಮೇಲೆ ಕಟ್ಟುತ್ತಿರುವ ವೇಳೆ ಈ ಖಚಿತತೆಯನ್ನು ಬೆಳೆಸಿಕೊಳ್ಳುವದಕ್ಕೆ ಏಳು ಹೆಜ್ಜೆಗಳನ್ನು ಪೇತ್ರನು ಹೆಸರಿಸುತ್ತಾನೆ: ಸದ್ಗುಣ, ಜ್ಞಾನ, ದಮೆ, ತಾಳ್ಮೆ, ಭಕ್ತಿ, ಸಹೋದರಸ್ನೇಹ, ಮತ್ತು ಪ್ರೀತಿ. ನಾವು ಈ ಸುಗುಣಗಳಲ್ಲಿ ಬೆಳೆಯುವಾಗ, ನಾವು ಫಲಭರಿತರಾಗುವೆವು. ಆಗ ನಾವು ನಮ್ಮ "ಕರೆ" ಬಗ್ಗೆ ಮತ್ತು ನಮಗೆ ದಾರಾಳವಾಗಿ ಒದಗಿಸಲ್ಪಟ್ಟಿರುವ ನಿತ್ಯವಾದ ರಾಜ್ಯದೊಳಗೆ ಪ್ರವೇಶಿಸುವಿಕೆಯ ಕುರಿತು ನಿಶ್ಚಯತೆಯನ್ನು ಹೊಂದಿರಬಲ್ಲೆವು (2 ಪೇತ್ರ 1:8, 10, 11). ನಾವು ಎಡವುವದಾದರೆ ಮತ್ತು ಪಶ್ಚಾತ್ತಾಪದ ಅಗತ್ಯವಿರುವದಾದರೆ, ನಾವು ನಮ್ಮ ಮೊದಲ ಪ್ರೀತಿಯ ಕೃತ್ಯಗಳಿಗೆ ಹಿಂದಿರುಗಬೇಕು (ಪ್ರಕಟನೆ 2:5).

William Barclayನು 11 ಮತ್ತು 12 ವಚನಗಳನ್ನು ಈ ಕೆಳಗಿನಂತೆ ಭಾವಾನುವಾದಗೊಳಿಸುತ್ತಾನೆ:

> ನಿಮ್ಮಲ್ಲಿ ಪ್ರತಿಯೊಬ್ಬರು ಅದೇ ಆಸಕ್ತಿಯನ್ನು ತೋರಿಸುವಿರೆಂದು ಮತ್ತು ಕಡೇ ತನಕವೂ ಹಾಗೆ ಮಾಡುವದನ್ನು ಮುಂದುವರೆಸುವಿರೆಂದು ನಾವು ನಮ್ಮ ಪೂರ್ಣ ಹೃದಯಗಳಿಂದ ನಿರೀಕ್ಷಿಸುತ್ತೇವೆ, ಹೀಗೆ ನೀವು ಸೋಮಾರಿತನದಿಂದ ಮಂಪರಿನಲ್ಲಿರದವರು, ಆದರೆ ನಂಬಿಕೆ ಮತ್ತು ತಾಳ್ಮೆಯಿಂದ ವಾಗ್ದಾನಗಳನ್ನು ಬಾಧ್ಯವಾಗಿ ಹೊಂದಿಕೊಳ್ಳುವವರನ್ನು ಅನುಕರಣ ಮಾಡುವವರಾಗುವಿರಿ.[49]

ಆರಾಧನೆಯು ನಿರುತ್ಸಾಹದಿಂದ ಕೂಡಿರುವಂತೆ ತೋರುವಾಗ, ಪ್ರಸಂಗವು ಸ್ಪೂರ್ತಿಯಿಲ್ಲದ್ದಾಗಿ, ಮತ್ತು ಬೈಬಲ್ ತರಗತಿಯು ನಮ್ಮಲ್ಲಿ ರೋಮಾಂಚನವುಂಟು ಮಾಡುವಂಥದ್ದಾಗಿ ಇಲ್ಲವೆನ್ನುವಾಗ ನಾವು ಏನು ಮಾಡಬೇಕು? ನಮ್ಮನ್ನು ಕ್ರಿಸ್ತನ ಬಳಿಗೆ ನಡಿಸಿದ "ಅದೇ ಆಸಕ್ತಿಯನ್ನು ತೋರಿಸಬೇಕಾದರೆ," ನಾವು ಆರಾಧನೆಗಳಿಗೆ ಹಾಜರಾಗುವದನ್ನು ಮುಂದುವರೆಸಬೇಕು ಮತ್ತು ಸಭೆಗಾಗಿ ನಮ್ಮ ಕೆಲಸವನ್ನು ಮುಂದುವರೆಸಬೇಕು. ಕರ್ತನ ಸೇವೆಯಲ್ಲಿ ನಾವು ಸ್ಥಿರವಾಗಿರುವದಾದರೆ, ಸಂತೋಷವು ಮರಳಿ ಬರುವದು. ನಮಗಿಂತ ಮುಂಚೆ ಬೇರೆಯವರು ಈ ಕಾರ್ಯಗಳನ್ನು ಅನುಭವಿಸಿದ್ದಾರೆ.

"ಆಸಕ್ತಿ" (ಶ್ರದ್ಧೆ) ಎಂದರೆ "ಅದರಲ್ಲಿ ನೆಲೆಯಾಗಿರು" ಎಂದರ್ಥವಾಗಿದೆ ಮತ್ತು ರಾಜ್ಯದಲ್ಲಿನ ನಮ್ಮ ಸೇವೆಯಲ್ಲಿ ಎಂದಿಗೂ ಸೋಮಾರಿಗಳಾಗಿ ಬೆಳೆಯಬಾರದು ಎಂದರ್ಥವಾಗಿದೆ. ನಾವು ಮಹಿಮೆಗೆ ಹೋಗಿರುವಂತಹ ನಮಗಿಂತ ಮುಂಚಿನವರನ್ನು ಜ್ಞಾಪಿಸಿಕೊಳ್ಳಬೇಕು; ಅವರು ಮನೆಗೆ ಸೇರುವ ದಾರಿಯಲ್ಲಿ ಅರ್ಧಲ್ಲಿರುವ ವೇಳೆ ಪ್ರಯಾಣವನ್ನು ಕೈ ಬಿಟ್ಟು ಬಿಡಲಿಲ್ಲ. ಅವರು ತಾಳ್ಮೆಯಿಂದ ಮುಂದುವರೆದ ಹಾಗೆಯೇ ನಾವು ಸಹ ಮಾಡತಕ್ಕದ್ದು. ಗತಕಾಲದಲ್ಲಿ ನಂಬಿಗಸ್ತರಾಗಿದ್ದ ಎಷ್ಟೋ ಜನರ ಜೀವಿತಗಳನ್ನು ಎತ್ತಿ ತೋರಿಸುವ ಇಬ್ರಿಯ 11ರಲ್ಲಿರುವ ಉದಾಹರಣೆಗಳನ್ನು ಮರೆತು ಬಿಡಕೂಡದು. ತನ್ನ ಕಣ್ಣುಗಳನ್ನು ತೆರೆಯುವವನು ದೇವರು ತನ್ನನ್ನು ಪ್ರೀತಿಸುವವರ ಮೇಲೆ ಸುರಿಸುವ ಆಶೀರ್ವಾದಗಳ ಕುರಿತು ಅನುದಿನವೂ ಜ್ಞಾಪಿಸಲ್ಪಡುವದನ್ನು ಕಾಣುವನು. ಆತನು ನಮ್ಮ ಹಿತಕ್ಕಾಗಿ ಸದಾಕಾಲವೂ ಕಾರ್ಯಮಾಡುತ್ತಾನೆ (ರೋಮಾ 8:28). ಮಾರ್ಗದರ್ಶನ ಮತ್ತು ಸಹಾಯಕ್ಕಾಗಿ ನಿರಂತರವಾಗಿ ತನ್ನನ್ನು ದೃಷ್ಟಿಸುವವರನ್ನು ಕರ್ತನು ನಿರಾಶೆಗೊಳಿಸುವದಿಲ್ಲ. ಧರ್ಮೋಪದೇಶಕಾಂಡ 31:6ನ್ನು ಉಲ್ಲೇಖಿಸುತ್ತಾ ಇಬ್ರಿಯ 13:5ನೇ ವಚನವು ನಮಗೆ ಈ

ಭರವಸವನ್ನು ಕೊಡುತ್ತದೆ: "ನಾನು ನಿನ್ನನ್ನು ಎಂದಿಗೂ ಕೈಬಿಡುವದಿಲ್ಲ, ಎಂದಿಗೂ ತೊರೆಯುವದಿಲ್ಲ." ಇಬ್ರಿಯ 13:6ನೇ ವಚನವು ಕೀರ್ತನೆ 118:6ರಿಂದ ಉಲ್ಲೇಖಿಸಲ್ಪಟ್ಟಿರುವ ನಕಲು ಯೋಚನೆಯಾಗಿದೆ: "ಯೆಹೋವನು ನಮಗಿದ್ದಾನೆ, ಭಯಪಡೆನು, ಮನುಷ್ಯನು ನನಗೆ ಏನು ಮಾಡಾನು?" ದೇವರ ಪ್ರಸನ್ನತೆಯ ವಾಗ್ದಾನವು ಹತ್ತಿರದಲ್ಲಿ ಉಳಿಯುವವರಿಗಾಗಿ ಇರುತ್ತದೆ.

### ಒಂದು ಆಣೆ: ಎಲ್ಲಾ ವ್ಯಾಜ್ಯಗಳ ಅಂತ್ಯ (6:15, 16)

ಮಾನವರು ತಾನು ಏನು ವಾಗ್ದಾನ ಮಾಡಿದ್ದೇವೆಂಬುದನ್ನು ಮರೆತು ಬಿಡುತ್ತಾರೆ, ಆದ್ದರಿಂದ ನಮಗೆ ಸಾಕ್ಷಿಗಳು ಇರತಕ್ಕದ್ದು. ಹೇಗೂ, ಸಾಕ್ಷಿಗಳು ಮರೆತು ಹೋಗಬಹುದು, ಆದ್ದರಿಂದ ನಾವು ಕಾನೂನು ದಸ್ತಾವೇಜುಗಳನ್ನು ಹೊಂದಿರುತ್ತೇವೆ. ವಾಗ್ದಾನ ಮಾಡಲ್ಪಟ್ಟದ್ದನ್ನು ಪಡೆದುಕೊಳ್ಳುವದಕ್ಕಿರುವ ಶರತ್ತುಗಳ ವಿಷಯದಲ್ಲಿ ಯಾವ ಸಂಶಯವಿಲ್ಲದ ಹಾಗೆ ಆ ವಾಗ್ದಾನಗಳನ್ನು ಜಾಗರೂಕತೆಯಿಂದ ಬರೆಯತಕ್ಕದ್ದು. ಅರ್ಥನಿರೂಪಣೆಕಾರನು ಪ್ರಾಮಾಣಿಕನಾಗಿರಬೇಕು, ಇಲ್ಲವಾದರೆ ಸಮಸ್ಯೆಯು ಉದ್ಭವವಾಗುವದು. ಹೇಗೂ, ಆದರ್ಶಪ್ರಾಯವಾಗಿ, ಒಂದು ಆಣೆಯು ಎಲ್ಲಾ ವ್ಯಾಜ್ಯಗಳನ್ನು ನೋಡಿಕೊಳ್ಳುವದು. ಒಂದು ಕಾಲದಲ್ಲಿ, ಮನುಷ್ಯನ ಮಾತು ಆತನ ವಾಗ್ದಾನ ಪತ್ರವಾಗಿರುತ್ತಿತ್ತು, ಮತ್ತು ಆತನು ಏನೇ ಆದಾಗ್ಯೂ ಆ ಮಾತನ್ನು ಕಾಪಾಡಿಕೊಳ್ಳುತ್ತಿದ್ದನು! ಎಲ್ಲಾ ಮನುಷ್ಯರು ಗೌರವಯೋಗ್ಯರು ಹಾಗೂ ಸತ್ಯವಂತರು ಆಗಿರುತ್ತಿದ್ದರೆ, ಕ್ರಿಸ್ತನ ರಾಜ್ಯದಲ್ಲಿ ನಾವು ಹಾಗೆಯೇ ಇರತಕ್ಕದ್ದು, ಆಗ ಒಬ್ಬನ ಮಾತನ್ನು ವಿಶ್ವಾಸಿಸಬಹುದು. ಎಲ್ಲಾ ಜನರು ಒಬ್ಬರೊಂದಿಗೊಬ್ಬರು ಸತ್ಯದಿಂದ ನಡೆದುಕೊಂಡರೆ, ಇಂದು ನಾವು ಕಾಣುವ ಅನೇಕ ಕಚ್ಚಾಟಗಳು ಮತ್ತು ಸಮಸ್ಯೆಗಳು – ಸಭೆಯಲ್ಲಿಯೂ ಲೌಕಿಕ ಸಮುದಾಯದಲ್ಲಿಯೂ – ಪರಿಹರಿಸಲ್ಪಡುವವು. ಅಂಥ ಸಮಯವು ಬರಲಿಯೆಂದು ಪ್ರಾರ್ಥನೆ ಮಾಡೋಣ.

### ಆಣೆಯಿಡುವದು (6:16)

ಮತ್ತಾಯ 5:34ರಲ್ಲಿ ಯೇಸು ಎಲ್ಲಾ ವಿಧವಾದ ಆಣೆಯಿಡುವದನ್ನು ನಿಷೇಧಿಸಿದನೆಂದು ಅನೇಕರು ಭಾವಿಸಿಕೊಳ್ಳುತ್ತಾರೆ, ಆದರೆ ಈ ಅಭಿಪ್ರಾಯವು ಅತಿ ಸಂಕುಚಿತವಾಗಿರಬಹುದಾಗಿದೆ. ಯೇಸು ಸ್ವತಃ ತನ್ನ ದೈವಿಕ ಪುತ್ರತ್ವದ ಬಗ್ಗೆ ಆಣೆ ಇಟ್ಟಾಗ ಮಾತ್ರವೇ ಉತ್ತರ ನೀಡಿದನು (ಮತ್ತಾಯ 26:63, 64); ಪೌಲನು 2 ಕೊರಿಂಥ 1:23 ಮತ್ತು 11:30ರಲ್ಲಿ ತನ್ನ ಆಣೆಗೆ ಅಧೀನಪಡಿಸಿಕೊಳ್ಳುತ್ತಾನೆ. ಯಾಕೋಬನು 5:12ರಲ್ಲಿ ಅದೇ ರೀತಿಯ ಭಾಷೆಯನ್ನು ಬಳಸುತ್ತಾನೆ ಆದರೆ "*ಇನ್ನಾತರ* ಮೇಲಾಗಲಿ ಆಣೆ ಇಡಬಾರದು" ಎಂದು ಸೂಚಿಸುತ್ತಾನೆ (ಒತ್ತಿ ಹೇಳಿದ್ದು ನನ್ನದು). ಈ ಪದವು "ಬೇರೊಂದು ರೀತಿಯ ಇನ್ನೊಂದು" ಎಂಬ ಅರ್ಥವನ್ನು ಕೊಡುವ ἕτερος (*heteros*) ಎಂಬ ಪದದ ಬದಲಾಗಿ, ἄλλος (*allos*) ಎಂಬದರಿಂದ ಬಂದದ್ದಾಗಿದೆ, ಇದರರ್ಥವು "ಅದೇ ರೀತಿಯ ಇನ್ನೊಂದು" ಎಂದಾಗಿದೆ. ತಮ್ಮ ಸ್ವಂತ ಗುಂಪಿನ ಮತ್ತೊಂದು ಸದಸ್ಯನಿಗೆ ಮಾಡಿದ ಒಂದು ಆಣೆಯು ಯಾವಾಗ ಊರ್ಜಿತವಾದದ್ದು ಮತ್ತು ಯಾವಾಗ ಆಣೆಯನ್ನಿಟ್ಟ ವ್ಯಕ್ತಿಯು ತನ್ನ ಮಾತನ್ನು ಕಾಪಾಡಿಕೊಳ್ಳುವ ಅಗತ್ಯವಿಲ್ಲ ಎಂದು ತಿಳಿಯುವದಕ್ಕೆ ಫರಿಸಾಯರು ತಮ್ಮೊಳಗೆ ಒಂದು ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಿಕೊಂಡಿದ್ದರು. ತತ್ಪರಿಣಾಮವಾಗಿ ಯೇಸು ಹೀಗೆ ಹೇಳಿದನು, "ಯಾವಾಗಲೂ ಸತ್ಯವನ್ನೇ ಆಡಿರಿ, ಆಗ ಆಣೆಗಳು ಅನಾವಶ್ಯಕಗೊಳ್ಳುತ್ತವೆ." ಕ್ರೈಸ್ತರು ಎಂದಿಗೂ ಒಂದು ಆಣೆಯಿಟ್ಟು

ಪ್ರಮಾಣ ಮಾಡುವ ಅಗತ್ಯವಿಲ್ಲ ಯಾಕೆಂದರೆ ಕ್ರಿಸ್ತನ ಶಿಷ್ಯರು ಸತ್ಯವಂತರಾಗಿದ್ದಾರೆ. ಅಮೆರಿಕದಲ್ಲಿನ ನ್ಯಾಯಾಲಯಗಳು ಒಬ್ಬ ವ್ಯಕ್ತಿಯನ್ನು "ನಾನು ಪ್ರಮಾಣ ಮಾಡುತ್ತೇನೆ" ಅಥವಾ "ದೃಢವಾಗಿ ಹೇಳುತ್ತೇನೆ" ಎಂದು ಹೇಳಲು ಅನುಮತಿಸುತ್ತವೆ ಯಾಕೆಂದರೆ ಅವೆರಡರ ನಡುವೆ ಯಾವದೇ ಕಾನೂನಾತ್ಮಕ ವ್ಯತ್ಯಾಸವಿರುವದಿಲ್ಲ. ಒಂದು ವೇಳೆ ಒಬ್ಬನು "ನಾನು ದೃಢವಾಗಿ ಹೇಳುತ್ತೇನೆ" ಎಂದು ಹೇಳಿದ ಬಳಿಕ ನ್ಯಾಯಾಲಯದಲ್ಲಿ ಸುಳ್ಳನ್ನು ಹೇಳಿದೆ, ಆತನು "ನಾನು ಶಾಸ್ತ್ರೋಕ್ತವಾಗಿ ಪ್ರಮಾಣ ಮಾಡುತ್ತೇನೆ" ಎಂದು ಹೇಳಿದ್ದರೆ ಆಗುತ್ತಿದ್ದ ರೀತಿಯಲ್ಲಿಯೇ ಈಗಲೂ ಪ್ರಮಾಣ ಭಂಗಪಡಿಸಿದ ದೋಷಕ್ಕೆ ಒಳಗಾಗುತ್ತಾನೆ.

ಒಬ್ಬ ಕ್ರೈಸ್ತನು ತನ್ನ ಮಾತನ್ನು ಕಾಪಾಡಿಕೊಳ್ಳುವವನು ಎಂಬದಾಗಿ ಪರಿಚಿತನಾಗಿರಬೇಕು. ಹೇಗೂ, ಕಾನೂನಿಗೆ ಸಂಬಂಧಿಸಿದಂತೆ ನಡೆದುಕೊಳ್ಳುವ ವೇಳೆ, ಒಬ್ಬನ ಬರೀ ಮಾತುಗಳು ಸಾಕಾಗುವದಿಲ್ಲ; ಒಂದು ಆಣೆಯನ್ನು ಮಾಡತಕ್ಕದ್ದು. ಒಬ್ಬನು ನಿಗದಿ ಪಡಿಸಿದ ವೇತನ ಹಾಗೂ ಶರತ್ತುಗಳಿಗೆ ಕೆಲಸವೊಂದನ್ನು ಮಾಡುವದಾಗಿ ವಾಗ್ದಾನ ಮಾಡಿದರೂ, ಆತನು ತನ್ನ ಮಾತನ್ನು ಕಾಪಾಡಿಕೊಳ್ಳಬೇಕು. 1984ರಲ್ಲಿ ಅಮೆರಕದಲ್ಲಿನ ರಾಷ್ಟ್ರೀಯ ವಾಯು ವಾಹನದಟ್ಟನೆಯ ನಿಯಂತ್ರಕರು ಉತ್ತಮ ಸಂಬಳಗಳು ಮತ್ತು ಕೆಲಸದ ಸ್ಥಿತಿಗಳ ಕಾರಣದಿಂದ ಮುಷ್ಕರವನ್ನು ಮಾಡುವದಕ್ಕೆ ನಿರ್ಧರಿಸಿದರು. ಅವರ ಕೆಲಸದ ಒಪ್ಪಂದಗಳು ಮತ್ತು ದೇಶದ ಕಾನೂನುಗಳು ಆ ರೀತಿಯಾಗಿ ಮಾಡುವದನ್ನು ಅಪರಾಧವೆಂದಾಗಿಸಿದ್ದವು. ಕಾನೂನಿನ ಕಾರಣ ಮತ್ತು ಸಾರ್ವಜನಿಕ ಸುರಕ್ಷತೆಯ ಅಗತ್ಯದ ಕಾರಣದಿಂದ, ಅಧ್ಯಕ್ಷನು ಮುಷ್ಕರಕ್ಕೆ ಹೋಗುವ ಎಲ್ಲರನ್ನು ಉದ್ಯೋಗದಿಂದ ಕಿತ್ತು ಹಾಕುವೆನೆಂದು ಎಚ್ಚರಿಸಿದನು. ಆತನು ಹಾಗೆ ಮಾಡುವನೆಂದು ಕೆಲಸಗಾರರು ನಂಬಲಿಲ್ಲ, ಆದರೆ ಆತನು ಅವರೆಲ್ಲಾ ಕೆಲಸವನ್ನು ಮುಂದುವರೆಸುವ ಆಣೆಯಲ್ಲಿದ್ದಾರೆಂದು ಘೋಷಿಸಿದನು ಮತ್ತು ಆ ಆಣೆಯನ್ನು ಗೌರವಿಸದವರನ್ನು ಕೆಲಸದಿಂದ ಕಿತ್ತು ಹಾಕಿದನು.

## ದೇವರ ವಾಕ್ಯವು ಸತ್ಯವಾದದ್ದು ಮತ್ತು ಮಾರ್ಪಡಲಾರದ್ದು (6:18)

ದೇವರ ವಾಕ್ಯವು ಯಾವಾಗಲೂ ಸತ್ಯ; ಅದರ ಆಧಾರದಲ್ಲಿ ಆತನು ನಿತ್ಯವಾದ ನಿಷ್ಠಾವಂತಿಕೆಯ ಕುರಿತು ದೃಢನಿಶ್ಚಯದಿಂದಿರಬಹುದು. ಆತನು ಸುಳ್ಳಾಡಲಾರನು ಅಥವಾ ನಮಗೆ ಮಾಡಿದ ತನ್ನ ವಾಗ್ದಾಮಗಳ ವಿಷಯದಲ್ಲಿ ಹಿಂದಕ್ಕೆ ಹೋಗಲಾರನು. ನಾವು ಕ್ಷಮಾಪಣೆಯ ವಿಷಯದಲ್ಲಿ ದೇವರ ಶರತ್ತುಗಳಿಗೆ ಕೆಲವೊಂದನ್ನು ಹೊರತು ಪಡಿಸುವದಕ್ಕೆ ಬಯಸಬಹುದು, ಆದರೆ ಅದು ನಮ್ಮ ವಿಶೇಷಾಧಿಕಾರಕ್ಕೆ ಒಳಪಟ್ಟದ್ದಲ್ಲ. ಆತನು ಮುಂದಿಟ್ಟಿರುವ ಕ್ಷಮಾಪಣೆಯ ಶರತ್ತುಗಳ ಸಾರುವದು ಮತ್ತು ಆತನ ವಾಕ್ಯವು ಸತ್ಯವಾಗಿದೆಯೆಂದು ಅದರ ಅವಲಂಭಿಸಿದವರಾಗಿರುವದು ಇಷ್ಟೆ ನಮ್ಮ ಕರ್ತವ್ಯವಾಗಿದೆ.

ನರಕದಲ್ಲಿದ್ದ *dives*ನು ("ಐಶ್ವರ್ಯವಂತನು" ಎಂಬುದಕ್ಕೆ ಲ್ಯಾಟಿನ್ ಪದ) ಭೂಮಿಯಲ್ಲಿ ಈಗಲೂ ಜೀವಿಸುತ್ತಿದ್ದ ತನ್ನ ಸಹೋದರರಿಗೆ ವಿನಾಯತಿಯ ಕರುಣೆಯನ್ನು ತೋರಿಸಬೇಕೆಂದು ಮೊರೆಯಿಟ್ಟನು (ಹೀಗೆ ತಾನು ಸ್ವತಃ ಒಂದು ಮಧ್ಯಸ್ಥಿಕೆಯ ಸ್ಥಿತಿಯಲ್ಲಿದ್ದೇನೆಂದು ಪರೋಕ್ಷವಾಗಿ ಸೂಚಿಸಿದನು). ಅದಕ್ಕೆ ಪ್ರತ್ಯುತ್ತರವು ತತ್ಪರಿಣಾಮವಾಗಿ ಹೀಗಿತ್ತು, "ಮೋಶೆ ಮತ್ತು ಪ್ರವಾದಿಗಳ ಮೂಲಕ ಕೊಡಲ್ಪಟ್ಟಿರುವ ದೇವರ ಪ್ರಕಟಗೊಂಡ ವಾಕ್ಯವು ಸಾಕಾದದ್ದಾಗಿದೆ. ನೀನು ಮಾಡುವದಕ್ಕೆ ವಿಫಲನಾದಂತೆ, ಬಡವರಿಗೆ ಕರುಣೆಯನ್ನು ತೋರಿಸುವಂತವರಾಗಬೇಕೆಂದು ನಿನ್ನ ಸಹೋದರರಿಗೆ ಸಾಕಷ್ಟು ಎಚ್ಚರಿಸಲಾಗಿರುತ್ತದೆ. ಅವರ ರೀತಿಯಲ್ಲಿ ಮೊಂಡರಾದ ಪಾಪಿಗಳು ಒಬ್ಬನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟಿದ್ದಾನೆಂದು ತಿಳಿದಾಗ್ಯೂ

ಮಾರ್ಪಡುವವರಲ್ಲ. ಅವರು ನಿರೀಕ್ಷೆಯನ್ನು ದಾಟಿ ಹೋಗಿದ್ದಾರೆ, ಆದ್ದರಿಂದ ಅವರಿಗೋಸ್ಕರ ಯಾವದಾದರೂ ವಿಶೇಷವಾದ ಅದ್ಭುತವನ್ನು ಮಾಡುವದು ಸಮಯವನ್ನು ವ್ಯರ್ಥ ಮಾಡಿದಂತೆಯೇ" (ಲೂಕ 16:27-31).

## ಲಂಗರು ಮತ್ತು ಇತರ ಸಂಕೇತಗಳು (6:19)

ಎರಡನೆಯ ಶತಮಾನದ ಅಂತ್ಯದ ವೇಳೆಗೆ, ಲಂಗರಿನ ಲಾಂಛನವು ಕ್ರೈಸ್ತ ನಿರೀಕ್ಷೆಗೆ ಸಂಕೇತವಾಗಿತ್ತು, ಅದರ ಜೊತೆಗೆ ಪಾರಿವಾಳವು ಪವಿತ್ರಾತ್ಮನಿಗೆ ಸಂಕೇತವಾಗಿತ್ತು. "ಮೀನು" ಎಂಬುದಕ್ಕಿರುವ ಗ್ರೀಕ್ ಪದಗಳನ್ನು (ἰχθύς, *ichthus*) ಬಳಸಿ ಮೀನು ನಂಬಿಕೆಯ ಒಂದು ಚಿತ್ರಣವಾಯಿತು, ಅದು ಅಕ್ಷರಶಃ "ಯೇಸು ಕ್ರಿಸ್ತ ದೇವರು ಮಗನು ರಕ್ಷಕನು" ಎಂದು ಸೂಚಿಸುವ ಪ್ರಥಮಾಕ್ಷರಿ ಆಗಿತ್ತು.[50] ನಿರೀಕ್ಷೆಯನ್ನು ಪ್ರತಿನಿಧಿಸುವ ಲಂಗರು ಅನೇಕ ಸಾರಿ ಆದಿ ಕ್ರೈಸ್ತರ ಸಮಾಧಿಗಳ ಮೇಲಿನ ಕೆತ್ತನೆಗಳಲ್ಲಿ ಕಂಡು ಬರುತ್ತಿತ್ತು. ದೇವರ ವಾಕ್ಯದಲ್ಲಿ ವಿಶ್ವಾಸವಿಟ್ಟಿರುವವರಿಗೆ ಅಂತಹ ಸಂಕೇತಗಳ ಅನಾವಶ್ಯಕ. ಕ್ರಿಸ್ತನು ನಮಗೆ ಎರಡು ಸಂಕೇತಗಳನ್ನು ಕೊಟ್ಟನು – ದೀಕ್ಷಾಸ್ನಾನ ಮತ್ತು ಕರ್ತನ ಭೋಜನ. ಒಬ್ಬನು "ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವ" ವೇಳೆ ಪಾಪದಿಂದ ರಕ್ಷಣೆಯು ವಾಸ್ತವದಲ್ಲಿ ಸಂಭವಿಸುವದಕ್ಕೆ ದೀಕ್ಷಾಸ್ನಾನವು ಸಂಕೇತವಾಗಿದೆ. ಪೌಲನು ಈ ಸತ್ಯದ ಬಗ್ಗೆ ರೋಮಾ 6:3ರಲ್ಲಿ ರೋಮಾಪುರದವರಿಗೆ ಜ್ಞಾಪಕ ಪಡಿಸಿದನು (ನೋಡಿರಿ ಗಲಾತ್ಯ 3:26, 27); ಅದೇ ಪಾಠವನ್ನು ಪೇತ್ರನು 1 ಪೇತ್ರ 3:20, 21ರಲ್ಲಿ ಪರೋಕ್ಷವಾಗಿ ತಿಳಿಸುತ್ತಾನೆ. ಕರ್ತನ ಭೋಜನದಲ್ಲಿ ಹಂಚಿಕೊಳ್ಳಲ್ಪಡುವ ರೊಟ್ಟಿ ಮತ್ತು ಪಾತ್ರೆಗಳು ನಾವು ಆತನ ದೇಹ ಮತ್ತು ರಕ್ತದಲ್ಲಿ ಪಾಲುಗಾರರಾಗುವದಕ್ಕೆ ಸಂಕೇತವಾಗಿರುತ್ತವೆ (1 ಕೊರಿಂಥ 10:16). ರಾತ್ರಿ ಭೋಜನದಲ್ಲಿ ಪಾಲುಗಾರರಾಗುವ ಮೂಲಕ, ನಾವು ಕ್ರಿಸ್ತನ ಮರಣ ಮತ್ತು ಆತನ ಎರಡನೆಯ ಬರೋಣವನ್ನು ನಾವು ಎದುರುನೋಡುತ್ತಿದ್ದೇವೆಂಬುದನ್ನು ಸಾರುವವರಾಗಿದ್ದೇವೆ (1 ಕೊರಿಂಥ 11:26). ಇತರೆ, ಅನಧಿಕೃತ ಸಂಕೇತಗಳನ್ನು ಸೇರ್ಪಡೆಗೊಳಿಸಿದರೆ ನಮಗೆ ಕೊಡಲ್ಪಟ್ಟಿರುವ ಎರಡು ಸಂಕೇತಗಳ ಮಹತ್ವಪೂರ್ಣತೆಯನ್ನು ತಗ್ಗಿಸಿದಂತಾಗುವದು. ಖಂಡಿತವಾಗಿಯೂ, ಮನುಷ್ಯನ ಯೋಚನೆಯ ಮೂಲಕ ದೇವರ ಜ್ಞಾನವನ್ನು ವಿಸ್ತಾರಗೊಳಿಸುವ ಅಗತ್ಯವಿರುವದಿಲ್ಲ.

ಇಂದು ಶಿಲುಬೆಯನ್ನು ಧರಿಸಿಕೊಳ್ಳುವದಕ್ಕೆ ಒಂದು ಲಂಗರನ್ನು ಧರಿಸಿಕೊಳ್ಳುವದಕ್ಕಿಂತಲೂ ಹೆಚ್ಚಿನ ಮೌಲ್ಯವೇನೂ ಇರುವದಿಲ್ಲ. ಈ ಸಂಕೇತವು ಆತನ ಜೀವಿತವನ್ನು ಯಾವದೋ ಒಂದು ರೀತಿಯಲ್ಲಿ "ಮಾಂತ್ರಿಕ ಶಕ್ತಿ" ಕೊಡುತ್ತದೆಂದು ಯೋಚಿಸಲಾರಂಭಿಸಿದರೆ ಈ ಆಚಾರವು ವಾಸ್ತವದಲ್ಲಿ ಹೆಚ್ಚಿನ ಹಾನಿಯನ್ನು ಉಂಟು ಮಾಡುತ್ತದೆ. ಸಂಕೇತಗಳು ಕರ್ತನಲ್ಲಿ ನಮಗಿರುವ ದೃಢವಾದ ನಂಬಿಕೆಯನ್ನು ಜ್ಞಾಪಿಸುವದನ್ನು ಹೊರತು ಪಡಿಸಿದರೆ ಅವುಗಳು ಅರ್ಥಹೀನವಾದವುಗಳಾಗಿವೆ.

ನಾವು ಕ್ರಿಸ್ತನಲ್ಲಿ ಹೊಂದಿರುವ ನಿರೀಕ್ಷೆಯೇ ನಮ್ಮ ಲಂಗರು ಆಗಿದೆ. ಒಂದು ಹಳೆಯ ಸಂಕೀರ್ತನೆಯು ಕಥೆಯನ್ನು ಹೇಳುತ್ತದೆ:

> ನಮಗೊಂದು ಲಂಗರು ಉಂಟು ಅದು ಅಲೆಗಳು ಉರುಳುವಾಗ
> ಆತ್ಮವನ್ನು ದೃಢವಾಗಿ ಮತ್ತು ನಿಶ್ಚಯವಾಗಿ ನೆಲೆಗೊಳಿಸುವದು,
> ಕದಲಲಾರದ ಬಂಡೆಗೆ ಅಂಟಿಕೊಂಡು,
> ರಕ್ಷಕನ ಪ್ರೀತಿಯಲ್ಲಿ ನೆಲೆಯಾಗಿ ಮತ್ತು ಆಳವಾಗಿ ನಿಂತಿರುತ್ತದೆ.[51]

ಅನೇಕ ಸಾರಿ ಅವಿಶ್ವಾಸಿಗಳಿಂದ ಉಂಟು ಮಾಡಲ್ಪಡುವ ಬಿರುಗಾಳಿಗಳ ಮಧ್ಯದಲ್ಲಿ ನಮ್ಮ ನಂಬಿಕೆ ಮತ್ತು ನಿರೀಕ್ಷೆಗಳು ನಮ್ಮನ್ನು ಅಲುಗಾಡದಂತೆ ಕಾಯುವವು. ಇಬ್ರಿಯರಿಗೆ ಪತ್ರಿಕೆಯ ಲೇಖಕನು ಲಂಗರಿನ ರೂಪಕವನ್ನು ಇನ್ನಷ್ಟು ಮುಂದಕ್ಕೆ ವಿಸ್ತರಿಸಲಿಲ್ಲ; ಕ್ರೈಸ್ತರಿಗೆ ಬಿರುಗಾಳಿಯಲ್ಲಿ ಭದ್ರವಾದ ಲಂಗರು ಕಂಬವಿರುತ್ತದೆಂಬದನ್ನು ಆತನು ದೃಷ್ಟಾಂತಗೊಳಿಸುತ್ತಿದ್ದಾನಷ್ಟೆ.

## ನಮ್ಮ ನಿರೀಕ್ಷೆಯ ವಿಶ್ರಾಂತಿ ಸ್ಥಳ (6:20)

ನಮ್ಮ ನಿರೀಕ್ಷೆಯು ನಮ್ಮ ಮಾರ್ಗಶೋಧಕನಾದ ಯೇಸುವಿನ ಮೇಲೆ ನೆಲೆಗೊಂಡಿರಬೇಕು. ಆತನು ನಮಗೋಸ್ಕರ ಮಾರ್ಗವನ್ನು ಸಿದ್ಧಗೊಳಿಸುವದಕ್ಕೆ ಮುಂದಾಗಿ ಹೋಗಿದ್ದಾನೆ. ಬೇರೆ ಎಲ್ಲಕ್ಕಿಂತಲೂ ಮೇಲಾಗಿ ನಾವು ಆತನನ್ನು ದೃಷ್ಟಿಸಬೇಕು (12:1, 2). "ನಮ್ಮ ಹಠಮಾರಿ ಚಿತ್ತಗಳು, ಆತನಿಗೆ ನಮ್ಮ ಜೀವಿತಗಳನ್ನು ಕೊಡುವದಕ್ಕೆ ನಿರಾಕರಿಸುವಿಕೆ ಇವುಗಳನ್ನು ಹೊರತು ಪಡಿಸಿ ನಮ್ಮ ಹಾಗೂ ದೇವರ ನಡುವೆ ಬೇರೆ ಇನ್ನೇನೂ ನಿಲ್ಲುವದಿಲ್ಲ."[52] ಪರಲೋಕದೊಳಕ್ಕೆ ಹೋಗುವ ಮೂಲಕ, ಆತನು ನಮಗೆ ಹಿಂಬಾಲಿಸುವದನ್ನು ಸಾಧ್ಯಗೊಳಿಸಿದ್ದಾನೆ. ನಮ್ಮ ನಿರೀಕ್ಷೆಯು ಭೂಲೋಕದ ಸಂಗತಿಗಳಿಗಿಂತಲೂ ಹೆಚ್ಚಾಗಿ ಪರಲೋಕದ ಮೇಲೆ ಇಡಲ್ಪಟ್ಟಿದೆಯೋ? ಕೊಲೊಸ್ಸೆ 3:1-4ರಲ್ಲಿ ನಮಗೆ "ಮೇಲಿನವುಗಳ" ಮೇಲೆ ಮನಸ್ಸಿಡಿರಿ ಎಂದು ಬುದ್ಧಿ ಹೇಳಲ್ಪಟ್ಟಿದೆ. ಕ್ರಿಸ್ತನಲ್ಲಿ ಮರಣಿಸಿರುವ ನೀತಿವಂತರು ಅಲ್ಲಿ ಮಹಿಮೆಯೊಂದಿಗೆ ಪ್ರತ್ಯಕ್ಷರಾಗುವರು. ಕ್ರಿಸ್ತನು ಈಗಾಗಲೆ ಅಲ್ಲಿರುವದರೊಂದಿಗೆ, ನಮ್ಮ ನಿರೀಕ್ಷೆಯು ಅಲ್ಲಿಯೇ ಇರತಕ್ಕದ್ದು.

---

### ಅಡಿಟಿಪ್ಪಣಿಗಳು

[1]Philip Edgcumbe Hughes, *A Commentary on the Epistle to the Hebrews* (Grand Rapids, Mich.: Wm. B. Eerdmans Publishing Co., 1977), 195, n. 33. [2]R. C. H. Lenski, *The Interpretation of the Epistle to the Hebrews and of the Epistle of James* (Columbus, Ohio: Wartburg Press, 1946), 176. [3]F. F. Bruce, *The Epistle to the Hebrews,* The New International Commentary on the New Testament (Grand Rapids, Mich.: Wm. B. Eerdmans Publishing Co., 1964), 112. [4]James T. Draper, Jr., *Hebrews, the Life That Pleases God* (Wheaton, Ill.: Tyndale House Publishers, 1976), 140. [5]Donald Guthrie, *The Letter to the Hebrews: An Introduction and Commentary*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1983), 137. [6]Gareth L. Reese, *A Critical and Exegetical Commentary on the Epistle to the Hebrews* (Moberly, Mo.: Scripture Exposition Books, 1992), 84, n. 12. [7]9:14ರ ಸನ್ನಿವೇಶವು ಧರ್ಮಶಾಸ್ತ್ರದ ಅಡಿಯಲ್ಲಿ ಮಾಡಿದ ಕೆಲಸಗಳ ಕಡೆಗೆ ಬೆರಳು ತೋರಿಸುತ್ತದೆ. ಅಂಥ ಕೆಲಸಗಳು ಶರೀರವನ್ನು ಶುದ್ಧಮಾಡುವದಕ್ಕೆ ಅಥವಾ ಪವಿತ್ರಗೊಳಿಸುವದಕ್ಕೆ ಸಾಧ್ಯವಾಗಲಿಲ್ಲ. ವಾಕ್ಯವು "ಧರ್ಮಶಾಸ್ತ್ರದ ಕಡೆಯಿಂದ ಕ್ರಿಸ್ತನ ಕಡೆಗೆ ತಿರುಗಿಕೊಳ್ಳಿರಿ" ಎಂದು ಸೂಚಿಸುತ್ತದೆ. [8]Simon J. Kistemaker, *Exposition of the Epistle to the Hebrews,* New Testament Commentary (Grand Rapids, Mich.: Baker Book House, 1984), 250. [9]ಇಷ್ಟೊಂದು ಆದಿ ಕಾಲದಲ್ಲಿ ಮತಾಂತರಗೊಳಿಸುವ ದೀಕ್ಷಾಸ್ನಾನವು ಅಸ್ತಿತ್ವದಲ್ಲಿತ್ತೆಂಬುದಕ್ಕೆ ಯಾವದೇ ನಿಜವಾದ ಪುರಾವೆಗಳಿಲ್ಲ. [10]Bruce, 114–16.

[11]Josephus *Antiquities* 18.5.2. [12]Kistemaker, 155. [13]Neil R. Lightfoot, *Jesus Christ Today: A Commentary on the Book of Hebrews* (Grand Rapids, Mich.: Baker Book House, 1976), 122. [14]James Burton Coffmanನು ಹೊಸ ಒಡಂಬಡಿಕೆಯಲ್ಲಿ ಏಳು ದೀಕ್ಷಾಸ್ನಾನಗಳ ಪಟ್ಟಿ ಮಾಡುತ್ತಾನೆ: ಒಂದು ಪವಿತ್ರಾತ್ಮನ ದೀಕ್ಷಾಸ್ನಾನ ಮತ್ತು ಇನ್ನೊಂದು ಬೆಂಕಿಯಿಂದ ದೀಕ್ಷಾಸ್ನಾನ (ಮತ್ತಾಯ 3:11); ಯೋಹಾನನ ದೀಕ್ಷಾಸ್ನಾನ (ಮತ್ತಾಯ 3:16); ಮೋಶೆಯ ದೀಕ್ಷಾಸ್ನಾನ (1 ಕೊರಿಂಥ 10:2); ಶ್ರಮೆಗಳ ದೀಕ್ಷಾಸ್ನಾನ (ಲೂಕ 15:30); ಸತ್ತವರಿಗಾಗಿ

ದೀಕ್ಷಾಸ್ನಾನ (1 ಕೊರಿಂಥ 15:29); ಮತ್ತು ಮಹಾ ಆದೇಶದ ದೀಕ್ಷಾಸ್ನಾನ (ಮತ್ತಾಯ 28:18-20). (James Burton Coffman, *Commentary on Hebrews* [Austin, Tex.: Firm Foundation Publishing House, 1971], 111.) [15]2:4ರ ಮೇಲಿನ ಚರ್ಚೆಯನ್ನು ನೋಡಿರಿ. [16]Bruce, 118. [17]ಅಪೊಸ್ತಲರ ಕೃತ್ಯಗಳು 18:21; ನೋಡಿರಿ 1 ಕೊರಿಂಥ 16:7; ಯಾಕೋಬ 4:15. Josephus *Antiquities* 20.11.3; George Wesley Buchanan*, To the Hebrews: Translation, Comment, and Conclusions*, The Anchor Bible, vol. 36 (Garden City, N.Y.: Doubleday, 1972), 105. [18]Arthur W. Pink, *An Exposition of Hebrews* (Grand Rapids, Mich.: Baker Book House, 1954), 286. [19]Draper, 149. [20]Hughes, 206.

[21]Moses Stuart, *A Commentary on the Epistle to the Hebrews* (London: William Tegg & Co., 1856), 372. [22]Guthrie, 142. [23]Lightfoot, *Jesus Christ Today*, 124. [24]Neil R. Lightfoot, *Everyone's Guide to Hebrews* (Grand Rapids, Mich.: Baker Books, 2002), 8. [25]Albert Barnes, *Notes on the* New *Testament: Hebrews to Jude* (London: Blackie & Son, 1884-85; reprint, Grand Rapids, Mich.: Baker Book House, 1985), 134. [26]Lenski, 186. [27]Robert Milligan, *A Commentary on the Epistle to the Hebrews*, New Testament Commentaries (Cincinnati: Chase and Hall, 1876; reprint, Nashville: Gospel Advocate Co., 1975), 223. [28]Erasmusನು ಆರನೆಯ ಶತಮಾನದಲ್ಲಿ ಅದಕ್ಕೆ ಈ ಭಾವಾನುವಾದವನ್ನು ನೀಡಿದನು. (Lightfoot, *Jesus Christ Today*, 125.) [29]"ಇಲ್ಲಿ ಲೇಖಕನು 'ಭ್ರಷ್ಟರಾದವರನ್ನು' ಬಣ್ಣಿಸುವದಕ್ಕೆ ಪಟ್ಟಿ ಮಾಡಿರುವ ಸಂಗತಿಗಳು ಹೆಚ್ಚು ಖಂಡಿತವಾಗಿ ಎಲ್ಲಾ ನಿಜ ಕ್ರೈಸ್ತರಿಗೆ ವಿಶಿಷ್ಟವಾಗಿರುವ ಗುಣಗಳನ್ನು ಸೂಚಿಸುತ್ತವೆ" (Gerald F. Hawthorne, "*Hebrews*," in *The New International Bible Commentary*, ed. F. F. Bruce, H. L. Ellison, and G. C. D. Howley [Grand Rapids, Mich.: Zondervan Publishing House, 1986], 1515). [30]"ಸೂಜೀಕಣ್ಣು" ಎಂಬುದು ಒಂದು ದೊಡ್ಡ ದ್ವಾರದೊಳಗಿರುವ ಚಿಕ್ಕದಾದ ಬಾಗಲು ಎಂಬ ವಿಚಾರವು ಬಹಳ ತಡವಾಗಿ ಮಧ್ಯಯುಗದಲ್ಲಿನ ಯೋಚನೆಯಾಗಿದೆ.

[31]ನರಹತ್ಯೆ, ಸುಳ್ಳಾಡುವದು ಇತ್ಯಾದಿಗಳಂತಹ ಯಾವದೇ ನಿರ್ದಿಷ್ಟವಾದ ಪಾಪವು ಕ್ಷಮಾಪಣೆಯನ್ನು ಮೀರಿದ್ದಲ್ಲವಾದ್ದರಿಂದ, "ದೂಷಣೆಯು" ಪಶ್ಚಾತ್ತಾಪವನ್ನು ತಡೆಯುವ ಒಂದು ಹೃದಯದ ಸನ್ನಾಹವನ್ನು ಒಳಗೊಂಡಿರತಕ್ಕದ್ದು. [32]ನೋಡಿರಿ ಮತ್ತಾಯ 3:11, 12; 13:40-42, 50; 18:8; 25:41; ಮಾರ್ಕ 9:43, 48; ಲೂಕ 3:16, 17; ಇಬ್ರಿಯ 10:27; 12:29; 2 ಪೇತ್ರ 3:10-13; ಯೂದನು 7, 23; ಪ್ರಕಟನೆ 14:10; 20:10, 14, 15; 21:8; ನೋಡಿರಿ 2 ಥೆಸಲೋನಿಕ 1:7. [33]Lightfoot, *Jesus Christ Today*, 128. [34]Lenski, 195. [35]Pink, 337. [36]Bruce, 129. [37]Lightfoot, *Jesus Christ Today*, 134; Philo *The Sacrifices of Abel and Cain* 29.94-96; *Allegorical Interpretation* 3.72-73. [38]Lightfoot, *Everyone's Guide to Hebrews*, 83. [39]Adolf Deissmann, *Bible Studies,* trans. Alexander Grieve (Edinburgh: T. & T. Clark, 1901), 104-9. [40]Lenski, 203.

[41]ಆಶ್ರಯದ ಸ್ಥಳವು ಆಗಲೂ ಒಂದು ಸೆರೆಮನೆಯಂತಿರುವದು; ಯಾಕೆಂದರೆ ನರಹಂತಕನು ಆ ಸ್ಥಳವನ್ನು ತೊರೆದು ಹೋದರೆ, ಆತನು "ರಕ್ತಕ್ಕೆ ಮುಯ್ಯಿ ತೀರಿಸುವವನಿಂದ" ಕೊಲ್ಲಲ್ಪಡಬಹುದಿತ್ತು. LXXನಲ್ಲಿ ಧರ್ಮೋಪದೇಶಕಾಂಡ 4:42 ಮತ್ತು ಯೆಹೋಶುವ 20:6ರೊಳಗೆ "ಸೆರೆಮನೆ" ಎಂಬ ಅರ್ಥ ಬರುವಂಥ ರೂಪದ ಪದವೊಂದು "ಆಶ್ರಯಕ್ಕಾಗಿ ಓಡಿ ಹೋದನು" ಎಂಬದಕ್ಕೆ ಬಳಸಲ್ಪಟ್ಟಿದೆ (ASV). (Reese, 100, n. 78.) [42]Quoted in Lightfoot, *Jesus Christ Today*, 131, n. 27. [43]Hawthorne, 1517. [44]Draper, 174. Craig R. Koesterನು ಹೇಳಿದ್ದೇನೆಂದರೆ ಓಟವನ್ನು ಗೆಲ್ಲಬೇಕೆಂಬುದಕ್ಕಾಗಿ ಗುಂಪಿನಿಂದ ಕಳಚಿಕೊಂಡು ಹೋಗುವ ಒಂದು ಮುಂದುವರೆದ ಸೈನಿಕರ ಗುಂಪು ಅಥವಾ ಹಡಗುಗಳು, ಅಥವಾ ಒಬ್ಬ ಓಟಗಾರನಿಗೆ ಸಹ ಅನ್ವಯವಾಗಬಹುದಾಗಿದೆ ಎಂಬದೆ. (Craig R. Koester, *Hebrews: A New Translation with Introduction and Commentary*, The Anchor Bible, vol. 36 [New York: Doubleday, 2001], 330.) [45]Bruce, 132, n. 83. [46]ನೋಡಿರಿ ರೋಮಾ 6:3-5; 1 ಕೊರಿಂಥ 12:13; ಎಫೆಸ 5:26; ಕೊಲೊಸ್ಸೆ 2:11, 12; ತೀತನಿಗೆ 3:5; ಇಬ್ರಿಯ 10:22; 1 ಪೇತ್ರ 3:21. [47]Moses E. Lard, *Commentary on Paul's Letter to Romans* (Lexington, Ky.: N.p., 1875; reprint, Delight, Ark.: Gospel Light Publishing Co., n.d.), 386. [48]Pink, 293. [49]William Barclay, *The Letter to the Hebrews*, 2d ed., The Daily Study Bible Series (Philadelphia: Westminster Press, 1957), 60.

[50]ಈ ಪ್ರಥಮಾಕ್ಷರಿಯು ಪ್ರತಿನಿಧಿಸುವ ಪದಗಳು ಯಾವವೆಂದರೆ Ἰησοῦς (*Iēsous*, "Jesus"), Χριστός (*Christos*, "ಕ್ರಿಸ್ತನು"), Θεός (*Theos*, "ದೇವರು"), υἱός (*huios*, "ಮಗನು"), and σωτήρ (*sōtēr*, "ರಕ್ಷಕ"). [51]Priscilla J. Owens, "We Have an Anchor," *Songs of Faith and Praise*, comp. and ed. Alton H. Howard (West Monroe, La.: Howard Publishing Co., 1994). [52]Draper, 174.